ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷರೇ, ನಾನು ಬೆಳಗಾವಿ ಮಹಾನಗರ ಪಾಲಿಕೆಯ ಬಗ್ಗೆ ಪ್ರಸ್ತಾಪ ಮಾಡಿದೆ. ಮತ್ತು ಮರಾಠಿ ಧ್ವಜದ ಬಗ್ಗೆ ಹಾಗೂ ಅಲ್ಲಿ ವಿಭಾಗ-ವಿಭಾಗಗಳನ್ನು ಬದಲಾವಣೆ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಲಿಲ್ಲ. ಇದೊಂದು ಕೆಟ್ಟ ಮಸೂದೆ, ವಿಕೃತ ಮಸೂದೆ, ಆದ್ದರಿಂದ ಈ ಮಸೂದೆಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಪರವಾಗಿ).—೧೯೯೦ರ ಕರ್ನಾಟಕ ಮಹಾನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ, "೧೯೯೦ನೇ ಇಸವಿಯ ಕರ್ನಾಟಕ ಮಹಾನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

(ಮುಂದುವರಿದುದು)

† ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ, ಮಾಡಿದಂಥ ಭಾಷಣಕ್ಕೆ ವಂದನಾರ್ಪಣೆ ಮಾಡತಕ್ಕಂಥ ಸಂದರ್ಭದಲ್ಲಿ ನನ್ನ ಅನಿಸಿಕೆಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮೊನ್ನೆ ಮಾಡಿದಂಥ ನನ್ನ ಭಾಷಣವನ್ನು ಮುಂದುವರೆಸುತ್ತಾ, ಈಗಾಗಲೇ ರಾಜ್ಯಪಾಲರು ತಮ್ಮ ಭಾಷಣದಲ್ಲಿ "ಸರ್ಕಾರಿ ಜಮೀನುಗಳ ಅನಧಿಕೃತ ಸ್ವಾಧೀನಾನುಭವವನ್ನು ಸಕ್ರಮಗೊಳಿಸಲು ನನ್ನ ಸರ್ಕಾರವು ತತ್ವಶಃ ಒಂದು ಪ್ರಜ್ಞಾಪೂರ್ವಕ ನಿರ್ಣಯವನ್ನು ತೆಗೆದುಕೊಂಡಿದೆ" ಎಂದು ತಿಳಿಸಿದ್ದಾರೆ. ಈ ರಾಜ್ಯದ ರೈತರ ಬಹು ದಿನಗಳ ಬೇಡಿಕೆಗಳಲ್ಲಿ ಒಂದಾದ ಅಕ್ರಮಣ ಭೂಮಿಯನ್ನು ಒತ್ತುವರಿ ಭೂಮಿಯನ್ನು ಅಥವಾ ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸುವಂಥದ್ದು. ಸುಮಾರು ೧೯೭೮ರ ಪೂರ್ವದಲ್ಲಿ ರಾಜ್ಯದಲ್ಲಿ ಯಾರು ಆಕ್ರಮಣ ಭೂಮಿಯನ್ನು, ಸರ್ಕಾರದ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಅದನ್ನು ಕೃಷಿಗೆ ಉಪಯೋಗಿಸುತ್ತಿದ್ದರು, ಆ ಭೂಮಿಯನ್ನು ಸಕ್ರಮಗೊಳಿಸುವಂಥ ವ್ಯವಸ್ಥೆ ಇತ್ತು. ಅದರ ನಂತರ ಅಧಿಕಾರಕ್ಕೆ ಬಂದಂಥ ಜನತಾ ಪಕ್ಷವಾಗಲಿ ಅಥವಾ ಜನತಾ ದಳದ ಸರ್ಕಾರವಾಗಲಿ ಈ ಒಂದು ಅಕ್ರಮಣ ಭೂಮಿಯನ್ನು ಸಕ್ರಮಗೊಳಿಸತಕ್ಕಂಥ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಲಿಲ್ಲ. ಈ ಸಂದರ್ಭದಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ವಿಚಾರವೆಂದರೆ, ಸುಮಾರು ಆರು ವರ್ಷಗಳಿಂದ ಈ ಅಕ್ರಮ ಭೂಮಿಯನ್ನು ಸಕ್ರಮಗೊಳಿಸುತ್ತೇವೆ ಎನ್ನುವಂಥ ಆಶ್ವಾಸನೆಯನ್ನು ಹಿಂದಿನ ಸರ್ಕಾರ ಕೊಟ್ಟಿತ್ತು.

ಆದರೆ ಈ ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವಂತಹ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿಲ್ಲ. ಸರ್ಕಾರ ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ಎಷ್ಟು ಜನ ರೈತರು ಭೂಮಿಯನ್ನು ಆಕ್ರಮಣ ಮಾಡಿಕೊಂಡಿದ್ದಾರೆ ಎಂಬ ವಿಚಾರಕ್ಕೆ ಹೋದಾಗ ಕೇವಲ ಬೆರಳೆಣಿಕೆಯಷ್ಟು ಜನ ಮಾತ್ರ ಆಕ್ರಮಣ ಮಾಡಿಕೊಂಡಿದ್ದಾರೆ ಎನ್ನುವಂಥ ವಿಚಾರ ನಾವು ಗ್ರಾಮ ಮಟ್ಟದಲ್ಲಿ ಹೋದಾಗ ಕಂಡುಬರುತ್ತದೆ. ಕಳೆದ ವಿಧಾನ ಸಭೆ ಅಧಿವೇಶನದ ಸಂದರ್ಭದಲ್ಲಿ ನಾನು ನನ್ನ ಕ್ಷೇತ್ರದ ಪ್ರತಿ ಗ್ರಾಮದಲ್ಲಿ ಎಷ್ಟು ಜನ ಆಕ್ರಮಣದಾರರು ಇದ್ದಾರೆ ಎಂದು ಹೆಸರು ಮತ್ತು ವಿಳಾಸ ಕೇಳಿದಾಗ ಕೇವಲ ಗ್ರಾಮದ ರಸ್ತೆ ಬದಿಯಲ್ಲಿ ರೈತರು ಯಾರು ಇದ್ದಾರೆ ಅವರ ಆಕ್ರಮಣವನ್ನು ಮಾತ್ರ ದಾಖಲು ಮಾಡಿಕೊಂಡಿದ್ದಾರೆಯೇ ಹೊರತು ನಿಜವಾಗಿ ಯಾರು ಗ್ರಾಮಾಂತರ ಪ್ರದೇಶದಲ್ಲಿದ್ದಾರೆ ಮತ್ತು ಯಾರು ಒಳನಾಡಿನಲ್ಲಿದ್ದಾರೆ ಅಂತಹವರ ಆಕ್ರಮಣವನ್ನು ದಾಖಲೆ ಮಾಡತಕ್ಕ ಕೆಲಸವನ್ನು ಮಾಡಿಲ್ಲ. ಅದೂ ಅಲ್ಲದೆ ರೈತರು ಮುಖ್ಯವಾಗಿ ಹೊಂದಿಕೊಂಡಿರತಕ್ಕ ಅವರ ಕುಂಕಿ ಹಕ್ಕು ಅಂದರೆ ಅವರ ಭೂಮಿಗೆ ಹೊಂದಿಕೊಂಡಿರತಕ್ಕ ಸ್ಥಳದಲ್ಲಿ ಕೃಷಿ ಕೆಲಸ ಮಾಡತಕ್ಕಂಥ ಕುಂಕಿ ಹಕ್ಕನ್ನು ಖಾಯಂ ಮಾಡಬೇಕೆಂಬ ವಿಚಾರ,

ಅದೂ ಅಲ್ಲದೆ, ಈ ಅರಣ್ಯ ಭೂಮಿಯನ್ನೂ ರೈತರು ಒತ್ತುವರಿ ಮಾಡಿಕೊಂಡಿದ್ದಾರೆ. ಈ ರೀತಿ ಒತ್ತುವರಿ ಮಾಡಿಕೊಂಡಿರುವ ಅರಣ್ಯ ಭೂಮಿಯನ್ನು ಸಕ್ರಮಗೊಳಿಸುವಂತಹ ವ್ಯವಸ್ಥೆ ಈತನಕ ಆಗಿಲ್ಲ. ಹಲವಾರು ಸಂದರ್ಭದಲ್ಲಿ ಈ ಬಗ್ಗೆ ಒತ್ತಾಯ ಮಾಡಿದರೂ ಸಹ ಪುನಃ ಪುನಃ ರೈತರು ಈ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳುವುದನ್ನು ತಕ್ಷಣ ನಿಲ್ಲಿಸಿ ಯಾರು ಈ ಹಿಂದೆ ಸರ್ಕಾರಿ ಭೂಮಿಯನ್ನು ಅರಣ್ಯ ಇಲಾಖೆಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಅವರ ಭೂಮಿಯನ್ನು ಸಕ್ರಮಗೊಳಿಸುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಮತ್ತೊಂದು ವಿಚಾರವನ್ನು ಹೇಳುತ್ತೇನೆ. ಈಗಾಗಲೇ ತಿಳಿಸಿದಂತೆ ಭೂ ಮಂಜೂರಾತಿ ಲ್ಯಾಂಡ್ ಗ್ರ್ಯಾಂಟ್ ವಿಚಾರ. ಸಾಮಾನ್ಯವಾಗಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಭೂಮಂಜೂರಾತಿಯನ್ನು ಮಾಡುತ್ತಾ ಇದ್ದಾರೆ. ಆದರೆ ಇದರಲ್ಲಿ ಒಂದು ವಿಪರ್ಯಾಸವನ್ನು ನಾವು ಕಾಣುತ್ತಿದ್ದೇವೆ. ಸಾಮಾನ್ಯವಾಗಿ ಭೂ ಮಂಜೂರಾತಿ ಮಾಡಬೇಕಾದರೆ ೧೯೮೭ನೇ ಇಸವಿಯಲ್ಲಿ ಒಂದು ಗ್ರಾಮದಲ್ಲಿ ೧೦ ಎಕರೆ ಭೂಮಿಯನ್ನು ಮಂಜೂರು ಮಾಡುವಂಥ ವ್ಯವಸ್ಥೆ ಇದ್ದರೆ, ಅದು ಲಭ್ಯತಾ ಪಟ್ಟಿಯಲ್ಲಿದ್ದರೆ ಅದೇ ೧೯೮೮ನೇ ಇಸವಿಯಲ್ಲಿ ಲಭ್ಯತಾ ಪಟ್ಟಿಯಲ್ಲಿ ಆ ಭೂಮಿ ಇರುವುದಿಲ್ಲ. ಅದೇ ೧೯೮೯ನೇ ಇಸವಿಯಲ್ಲಿ ಆ ಗ್ರಾಮದಲ್ಲಿ ಮತ್ತೆ ೧೦ ಎಕರೆ ಭೂಮಿ ಲಭ್ಯತಾ ಪಟ್ಟಿಯಲ್ಲಿ ಬರುತ್ತದೆ. ವರ್ಷ ವರ್ಷ ಈ ಲಭ್ಯತಾ ಪಟ್ಟಿಯಲ್ಲಿ ಭೂಮಿ ಏರಿಕೆ ಮತ್ತೆ ಮುಂದಿನ ವರ್ಷ ಲಭ್ಯತಾ ಪಟ್ಟಿಯಲ್ಲಿ ಭೂಮಿ ಇಲ್ಲದೇ ಇರುವ ವಿಪರ್ಯಾಸವನ್ನು ತಾವು ಗಮನಿಸಬೇಕಾಗುತ್ತದೆ. ಅದರ ಅರ್ಥ ಅಧಿಕಾರಿಗಳ ಕಾರ್ಯ ದಕ್ಷತೆ, ಅಥವಾ ಅಧಿಕಾರಿಗಳು ಯಾವ ರೀತಿಯಲ್ಲಿ ಈ ಭೂಮಿಯನ್ನು ಮಂಜೂರಾತಿ ಮಾಡುತ್ತಾ ಇದ್ದಾರೆ ಎನ್ನುವಂಥ ವಿಚಾರವನ್ನೂ ಸಹ ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಮತ್ತು ಆ ಗ್ರಾಮದಲ್ಲಿ ಎಷ್ಟು ಭೂಮಿ ಇದೆ ಎನ್ನುವುದನ್ನು ಸ್ಪಷ್ಟವಾಗಿ ಲಭ್ಯತಾ ಪಟ್ಟಿಯಲ್ಲಿ ಒದಗಿಸಿ ಆ ಭೂಮಿಯನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಒದಗಿಸುವುದಕ್ಕೆ ಸಾಧ್ಯ ಇದೆ ಎನ್ನುವುದನ್ನು ಸರ್ಕಾರ ಗಮನಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಹಲವಾರು ಬಾರಿ ಈ ಅಪೀಲ್ ಪ್ರಾಧಿಕಾರವನ್ನು ರದ್ದು ಮಾಡುವ ವಿಚಾರವನ್ನು ಚರ್ಚೆ ಮಾಡಿದ್ದೇವೆ ಈ ಬಗ್ಗೆ ಸರ್ಕಾರ ಕೇವಲ ೮ ದಿವಸದಲ್ಲಿ ನಿರ್ಣಯ ತೆಗೆದುಕೊಳ್ಳುತ್ತೇವೆ ಎಂದು ಆಶ್ವಾಸನೆ ಕೊಟ್ಟಿರುವುದರಿಂದ ಈ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಅದನ್ನು ಆದಷ್ಟು ಶೀಘ್ರವಾಗಿ ಮಾಡುತ್ತಾರೆಂಬ ಆಸೆಯನ್ನು ಈ ಸಂದರ್ಭದಲ್ಲಿ ನಾನು ವ್ಯಕ್ತಪಡಿಸುತ್ತೇನೆ. ಮತ್ತೆ ಕೆಲವೊಂದು ಅಕ್ರಮ ಭೂಮಿಯನ್ನು ಸಕ್ರಮಗೊಳಿಸಬೇಕು. ಇದನ್ನು ಮಾಡುವಂಥ ಸಂದರ್ಭದಲ್ಲಿ ಏಕೆ ಇಷ್ಟು ತಡವಾಗುತ್ತದೆ.? ಸಾಮಾನ್ಯವಾಗಿ ರಸ್ತೆ ಮಾಡಬೇಕಾದರೆ, ಬ್ರಿಡ್ಜ್ ಕಟ್ಟಬೇಕಾದರೆ ಬೇರೆ ಬೇರೆ ನೇಮಕಾತಿಯನ್ನು ಮಾಡಬೇಕಾದರೆ ಅಥವಾ ಕೆಲಸಗಳನ್ನು ಮಾಡಬೇಕಾದರೆ ಹಣದ ಅವಶ್ಯಕತೆ ಇರುತ್ತದೆ. ಆದರೆ ಇದು ಬಡ ಭೂರಹಿತರ ಅಥವಾ ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡದವರ ಮೂಲ ಭೂತವಾದ ಬೇಡಿಕೆಗಳಲ್ಲಿ ಒಂದಾದ ಈ ಭೂಮಿಯನ್ನು ವಿತರಣೆ ಮಾಡತಕ್ಕಂಥಾದ್ದು ಹಾಗೂ ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವುದಕ್ಕೆ ೪ ತಿಂಗಳುಗಳ ಕಾಲದಲ್ಲಿ ಸರ್ಕಾರದವರು ಏಕೆ ಗಮನಹರಿಸಿಲ್ಲ ? ಅದನ್ನು ಆದಷ್ಟು ಶೀಘ್ರವಾಗಿ ಬರುವ ಅಧಿವೇಶನದೊಳಗಾಗಿ ಯಾರು ಅಕ್ರಮಣದಾರರು ಇದ್ದಾರೆ. ಅವರ ಅಕ್ರಮಣ ಭೂಮಿಯನ್ನು ಸಕ್ರಮಗೊಳಿಸಬೇಕು. ಯಾರು ಭೂ ರಹಿತರು ಇದ್ದಾರೆ ಅವರಿಗೆ ಭೂಮಿಯನ್ನು ಮಂಜೂರು ಮಾಡತಕ್ಕಂಥ ವ್ಯವಸ್ಥೆಯನ್ನು ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವುದು ತಡವಾಗುತ್ತಿರುವುದರಿಂದ ರೈತರಿಗೆ ತುಂಬಾ ಅನ್ಯಾಯ ಆಗುತ್ತಿದೆ. ಮತ್ತು ಸರ್ಕಾರದಿಂದ ಕೊಡತಕ್ಕಂಥ ವಿಶೇಷ ಸೌಲಭ್ಯಗಳಿಂದ ಅವರು ವಂಚಿತರಾಗುತ್ತಾರೆ. ಅವರಿಗೆ ಒಂದು ಬಾವಿ ತೋಡಬೇಕಾದರೆ ಸಾಲ ಸಿಗುವುದಿಲ್ಲ ಮನೆ ಕಟ್ಟಬೇಕಾದರೆ ಸಾಲ ಸಿಗುವುದಿಲ್ಲ ಅಥವಾ ಕೃಷಿಯೇತರ ಮತ್ತು ಕೃಷಿ ಬಗ್ಗೆ ಏನು ಸಾಲ ಕೇಳುತ್ತಾರೆ ಅದಕ್ಕೆ ಸಾಲ ಕೊಡತಕ್ಕಂಥ ವ್ಯವಸ್ಥೆ ಇಲ್ಲ. ಆದುದರಿಂದ ಸಚಿವರು ಇದನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಶೀಘ್ರವಾಗಿ ಈ ಒಂದು ವ್ಯವಸ್ಥೆ ಮಾಡಬೇಕು ಎನ್ನುವಂಥ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ಈಗಾಗಲೇ ಒಂದು ವಿಚಾರ ನಮ್ಮ ಗಮನಕ್ಕೆ ಬಂದಿದೆ, ನೆನ್ನೆ ರಾಜ್ಯಪಾಲರ ಭಾಷಣದಲ್ಲಿ ರೈತರ ಬಗ್ಗೆ ಏನೂ ತಿಳಿಸಿಲ್ಲ ಎಂದು ಜನತಾ ದಳದವರು, ವಿರೋಧ ಪಕ್ಷದವರ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿ ಸಭಾತ್ಯಾಗ ಮಾಡಿದರು. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಸ್ಪಷ್ಟವಾಗಿ ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ರೈತರ ಸಾಲವನ್ನು ಮನ್ನಾ ಮಾಡುವಂಥ ವಿಚಾರದಲ್ಲಿ ಹಲವಾರು ಗೊಂದಲ ಇದೆ. ಆ ಗೊಂದಲ ಪರಿಹಾರ ಆಗಬೇಕಾದರೆ ಕೇಂದ್ರ ಸರ್ಕಾರದ್ದೇ ಆಗಲಿ ರಾಜ್ಯ ಸರ್ಕಾರದ್ದೇ ಆಗಲಿ ಸ್ಪಷ್ಟವಾದಂಥ ಒಂದು ನೀತಿ ಬೇಕಾಗುತ್ತದೆ

ನಾವು ಜನಪ್ರತಿನಿಧಿಗಳು ಜನರನ್ನು ರೈತರನ್ನು ಸಂಪರ್ಕಿಸುವಾಗ ಮಿಶ್ರ ಪ್ರತಿಕ್ರಿಯೆಯನ್ನು ಕಂಡು ಕೊಂಡಿದ್ದೇವೆ. ಯಾರು ೧೦-೧೫ ವರ್ಷಗಳಿಂದ ಪ್ರಾಮಾಣಿಕವಾಗಿ ದುಡಿದು ಸಕಾಲದಲ್ಲಿ ಸಾಲವನು ಮರುಪಾವತಿ ಮಾಡುತ್ತಾರೆ ಅವರಿಗೆ ಯಾವ ಪ್ರಯೋಜನವಿಲ್ಲ. ಯಾರು ಕಾರಣಾಂತರಗಳಿಂದ ಈ ಬರ ಗಾಲ ಪರಿಸ್ಥಿತಿಯಿಂದ ಸಾಲವನ್ನು ಕಟ್ಟಲಿಕ್ಕೆ ಸಾಧ್ಯವಾಗದೇ ಇರತಕ್ಕಂಥ ರೈತರು ಇದ್ದಾರೆ. ಅವರನ್ನು ಬಿಟ್ಟು ಎಲ್ಲರಿಗೂ ಸಾಲವನ್ನು ಮನ್ನಾ ಮಾಡಿದರೆ ಪ್ರಾಮಾಣಿಕವಾಗಿ ದುಡಿದಂಥ ರೈತರಿಗೆ ಬಹಳ ಬೇಸರ ವಾಗತಕ್ಕಂಥ ಪರಿಸ್ಥಿತಿ ಇದೆ. ಅದರ ಅರ್ಥ ನಾವು ಈ ಸಾಲ ಮನ್ನಾವನ್ನು ವಿರೋಧಿಸುತ್ತೇವೆ ಎನ್ನು ವಂಥ ವಾದವಲ್ಲ. ಆದರೆ ಸಾಲ ಮನ್ನಾ ಮಾಡತಕ್ಕಂಥ ಸಂದರ್ಭದಲ್ಲಿ ರಾಜ್ಯ ಸರ್ಕಾರದ ನಿಲುವು ಮತ್ತು ಕೇಂದ್ರ ಸರ್ಕಾರದ ನಿಲುವನ್ನು ಕೂಡ ಸ್ಪಷ್ಟಪಡಿಸಬೇಕಾಗುತ್ತದೆ ಎನ್ನುವಂಥ ಮಾತನ್ನು ಈ ಸಂದರ್ಭ ದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಈಗಾಗಲೇ ಹೇಳಿದೆ. ರೈತರ ಬಗ್ಗೆ ವಿಧಾನಸಭೆಯಲ್ಲಿ ಬಹಳಷ್ಟು ಅನುಕಂಪ, ಬಹಳಷ್ಟು ಸಹಾನುಭೂತಿಯನ್ನು ಕಂಡುಕೊಂಡಿದ್ದೇವೆ. ಆದರೆ ಹಲವಾರು ವರ್ಷಗಳಿಂದ ನಾವು ರೈತರಿಗೆ ಏನನ್ನು ಮಾಡಿದ್ದೇವೆ ಎನ್ನುವಂಥ ಚಿಂತನೆಯನ್ನು ಒಂದು ವಿಮರ್ಶೆ ಯನ್ನು ಈ ಸಂದರ್ಭದಲ್ಲಿ ಮಾಡಬೇಕಾಗುತ್ತದೆ. ದಿವಂಗತ ಮಾನ್ಯ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಒಂದು ಕ್ರಾಂತಿಕಾರಕ ಭೂಸುಧಾರಣೆಯನ್ನು ತಂದರು. ಅದರ ಮುಖಾಂತರ ರೈತರಿಗೆ ಭೂಮಿಯನ್ನು ಕೊಟ್ಟರು. ನಂತರ ಮಾನ್ಯ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಯಾರು ಸಣ್ಣ ಹಿಡುವಳಿದಾರರು ಇದ್ದಾರೆ ಅವರಿಗೆ ಕಂದಾಯವನ್ನು ಮನ್ನಾ ಮಾಡಿದರು, ಅದೇ ರೀತಿ ಯಾರಿಗೆ ನೀರಾವರಿ ಪಂಪುಸೆಟ್ಟುಗಳಿವೆ ಅದಕ್ಕೆ ವಿದ್ಯುಚ್ಛಕ್ತಿ ರಿಯಾಯಿತಿ ಕೊಟ್ಟರು. ನಂತರ ಜನತಾಪಕ್ಷದವರು ಅಧಿಕಾರಕ್ಕೆ ಬಂದರು. ಅವರೂ ಸಹ ಹಲವಾರು ಬದಲಾವಣೆಗಳನ್ನು ತಂದರು. ಏನೆಂದರೆ, ಎರಡು ವರ್ಷ ಬಡ್ಡಿ ರಿಯಾಯಿತಿ, ಮತ್ತು ಒಂದು ವರ್ಷ ಬಡ್ಡಿಯನ್ನು ಮನ್ನಾ ಮಾಡಿದರು. ಅದೇ ರೀತಿಯಲ್ಲಿ ಅಪೀಲು ಪ್ರಾಧಿಕಾರ ವನ್ನು ತಂದರು. ಆದರೆ ವಿದ್ಯುಚ್ಛಕ್ತಿ ವಿನಾಯಿತಿಯಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ಕಾಂಗ್ರೆಸ್(ಐ) ಸರ್ಕಾರ ಇದ್ದಾಗ ಮಾನ್ಯ ಗುಂಡೂರಾಯರು ಕೊಟ್ಟಂಥ ಏನು ಸೌಲತ್ತುಗಳಿದ್ದವು ಅವುಗಳನ್ನು ತಾವು ಕಸಿದುಕೊಂಡಿರಿ. ಏಕೆಂದರೆ, ತಾವು ಏನು ಅಪೀಲು ಪ್ರಾಧಿಕಾರವನ್ನು ಮಾಡಿದ್ದೀರಿ, ಮಾನ್ಯ ದೇವರಾಜ ಅರಸರು ಕೊಟ್ಟಂಥ ಭೂಮಿಗಳು ಏನಿವೆ ಅವುಗಳನ್ನು ಕಿತ್ತುಕೊಳ್ಳತಕ್ಕಂಥ ಒಂದು ವ್ಯವಸ್ಥೆಯನ್ನು ತಾವು ಅಪೀಲು ಪ್ರಾಧಿಕಾರದ ಮುಖಾಂತರ ಮಾಡಿದಿರಿ. ಮಾನ್ಯ ಗುಂಡೂರಾಯರು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ವಿನಾಯಿತಿ ಕೊಟ್ಟಿದ್ದರು, ಅದನ್ನೂ ಸಹ ಕಿತ್ತುಕೊಳ್ಳ ತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಿದಿರಿ. ಆದುದರಿಂದ ಈ ಒಂದು ರಾಜ್ಯಪಾಲರ ಭಾಷಣವನ್ನು ವಿರೋಧಿಸತಕ್ಕಂಥ ಯಾವ ಒಂದು ನೈತಿಕ ಮೌಲ್ಯ ತಮ್ಮಲ್ಲಿದೆ ಎನ್ನುವಂಥ ಪ್ರಶ್ನೆಯನ್ನು ನಾನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ತಾವು ಏನೊಂದೂ ಸೌಲತ್ತನ್ನು ಕೊಡದೆ ಕೇವಲ ಪ್ರಚಾರ ಮಾಧ್ಯಮದಲ್ಲಿ ಪ್ರಚಾರ ಮಾಡಿದಿರಿ. ನಾವು ರೈತರ ಪರವಾಗಿದ್ದೇವೆ. ನಾವು ರೈತರ ಪರವಾಗಿದ್ದೇವೆ, ರೈತರಿಗೆ ಬೆಂಬಲ ಕೊಟ್ಟಿದ್ದೇವೆ ಎನ್ನುವಂಥ ಘೋಷಣೆ ಮಾಡುತ್ತಿದ್ದಿರೇ ಹೊರತು ತಾವು ಯಾವುದೂ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ. ಇನ್ನೊಂದು ವಿಚಾರ ತಾವು ಹೇಳಬಹುದು, ೧೯೮೩ರ ಚುನಾವಣಾ ಪೂರ್ವ ಒಂದು ಘೋಷಣೆ ಮಾಡಿದ್ದೀರಿ. ಯಾರು ಮಾಜಿ ಗೇಣಿದಾರರು ಇದ್ದಾರೆ ಅವರ ಪರಿಹಾರವನ್ನು ಮನ್ನಾ ಮಾಡುತ್ತೇವೆ ಎನ್ನುವಂಥ ಘೋಷಣೆ ಮಾಡಿದಿರಿ. ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ವಿಚಾರದಲ್ಲಿ ಸ್ಪಷ್ಟೀಕರಣ ಕೇಳಲಿಕ್ಕೆ ಬಯಸುತ್ತೇನೆ. ಯಾರು ಮಾಜಿ ಗೇಣಿದಾರರು ಇದ್ದಾರೆ ಅವರಿಗೆ ಪರಿಹಾರವನ್ನು ಮನ್ನಾ ಮಾಡುತ್ತೇವೆ ಎನ್ನುವಂಥ ಘೋಷಣೆ ಯನ್ನು ೧೯೮೩ರ ಚುನಾವಣಾ ಪೂರ್ವದಲ್ಲಿ ಮಾಡಿದರು. ಆದರೆ ಅವರು ಅಧಿಕಾರಕ್ಕೆ ಬಂದ ನಂತರ ಕೇವಲ ೧೦ ಎಕರೆ 'ಡಿ' ಕ್ಲಾಸ್ ಭೂಮಿಗೆ ಮಾತ್ರ ಈ ಒಂದು ಮನ್ನಾವನ್ನು ಸೀಮಿತ ಗೊಳಿಸಿದರು. ಇದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಾಗಲಿ, ಉತ್ತರ ಕನ್ನಡ ಜಿಲ್ಲೆಯಲ್ಲಾಗಲಿ ಕೊಡಗಿನಲ್ಲಾಗಲಿ ಅಥವಾ ಮೈಸೂರಿನಲ್ಲಾಗಲಿ ಯಾವುದೇ ಪ್ರದೇಶಕ್ಕೆ ಅದರ ಪ್ರಯೋಜನ ಬರದೆ ಕೇವಲ ರಾಯಚೂರು, ಗುಲ್ಬರ್ಗದಲ್ಲಿರತಕ್ಕಂಥ 'ಡಿ' ಕ್ಲಾಸ್ ಭೂಮಿಗಳಿಗೆ ಮಾತ್ರ ಅದರ ಪ್ರಯೋಜನ ಬರುತ್ತಿದೆಯೇ ಹೊರತು ಬೇರೆ ಇಲ್ಲ. ಈ ಒಂದು ಪ್ರಚಾರ ಏನಿದೆ ಮಾಜಿ ಗೇಣಿದಾರರ ಪರಿಹಾರವನ್ನು ಮನ್ನಾ ಮಾಡುತ್ತಾ ಇದ್ದೇವೆ ಎನ್ನುವ ಘೋಷಣೆ ಏನಿದೆ ಅದು ಸಮರ್ಪಕವಾಗಿಲ್ಲ. ಅದು ಕೇವಲ ಒಂದು ಘೋಷಣೆಯಾಗಿಯೇ ಮಾರ್ಪಟ್ಟಿದೆ. ಇನ್ನೊಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳ ಬೇಕಾಗಿದೆ. ಯಾವ ಪಕ್ಷದ ಒತ್ತಡವೂ ಇಲ್ಲದೇ ಹೇಳತಕ್ಕ ವಿಚಾರ. ಹಿಂದೆ ಕಾಂಗ್ರೆಸ್ (ಐ) ಪಕ್ಷದ ಅಧಿಕಾರದಲ್ಲಿದ್ದಾಗ ಈ ಕಂದಾಯ ಮನ್ನಾ ಮಾಡಿದರು ನಿಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಾಗ ಮಾಜಿ ಗೇಣಿದಾರರ ಪರಿಹಾರ ಮನ್ನಾ ಮಾಡಿದಿರಿ. ಇಂದು ರೈತರ ಸಾಲವನ್ನು ಮನ್ನಾ ಮಾಡಿದ್ದೇವೋ ಎನ್ನುವಂಥ ಘೋಷಣೆ ಮಾಡುತ್ತಿದ್ದೀರಿ ಆದರೆ ಈ ಮೂರು ಕೂಡ ಪ್ರಾಮಾಣಿಕವಾಗಿ

ಮನ್ನಾ ಆಗಿಲ್ಲ, ಎರಡೂವರೆ ಎಕರೆ ಭಾಗಾಯಿತು ಜಮೀನು ಇದ್ದವನಿಗೆ ಕಂದಾಯ ಮನ್ನಾ ಮಾಡಲಿಲ್ಲ. ಮಾಜಿ ಗೇಣಿದಾರ (ಡಿ)ವರ್ಗದ ಭೂಮಿ ಹೊಂದಿದ್ದರೆ ಅವನಿಗೆ ಪರಿಹಾರ ಮನ್ನಾ ಆಗಲಿಲ್ಲ. ಇವತ್ತು ಜನತಾ ಪಕ್ಷದ ಸರ್ಕಾರ ಯಾರು ಸಾಲ ಕಟ್ಟಲಿಕ್ಕೆ ಅರ್ಹರಾಗಿದ್ದು ಕಟ್ಟದೇ ಇರತಕ್ಕವರು ಇದ್ದರೆ ಅವರಿಗೂ ಸಹ ಮನ್ನಾ ಇಲ್ಲ ಎನ್ನುವಂಥ ಘೋಷಣೆ ಮಾಡಿದೆ.

ಶ್ರೀ ಬಸವರಾಜ ರಾಯರೆಡ್ಡಿ.— ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಯಾವ ಸಚಿವರೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇಷ್ಟು ಹೊತ್ತು ನೀವು ಯಾರೂ ಇರಲಿಲ್ಲ. ಏಕಾಂತಯ್ಯನವರೆ, ಏಕಾಂತವಾಗಿ ಕುಳಿತಿದ್ದರು.

ಶ್ರೀ ಆರ್. ವಿ. ದೇಶಪಾಂಡೆ.— ಸ್ಪೀಕರ್‌ರವರು ಸಭೆ ಕರೆದಿದ್ದರು ಅದಕ್ಕೆ ಹೋಗಿದ್ದೆವು.

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ.— ರೈತರ ಬಗ್ಗೆ ಸಾಕಷ್ಟು ಅನುಕಂಪದ ಮಾತನಾಡಿ. ಅವರಿಗೆ ಸಹಾಯ ಮಾಡುವ ಉದ್ದೇಶ ಹೊಂದಿದ್ದೀರಿ. ಇವತ್ತು ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುವುದರ ಮುಖೇನ ಅವರ ಅಭಿವೃದ್ಧಿಗೆ ಸಹಕರಿಸಬೇಕು. ರೈತರಿಗೆ ಬೀಜ, ಗೊಬ್ಬರ ಮತ್ತಿತರ ಸಲಕರಣೆಗಳಿಗೆ ರಿಯಾಯಿತಿ ಕೊಡುತ್ತೀರಿ. ಆದರೆ, ಇದು ನೇರವಾಗಿ ಅವರಿಗೆ ತಲುಪದೇ ಇರತಕ್ಕ ವ್ಯವಸ್ಥೆ ಇದೆ. ರೈತರಿಗೆ ಕೊಡತಕ್ಕ ಸೌಲಭ್ಯಗಳು ಅವನ ಬದುಕಿಗೆ ಪೂರಕವಾಗಿರಬೇಕಾಗುತ್ತದೆ. ಮಾನ್ಯ ಹಿರಿಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ಇವತ್ತು ರೈತರು ತಮಗೆ ಬೇಕಾದ ಸಾಲಕ್ಕಾಗಿ ಸೊಸೈಟಿಗಳಿಗೆ, ಬ್ಯಾಂಕುಗಳಿಗೆ ಓಡಾಡಬೇಕಾಗಿದೆಯೆಂದು ಹೇಳಿದರು. ರೈತರ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ, ಒಂದೇ ಸಂಸ್ಥೆಯ ಮುಖಾಂತರ ಸಾಲ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ.

ಇನ್ನು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಹೇಳುವುದಾದರೆ, ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯಿತಿಗಳು ಅಧಿಕಾರಕ್ಕೆ ಬಂದ ನಂತರ ಏನೇನು ಕೆಲಸಗಳಾಗುತ್ತವೆ, ಅಧಿಕಾರ ವಿಕೇಂದ್ರೀಕರಣದಿಂದ ಜನರಿಗೆ ಎಷ್ಟರ ಮಟ್ಟಿಗೆ ಈ ಪ್ರಯೋಜನ ಸಿಗುತ್ತದೆ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಸಂಕ್ಷಿಪ್ತವಾಗಿ ಹೇಳುತ್ತೇನೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ಅಧಿಕಾರ ವಿಕೇಂದ್ರೀಕರಣದ ಕೂಸು ಎಂದರೆ ತಪ್ಪಾಗಲಾರದು. ಇವತ್ತು ಮತದಾರರು ಮಂಡಲ ಪಂಚಾಯಿತಿಗಳ ಹತ್ತಿರ ಬಂದು, ನಮಗೆ ಇಂತಹ ಕೆಲಸಗಳಾಗಬೇಕೆಂದು ಹೇಳಿದರೆ ಮಂಡಲ ಪಂಚಾಯಿತಿಯವರು ಇದು ನೇರವಾಗಿ ಜಿಲ್ಲಾ ಪರಿಷತ್ ಕೆಲಸ ಎಂದು ಹೇಳುತ್ತಾರೆ. ಅದೇ ವಿಚಾರವನ್ನು ಜಿಲ್ಲಾ ಪರಿಷತ್‌ನಲ್ಲಿ ಹೋಗಿ ಕೇಳಿದರೆ ಅದಕ್ಕೆ ಸರ್ಕಾರದಿಂದ ಅನುದಾನ ಬರಬೇಕು ಎಂದು ಹೇಳುತ್ತಾರೆ. ನಾವು ಸರ್ಕಾರಕ್ಕೆ ಇದು ಆಗಬೇಕೆಂದು ಕೇಳಿದರೆ ಕೇಂದ್ರ ಸರ್ಕಾರದಿಂದ ಬರಲಿ ಎಂದು ಹೇಳುತ್ತಾರೆ. ಇದರ ಅರ್ಥ ಜನಪ್ರತಿನಿಧಿಗಳ ಜವಾಬ್ದಾರಿಯ ವಿಕೇಂದ್ರೀಕರಣವಾಗಿದೆಯೋ ಹೊರತು, ನಿಜವಾದ ಅಧಿಕಾರ ವಿಕೇಂದ್ರೀ ಕರಣವಾಗಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಇದರಲ್ಲಿ ಕೆಲವೊಂದು ತಿದ್ದುಪಡಿ ಆಗಬೇಕಾಗಿದೆ. ಇವತ್ತು ಯಾವುದೇ ಒಂದು ಮಂಡಲ ಪಂಚಾಯಿತಿ ಪ್ರಧಾನರ ಅಧಿಕಾರ ದುರುಪಯೋಗವಾಗಿ ಭ್ರಷ್ಟಾಚಾರ ಮಾಡಿದಂಥ ಸಂದರ್ಭದಲ್ಲಿ ಅವನ ಬಗ್ಗೆ ಜಿಲ್ಲಾ ಪರಿಷತ್ತಿನಲ್ಲಿ ದೂರುಕೊಡಲಿಕ್ಕೆ ಹೋದರೆ ಜಿಲ್ಲಾ ಪರಿಷತ್ತಿನವರು ನಾವು ಏನು ಮಾಡುವುದು ಅವನು ಭ್ರಷ್ಟಾಚಾರ ಮಾಡಿದರೆ ಇಡೀ ಬೋರ್ಡನ್ನು ಕಿತ್ತು ಹಾಕಬೇಕೇ ಹೊರತು ಒಬ್ಬ ಸದಸ್ಯನ ಮೇಲೆ ಯಾವುದೇ ಕಾನೂನು ಕ್ರಮ ಕೈಗೊಳ್ಳತಕ್ಕಂಥ ವ್ಯವಸ್ಥೆಯಿಲ್ಲ ಎಂದು ಹೇಳುತ್ತಾರೆ.

ಆದುದರಿಂದ ಯಾವುದೇ ಭ್ರಷ್ಟ ಅಥವಾ ಲಂಚ ಪಡೆದ ಪ್ರಧಾನರಾಗಿರಲಿ, ಅಧ್ಯಕ್ಷರಾಗಿರಲಿ ಅವರನ್ನು ನೇರವಾಗಿ ತೆಗೆದುಹಾಕುವಂತಹ ಕಾನೂನು ತಿದ್ದುಪಡಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಅಧಿಕಾರ ವಿಕೇಂದ್ರೀಕರಣದಲ್ಲಿ ಜಿಲ್ಲೆಯ ಮತ್ತು ಗ್ರಾಮಗಳ ಅಭಿವೃದ್ಧಿಯಾಗಬೇಕಾದರೆ ಅದಕ್ಕೆ ಬೇಕಾದಷ್ಟು ಅನುದಾನ ಕೊಡಬೇಕಾಗುತ್ತದೆ. ಇವತ್ತು ನಮ್ಮ ಗ್ರಾಮದಲ್ಲಿ ಹೊಳೆಗೆ ಅಡ್ಡವಾಗಿ ಒಂದು ಸೇತುವೆ ಕಟ್ಟಬೇಕಾದರೆ ೮ ಲಕ್ಷ ರೂಪಾಯಿ ಬೇಕಾಗುತ್ತದೆ. ಮಂಡಲ ಪಂಚಾಯಿತಿ ಮುಖಾಂತರ ಜಿಲ್ಲಾ ಪರಿಷತ್ತಿನವರನ್ನು ಕೇಳಿ ಎಂದು ಹೇಳಿದರೆ ಅದಕ್ಕೆ ಬೇಕಾದಂತಹ ವ್ಯವಸ್ಥೆ ನಮ್ಮಲ್ಲಿ ಇಲ್ಲವೆಂದು ಹೇಳುತ್ತಾರೆ. ಲೋಕೋಪಯೋಗಿ ಇಲಾಖೆಯವರನ್ನು ಕೇಳಿದರೆ ಅದು ಮಂಡಲ ಅಥವಾ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುತ್ತದೆಂದು ಹೇಳುತ್ತಾರೆ. ಇದರಿಂದ ಗ್ರಾಮಗಳ ಅಭಿವೃದ್ಧಿ ಅಥವಾ ಜಿಲ್ಲೆಯ ಅಭಿವೃದ್ಧಿ ಈ ಮಂಡಲಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳಿಗೆ ತಾವು ಕೊಡುತ್ತಿರುವ ಅನುದಾನದಿಂದ ಆಗುತ್ತಿಲ್ಲವೆನ್ನುವ ಮಾತನ್ನು ಈ ಸಭೆಯ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಉಪಾಧ್ಯಕ್ಷರು.—ಇನ್ನು ಐದು ನಿಮಿಷದಲ್ಲಿ ತಾವು ಮುಗಿಸಿ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಜಿಲ್ಲಾ ಪರಿಷತ್ತು, ಮತ್ತು ಮಂಡಲ ಪಂಚಾಯತಿಗಳು ಅಸ್ತಿತ್ವಕ್ಕೆ ಬಂದು ಮೂರು ವರ್ಷವಾಯಿತು. ಈ ಮೂರು ವರ್ಷಗಳಲ್ಲಿ ಹಿಂದಿನ ಸರ್ಕಾರ ಯಾವ ನೇಮಕಾತಿಯ ರೂಪುರೇಷೆಯನ್ನೂ ಮಾಡಿಲ್ಲ. ಇದುವರೆಗೂ ಯಾರನ್ನೂ ನೇಮಕಾತಿ ಮಾಡಿಕೊಂಡಿಲ್ಲ. ಅವರನ್ನು ಖಾಯಂ ಗೊಳಿಸುವ ವ್ಯವಸ್ಥೆಯನ್ನು ಸಹ ಮಾಡಿಲ್ಲ. ಮೂರು ವರ್ಷದಿಂದ ಮಾಡದೆ ಇರುವುದನ್ನು ನೋಡಿದರೆ ನಾವು ಅಲ್ಲಿ ಉತ್ತರ ಕೊಡತಕ್ಕಂಥ ಪ್ರಸಂಗ ಕಂಡುಬರುತ್ತಾ ಇಲ್ಲ. ನಿಮ್ಮ ಸರ್ಕಾರ ಇದ್ದಾಗ ಮಾಡಲಿಲ್ಲ. ಈಗ ನಮ್ಮ ಸರ್ಕಾರ ಬಂದು ನಾಲ್ಕು ತಿಂಗಳಾಯಿತು. ಈ ಬಗ್ಗೆ ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಮಂಡಲ್ ಪಂಚಾಯತಿ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ನಡೆಯುವಂತಹ ಕಾಮಗಾರಿಗಳ ಬಗ್ಗೆ ಹೇಳುವುದಾದರೆ, ಭಾರಿ ಕಳಪೆ ಮಟ್ಟದಲ್ಲಿ ಕೆಲಸಗಳು ನಡೆಯುತ್ತಿವೆ. ಯಾವ ಉಪಕರಣಗಳನ್ನು ಸಲಕರಣೆಗಳನ್ನು ಪಡೆಯುತ್ತಾರೆ ಅಂದರೆ ಕಳಪೆ ಮಟ್ಟದವುಗಳನ್ನು ಪಡೆಯುತ್ತಾರೆ. ಟೆಂಡರ್ ಇಲ್ಲದೆ ಕೆಲಸ ಕೊಡತಕ್ಕಂಥಾದ್ದು ಮತ್ತು ಬೇಕಾಬಿಟ್ಟಿ ಕೆಲಸ ಮಾಡುತ್ತಾರೆ. ಇದರ ಬಗ್ಗೆ ಹತೋಟಿ ಇಡಬೇಕಾದ ವ್ಯವಸ್ಥೆ ಆಗಬೇಕು. ಈ ಬಗ್ಗೆ ಸರ್ಕಾರ ಗಮನ ಹರಿಸುವುದು ಸೂಕ್ತ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದೂ ಅಲ್ಲದೆ ರೈತರ ಬಗ್ಗೆ ಮಾತನಾಡಿದ ಸಂದರ್ಭದಲ್ಲಿ ರೈತ ಪ್ರತಿನಿಧಿಗಳು, ಜನ ಪ್ರತಿನಿಧಿಗಳು, ತಮ್ಮ ಅನಿಸಿಕೆಗಳನ್ನು ಹೇಳಿದರು. ರಾಜ್ಯಪಾಲರ ಭಾಷಣದಲ್ಲಿ ನಮ್ಮ ಕರ್ನಾಟಕದ ಎಲ್ಲ ನಿವಾಸಿಗಳಿಗೂ, ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ ಎಂದು ಹೇಳುವುದು ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದೆ. ಅಂದರೆ ಕರ್ನಾಟಕದ ರಾಜ್ಯದಲ್ಲಿ ಎಲ್ಲ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ ಎಂದಹಾಗಾಯಿತು. ಅದರ ಅರ್ಥ ಯಾವುದೋ ಗ್ರಾಮದಲ್ಲಿ ಯಾವುದೋ ಮೂಲೆಯಲ್ಲಿ ವಿದ್ಯುತ್ ಲೈನ್ ಹರಿದುಹೋದರೆ ಆ ಗ್ರಾಮಕ್ಕೆ ವಿದ್ಯುದ್ದೀಕರಣ ಆಗಿದೆ ಎನ್ನುವುದು ಒಂದು ವಾದ. ಯಾವ ಗ್ರಾಮಕ್ಕೆ ಹೋದರೂ ಸಹ ನೀರಾವರಿ ಪಂಪುಸೆಟ್ಟನ್ನು ತಂದು ಷೆಡನ್ನು ಕಟ್ಟಿ ವಿದ್ಯುಚ್ಛಕ್ತಿಗಾಗಿ ಕಾಯುತ್ತಾ ಇರುವುದನ್ನು ನಾವು ಕಂಡುಕೊಂಡಿದ್ದೇವೆ. ಆದರೂ ಸಹ ಈವರೆಗೆ ಅವರಿಗೆ ಯಾವುದೇ ವ್ಯವಸ್ಥೆ ಮಾಡಿಲ್ಲ, ಕೇಳಿದರೆ, ತಮಗೆ ಕೊಟ್ಟಿರತಕ್ಕ ಟಾರ್‌ಗೆಟ್ ಅನ್ನು ಕಂಪ್ಲೀಟ್ ಮಾಡಿದ್ದೇವೆಂದು ಹೇಳುತ್ತಾರೆ. ಇನ್ನು ಕೇಳಿದರೆ ಸಲಕರಣೆಗಳು ಬರುತ್ತಿಲ್ಲವೆಂದು ಹೇಳುತ್ತಾರೆ. ಈ ಉಪಕರಣಗಳು ಬರಬೇಕಾದರೆ ಏನು ಮಾಡಬೇಕೆಂದು ಕೇಳಿದರೆ, ಅದಕ್ಕೆ ಇಂಡೆಂಟ್ ಹಾಕಬೇಕೆಂದು ಹೇಳುತ್ತಾರೆ. ಇಂಡೆಂಟ್ ಹಾಕುವುದಕ್ಕೆ ಏನು ತೊಂದರೆ ಅಂದರೆ, ಇಂಡೆಂಟ್ ಹಾಕಿದ್ದೇವೆ. ಬರತ್ತದೆಂದು ಹೇಳುತ್ತಾರೆ. ಈ ಇಂಡೆಂಟಾಗಿ ಬಂದಂಥ ಉಪಕರಣಗಳು ಅಂಗಡಿಯಲ್ಲಿ ಮಾರಾಟಕ್ಕೆ ಸಿಗುತ್ತವೆಯೆ ಹೊರತು ಕೆ.ಇ.ಬಿ. ಆಫೀಸಿನಲ್ಲಿ ಸಿಗುತ್ತಿಲ್ಲ ಎಂಬ ದೂರುಗಳು ಸಹ ಬರುತ್ತಿದೆ ಆದ್ದರಿಂದ ಈ ಬಗ್ಗೆ ಗಮನಹರಿಸಿ ಅವಶ್ಯಕತೆ ಇದ್ದಲ್ಲಿ ತನಿಖೆ ಮಾಡಿಸುವುದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

೪–೧೦ ಪಿ. ಎಂ.

ಇನ್ನು ಟ್ರಾನ್ ಫಾರ್ಮರ್‌ಗಳು. ಈ ಟ್ರಾನ್ಸ್‌ಫಾರ್ಮರ್‌ಗಳು ಎಲ್ಲಾ ಡೈರೆಕ್ಟಾಗಿವೆ. ಆದರೆ ಲೈನ್ ಹಾಳಾದರೆ ರಿಪೇರಿ ಮಾಡುವ ಪರಿಸ್ಥಿತಿಯಿಲ್ಲ. ಲೊ ವೋಲ್ಟೇಜ್ ಇರುವುದರಿಂದ ರಾತ್ರಿ ೧೦ ಗಂಟೆಯಾದಮೇಲೆ ಮಕ್ಕಳು ಓದಲಿಕ್ಕೆ ಪ್ರಾರಂಭ ಮಾಡಬೇಕಾದಂಥ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ೬ ಗಂಟೆಯಿಂದ ೧೦ ಗಂಟೆವರೆಗೆ ಓದುವುದಲ್ಲ ೧೦ ಗಂಟೆಯ ನಂತರ ಓದುವ ಪರಿಸ್ಥಿತಿಯನ್ನು ಗ್ರಾಮಾಂತರ ಪ್ರದೇಶದ ರೈತರ ಮಕ್ಕಳು ಅನುಭವಿಸುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಗಮನಹರಿಸಿ ಆದಷ್ಟು ಬೇಗ ಈ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಆರೋಗ್ಯ ಇಲಾಖೆಯ ಬಗ್ಗೆ. ಎರಡು ಸಾವಿರ ಇಸವಿಯ ಹೊತ್ತಿಗೆ ಎಲ್ಲರಿಗೂ ಆರೋಗ್ಯ ಎನ್ನುವಂಥ ಧ್ಯೇಯ, ಸರ್ಕಾರದ ಮೂಲ ಉದ್ದೇಶ ಎನ್ನುವಂಥ ವಿಚಾರ ಹೇಳಿವೆ. ಆದರೆ ಈ ಆಸ್ಪತ್ರೆಗಳ ಪರಿಸ್ಥಿತಿ ಹೇಗೆ ಆಗಿದೆ ಎಂದರೆ ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳು ಆರೋಗ್ಯ ಕೇಂದ್ರಗಳಾಗಿ, ಬಡ್ತಿ ಹೊಂದಿದೆ ಎಂಬುದು ತಮ್ಮ ಹೆಮ್ಮೆ. ಪ್ರಾಥಮಿಕ ಆರೋಗ್ಯ ಘಟಕಗಳನ್ನು ಏನು ಆರೋಗ್ಯ ಕೇಂದ್ರಗಳನ್ನಾಗಿ ಬಡ್ತಿ ಮಾಡಿದ್ದೀರಿ ಅದು ಕೇವಲ ನಾಮಫಲಕಗಳ ಬಡ್ತಿಯಾಗಿದೆ. ಅಂದರೆ ಜಿಲ್ಲಾಪರಿಷತ್ ಪ್ರಾಥಮಿಕ ಆರೋಗ್ಯ ಘಟಕ ಹೋಗಿ, ಜಿಲ್ಲಾಪರಿಷತ್ ಪ್ರಾಥಮಿಕ ಆರೋಗ್ಯ ಕೇಂದ್ರ ಎಂದು ಬಡ್ತಿ ಮಾಡಿದ್ದೀರೇ ಹೊರತು, ಯಾರನ್ನಾದರೂ ಡಾಕ್ಟರನ್ನು ನೇಮಕ ಮಾಡಿದ್ದೀರಾ, ಯಾವುದಾದರೂ ಕಟ್ಟಡಕ್ಕೆ ಹೆಚ್ಚಿನ ಹಣ ಕೊಟ್ಟಿದ್ದೀರಾ ಅಥವಾ ಯಾವುದಾದರೂ ಸಲಕರಣೆಗಳನ್ನು ಕೊಟ್ಟಿದ್ದೀರಾ. ಅಂತಹ ಒಂದು

ವಾದವನ್ನು ಮಾಡಿಕೊಂಡು ತಮ್ಮ ಪ್ರಗತಿ ಸಾಧನೆಯಾಗುತ್ತದೆ ಎಂದು ಘೋಷಣೆ ಮಾಡುವುದಿದ್ದರೆ ಇಂದು ಇರತಕ್ಕ ಸರ್ಕಾರ ಸಹ ಇದರ ಬಗ್ಗೆ ಗಮನ ಹರಿಸಬೇಕು. ಕೇವಲ ನಾವು ಫಲಕಗಳ ಬಡ್ತಿಯಾಗಿರದೆ ಪ್ರಾಮಾಣಿಕವಾಗಿ ಏನು ಅವಶ್ಯಕತೆ ಇದೆ ಆ ಅವಶ್ಯಕತೆಯನ್ನು ಪೂರೈಸತಕ್ಕಂಥ ಒಂದು ವ್ಯವಸ್ಥೆ ಆಗಬೇಕಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಆಸ್ಪತ್ರೆಗಳ ಪರಿಸ್ಥಿತಿ ಯಾವರೀತಿ ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಾನು ಆಸ್ಪತ್ರೆ ಯಾವ ರೀತಿ ಇದೆ ಎಂದು ನೋಡಲಿಕ್ಕೆ ಹೋಗಿದ್ದೆ. ಆ ಆಸ್ಪತ್ರೆಯಲ್ಲಿ ಕುರ್ಚಿಗಳ ಕಾಲಿಗೂ ಬ್ಯಾಂಡೇಜ್ ಹಾಕಿದ್ದಾರೆ. ಮೇಜಿನ ಕಾಲಿಗೂ ಬ್ಯಾಂಡೇಜ್ ಹಾಕಿದ್ದಾರೆ. ಬ್ಯಾಂಡೇಜ್ ಹಾಕಿರತಕ್ಕ ಕುರ್ಚಿಯಲ್ಲಿ ಡಾಕ್ಟರು ಕುಳಿತುಕೊಳ್ಳುವ ಪರಿಸ್ಥಿತಿಯನ್ನು ನಾನು ನೋಡಿಕೊಂಡು ಬಂದಿದ್ದು ಆಯಿತು. ಯಾರು ಪೇಷಂಟ್ ಬರುತ್ತಾರೆ ಅವರಿಗೆ ಬ್ಯಾಂಡೇಜ್ ಹಾಕುವುದಕ್ಕೆ ಮುಂಚೆ ಡಾಕ್ಟರು ಕುಳಿತುಕೊಳ್ಳುವ ಕುರ್ಚಿಯ ಕಾಲುಗಳಿಗೆ ಬ್ಯಾಂಡೇಜ್ ಹಾಕಿರುವುದನ್ನು ನೋಡಿದರೆ ಆಸ್ಪತ್ರೆಗಳಲ್ಲಿ ಪೀಠೋಪಕರಣಗಳ ವ್ಯವಸ್ಥೆಯಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಇನ್ನು ಆಸ್ಪತ್ರೆಯ ವಾರ್ಡ್‌ಗಳನ್ನು ನೋಡಲಿಕ್ಕೆ ಹೋದರೆ ಅವುಗಳಿಗೆ ಬಾಗಿಲುಗಳೇ ಇಲ್ಲ. ಕಿಟಕಿಗಳಿಗೆ ಮುಚ್ಚಳಗಳೇ ಇಲ್ಲ ಬಾಗಿಲುಗಳೇ ಇಲ್ಲ. ಪ್ರಾಣಿಗಳು ಮತ್ತು ಪಕ್ಷಿಗಳು ಬೇಕಾದಾಗ ಬರಬಹುದು, ಬೇಕಾದಾಗ ಹೋಗಬಹುದು, ಪೇಷಂಟ್ ಇಲ್ಲದೇ ಹೋದರೆ ನಾಯಿಗಳು ಬಂದು ಇಂತಹ ಬೆಡ್‌ನಲ್ಲಿ ಮಲಗಿರುತ್ತವೆ. ಈ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಇದರ ಬಗ್ಗೆ ಕೇಳಿದರೆ ನೀವು ಜಿಲ್ಲಾಪರಿಷತ್ ಕೇಳಿ ಎಂದು ಹೇಳಬಹುದು. ತಾವು ಜಿಲ್ಲಾಪರಿಷತ್‌ನವರಿಗೆ ರಿಪೇರಿ ಮಾಡಲಿಕ್ಕೆ ಹಣವನ್ನು ಕೊಡದೇ ಇದ್ದರೆ ಜಿಲ್ಲಾ ಪರಿಷತ್‌ನವರು ಮೇಲೆ ನೋಡುವುದು, ಕೆಳಗೆ ನೋಡುವುದು ಆಗುತ್ತದೆ. ಆದ್ದರಿಂದ, ಎರಡು ಸಾವಿರ ಇಸವಿಯ ಹೊತ್ತಿಗೆ ಎಲ್ಲರಿಗೂ ಆರೋಗ್ಯ ಎನ್ನುವ ಘೋಷಣೆ ಏನಿದೆ ಅದನ್ನು ಸ್ವಲ್ಪ ಹಿಂದೆ ತೆಗೆದುಕೊಂಡು ಎಲ್ಲಾ ಆಸ್ಪತ್ರೆಗಳನ್ನು ರಿಪೇರಿ ಮಾಡಿಸುತ್ತೇವೆ ಎನ್ನುವ ಘೋಷಣೆ ಮಾಡಿದರೆ ಒಳ್ಳೆಯದು. ಏಕೆಂದರೆ, ಇದು ಕೇವಲ ಪ್ರಚಾರ ಮಾಧ್ಯಮ ಘೋಷಣೆ ಆಗದೇ ಪ್ರಾಮಾಣಿಕವಾದ ಕೆಲಸ ಆಗುವಂಥಾದ್ದು, ಆಗಬೇಕು. ಯಾರಾದರೂ ಆಸ್ಪತ್ರೆಗೆ ಹೋಗಿ ನೋಡಿದರೆ ಆಸ್ಪತ್ರೆಗಳ ಪರಿಸ್ಥಿತಿ ಹೇಗಿದೆ ಎನ್ನುವುದು ಅರ್ಥವಾಗುತ್ತದೆ. ಕುಡಿಯಲಿಕ್ಕೆ ನೀರು ಇಲ್ಲದೇ ಇರತಕ್ಕ ಆಸ್ಪತ್ರೆಗಳು ಎಷ್ಟೋ ಇವೆ. ಕರ್ನಾಟಕ ರಾಜ್ಯಕ್ಕೆ ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ಪ್ರಥಮ ಬಹುಮಾನ ಬಂದಿದೆ ಎಂದು ಹೇಳಿಕೊಳ್ಳಬಹುದು. ಇವೊತ್ತು ಈ ವಾರ್ಡ್‌ಗಳಲ್ಲಿ ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್ ಜನ ಯಾವ ರೀತಿ ಮಾಡಿಸಿಕೊಳ್ಳುತ್ತಾರೆ ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕಾಗಿದೆ.

ಇನ್ನು ಶಿಕ್ಷಣ ವ್ಯವಸ್ಥೆಯ ಬಗ್ಗೆ ಸಂಕ್ಷಿಪ್ತವಾಗಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಶಿಕ್ಷಣ ಕ್ಷೇತ್ರ ಅಂದರೆ ಇದೊಂದು ಸರ್ಕಾರದ ಪ್ರಯೋಗಶಾಲೆಯಾಗಿದೆ. ಕಳೆದಸಾರಿ ನಿಮ್ಮ ಪಕ್ಷ ಅಧಿಕಾರಕ್ಕೆ ಬಂದಾಗ ಎಷ್ಟೋ ಪ್ರಾಥಮಿಕ ಶಾಲೆಗಳನ್ನು ತೆರೆದಿದ್ದೀರಿ. ಪ್ರಾಥಮಿಕ ಶಾಲೆಗಳನ್ನು ತೆರೆಯತಕ್ಕ ಸಂದರ್ಭದಲ್ಲಿ ಆ ಪ್ರಾಥಮಿಕ ಶಾಲೆಗಳಿಗೆ ಮೂಲಭೂತವಾಗಿ ಬೇಕಾಗತಕ್ಕ ಸೌಲಭ್ಯಗಳು ಯಾವುವು ಎನ್ನುವುದರ ಬಗ್ಗೆ ಗಮನಹರಿಸಿ ಆ ಶಾಲೆಗಳಿಗೆ ಕೊಠಡಿಗಳು ಇವೆಯೋ, ಆ ಶಾಲೆಗಳಿಗೆ ಅಧ್ಯಾಪಕರ ನೇಮಕಾತಿ ಆಗಿದೆಯೋ, ಆ ಶಾಲೆಗಳಿಗೆ ಪೀಠೋಪಕರಣಗಳ ಅವಶ್ಯಕತೆ ಇದೆಯೋ ಇವು ಯಾವುದನ್ನೂ ಗಮನದಲ್ಲಿಟ್ಟುಕೊಳ್ಳದೆ, ತಾವು ಪ್ರಾಥಮಿಕ ಶಾಲೆಗಳನ್ನು ತೆರೆದಿರಿ. ಪರವಾಗಿಲ್ಲ. ಅದರ ನಂತರ ತಾವು ವಾದವನ್ನು ಏನು ಮಾಡುತ್ತಿದ್ದೀರಿ ಅಂದರೆ ಮಕ್ಕಳಿಗೆ ನಾವು ಉಚಿತ ಪಠ್ಯ ಪುಸ್ತಕಗಳನ್ನು ಕೊಟ್ಟಿದ್ದೇವೆ, ಉಚಿತ ಸಮವಸ್ತ್ರ ವಿತರಣೆ ಮಾಡಿದ್ದೇವೆಂದು ವಾದ ಮಾಡುತ್ತಿದ್ದೀರಿ. ತಮ್ಮ ಉಚಿತ ಸಮವಸ್ತ್ರವನ್ನು ಮಕ್ಕಳು ಹಾಕಿಕೊಂಡು ಬಂದು ನೆಲದಮೇಲೆ ಕುಳಿತುಕೊಂಡು ಈಗ ಬಂದಿರತಕ್ಕ ಎರಡು ಮೂರು ಪುಸ್ತಕಗಳನ್ನು ಹಿಡಿದುಕೊಂಡು ಅಧ್ಯಾಪಕರು ಬರುವವರೆಗೂ ಎರಡು ವರ್ಷಗಳಿಂದ ಕಾಯತಕ್ಕ ಪರಿಸ್ಥಿತಿ ನಮ್ಮ ವಿದ್ಯಾ ಸಂಸ್ಥೆಗಳಲ್ಲಿ ಬಂದಿದೆ. ಆದುದರಿಂದ, ಇದರ ಬಗ್ಗೆ ತಾವು ಆಲೋಚನೆ ಮಾಡಬೇಕಾಗಿದೆ. ಶಾಲೆಗಳನ್ನು ತೆರೆಯಬೇಕಾದ ಸಂದರ್ಭದಲ್ಲಿ ಮಕ್ಕಳ ಮೂಲಭೂತವಾದ ಬೇಡಿಕೆಗಳು ಯಾವುವು ಎನ್ನುವುದನ್ನು ತಾವು ಗಮನಿಸಬೇಕೆಂದು ಹೇಳುತ್ತೇನೆ. ಇನ್ನು ಅಧ್ಯಕ್ಷರೆ, ತಾವು ಮಲೆನಾಡು ಪ್ರದೇಶದಲ್ಲಿ ನೋಡಿರಬಹುದು. ಅಲ್ಲಿ ಮಕ್ಕಳು ಶಾಲೆಗೆ ಬುತ್ತಿಯನ್ನು ಕಟ್ಟಿಕೊಂಡು ಬರುತ್ತಾರೆ. ಅವರು ತೆಗೆದುಕೊಂಡು ಬಂದಂಥ ಬುತ್ತಿ ಊಟ ಮಾಡಿದ ಮೇಲೆ ಅವರು ಕೈ ತೊಳೆಯಲಿಕ್ಕೆ ನೀರು ಇಲ್ಲದಂಥ ಪರಿಸ್ಥಿತಿ ಇದೆ ಅವರು ಬುತ್ತಿ ಊಟ ಮಾಡಿದ ಮೇಲೆ ತಮ್ಮ ಸಮವಸ್ತ್ರಕ್ಕೆ ಕೈ ಒರೆಸಿಕೊಂಡು ಹೋಗತಕ್ಕಂಥ ಪರಿಸ್ಥಿತಿಯಲ್ಲಿದ್ದಾರೆ. ಶಿಕ್ಷಣ ಕ್ಷೇತ್ರದಿಂದ ಯಾವುದೇ ಬೇಡಿಕೆ ಬರಲಿ, ಈ ಶಾಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಿಕ್ಕೆ ಹಣ ಒದಗಿಸಿದ್ದರೆ ಈ ಪ್ರಶ್ನೆಯನ್ನು ನಾನು ಕೇಳುತ್ತಿರಲಿಲ್ಲ. ಶಾಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಯಾವರೀತಿ ಆಗುತ್ತಿತ್ತು ಅಂದರೆ ಯಾರೋ ಶಾಸಕರು, ಮಂಡಲ್ ಪ್ರಧಾನರು ಎಲ್ಲಿ ೧೫ ಮನೆಗಳು ಇದೆ, ಈ ವರ್ಗದ್ದು ೧೫ ಮನೆ. ಮತ್ತೊಂದು ವರ್ಗದ್ದು ೧೫ ಮನೆ ಇದೆ ಆ ಶಾಲೆಗಳಿಗೆ ಹತ್ತಿರ ಯಾವುದು ಇದೆ ಅಲ್ಲಿ ಒಂದು ಬೋರ್

ವೆಲ್ ತೋಡಿ ಎಂದು ಹೇಳಿ ಮಾಡಿಸಿದ್ದೇ ಹೊರತು ವಿದ್ಯಾ ಇಲಾಖೆಯಿಂದ ಕುಡಿಯುವ ನೀರಿನ ಬಗ್ಗೆ ತಮ್ಮ ಸರ್ಕಾರ ಒಂದು ರೂಪಾಯಿ ಕೂಡ ಖರ್ಚುಮಾಡಿಲ್ಲ ಎಂದು ಹೇಳಬೇಕಾಗಿದೆ. ಈ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮಕ್ಕಳಿಗೆ ಸಮವಸ್ತ್ರ ಮತ್ತು ಪುಸ್ತಕಗಳನ್ನು ಕೊಡಿ, ಅವರಲ್ಲಿ ನನ್ನದು ಆಕ್ಷೇಪವೇನೂ ಇಲ್ಲ. ಆದರೆ ಇವತ್ತು ಪುಸ್ತಕಗಳ ಪರಿಸ್ಥಿತಿ ಏನಾಗಿವೆ ಎಂದರೆ ಪುಸ್ತಕಗಳು ಮಾರುಕಟ್ಟೆಯಲ್ಲಿ ಸಿಗುತ್ತಿಲ್ಲ, ಶಾಲೆಗಳಿಗೆ ಸಕಾಲದಲ್ಲಿ ಬರುತ್ತಿಲ್ಲ. ಹೀಗಾಗಿ ಹುಡುಗರಿಗೆ ತೊಂದರೆಯಾಗಿದೆ. ಉದಾಹರಣೆಗೆ ಹೇಳುವುದಾದರೆ, ನಾನು ಒಂದು ಶಾಲೆಗೆ ಹೋಗಿದ್ದೆ. ಆಗ ಅಲ್ಲಿನವರು ಹೇಳಿದರು, ನೀವು ನಾಳೆ ಬೆಂಗಳೂರಿಗೆ ಹೋದಾಗ ಹಳೆಯ ಪುಸ್ತಕಗಳನ್ನು ಏನು ಮಾಡುವುದು ಎಂದು ಕೇಳಿಕೊಂಡು ಬನ್ನಿ ಎಂದು ಹೇಳಿದರು. ಅಂದರೆ ಹಳೆಯ ಪುಸ್ತಕಗಳನ್ನು ಇಡಲಿಕ್ಕೆ ಗೋಡೌನುಗಳಿಲ್ಲ. ಅಂತಹ ಪರಿಸ್ಥಿತಿ ಇವತ್ತು ಇದೆ. ನಮ್ಮ ಸರಕಾರವಿದ್ದಾಗ ಏನು ಮಾಡಿದರು ಅಥವಾ ನಮ್ಮ ಪಕ್ಷದ ಸರ್ಕಾರದವರು ಏನು ಮಾಡುತ್ತಾರೆಂದು ಕಾದು ನೋಡೋಣ. ಆದರೆ ಯಾರು ಆರ್ಥಿಕವಾಗಿ ಹಿಂದುಳಿದಿದ್ದಾರೆ ಅವರಿಗೆ ಪುಸ್ತಕ ಕೊಡಿ, ಸಮವಸ್ತ್ರ ಕೊಡಿ ಅವರಿಗೆ ಇತರ ಯಾವುದೇ ಸೌಲಭ್ಯವನ್ನು ಕೊಡಿ ಅದನ್ನು ನಾನು ಒಪ್ಪುತ್ತೇನೆ. ಆದರೆ ಆರ್ಥಿಕ ಸಮಾನತೆಯನ್ನು ತಾವು ಮಕ್ಕಳಲ್ಲಿ ಮೂಡಿಸತಕ್ಕಂಥ ವ್ಯವಸ್ಥೆ ಏನು ಇದೆ ಅದು ಕೇವಲ ಪ್ರಚಾರ ಮಾಧ್ಯಮವಾಗಿದೆ. ಬೆಂಗಳೂರಿನಲ್ಲಿ ಇರತಕ್ಕಂಥ ಕೆಲವು ಶಾಲೆಗಳ ಮಕ್ಕಳಿಗೆ ಸಮವಸ್ತ್ರ ಕೊಟ್ಟಿಲ್ಲ, ಬೆಂಗಳೂರಿನಲ್ಲಿರತಕ್ಕಂಥ ಆಂಗ್ಲ ಮಾಧ್ಯಮದ ಶಾಲೆಗಳಲ್ಲಿ ಸಮಾನತೆಯನ್ನು ತಾವು ಕಾಪಾಡಿದ್ದೀರ. ಈ ಎಲ್ಲ ವಾದಗಳು ಕೇವಲಪ್ರಚಾರ ಮಾಧ್ಯಮದ ವಾದಗಳೇ ಹೊರತು ಮೂಲಭೂತವಾಗಿ ಶಿಕ್ಷಣ ಸಂಸ್ಥೆಗಳಿಗೆ ಏನು ಕೊಡಬೇಕಾಗಿದೆ. ಅದನ್ನು ಕೊಟ್ಟಿಲ್ಲ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಇನ್ನು ಕರಾವಳಿ ಮೀನುಗಾರರ ಬಗ್ಗೆ ನಾನು ಸ್ವಲ್ಪ ಹೇಳಲೇಬೇಕಾಗುತ್ತದೆ. ಇವತ್ತು ಕರಾವಳಿ ಮೀನುಗಾರರು ತಮ್ಮ ಜೀವದ ಹಂಗು ತೊರೆದು ಸಮುದ್ರದಲ್ಲಿ ಮೀನನ್ನು ಹಿಡಿದು ಜೀವನವನ್ನು ಸಾಗಿಸುತ್ತಿದ್ದಾರೆ. ಅವರು ಸರಕಾರಕ್ಕೆ ಏನು ಕೊಟ್ಟಿದ್ದಾರೆಂಬುದಕ್ಕಿಂತ ಸರಕಾರ ಅವರಿಗೆ ಏನು ಕೊಟ್ಟಿದೆ ಎಂಬುದು ಮುಖ್ಯವಾದುದು. ಮೀನುಗಾರರಿಗೆ ಮನೆಗಳನ್ನು ಕಟ್ಟಿಸಿ ಕೊಡುತ್ತೇವೆಂದು ಮತ್ತು ಅವರಿಗೆ ದೋಣಿ ತಂಗುದಾಣಗಳನ್ನು ಮಾಡಿಕೊಡುತ್ತೇವೆಂದು ಹಿಂದಿನ ಸರಕಾರದವರು ಘೋಷಣೆ ಮಾಡಿದ್ದರು. ನಂತರ ಮೀನುಗಾರರಿಗೆ ಬೇಕಾದ ಬಲೆ ಮತ್ತಿತರ ಉಪಕರಣಗಳನ್ನು ಸಬ್ಸಿಡಿ ದರಗಳಲ್ಲಿ ಕೊಡುತ್ತೇವೆಂದು ಘೋಷಣೆ ಮಾಡಿದ್ದರು. ಆದರೆ ಈ ಯಾವ ಘೋಷಣೆಗಳನ್ನು ತಾವು ಕಾರ್ಯಗತಗೊಳಿಸಿದ್ದೀರಿ?

ಉಪಾಧ್ಯಕ್ಷರು.—ತಾವು ಬೇಗನೆ ಮುಗಿಸಬೇಕು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ನಾನು ಪ್ರತಿನಿಧಿಸತಕ್ಕಂತಹ ಕ್ಷೇತ್ರದ ಬಗ್ಗೆ ಹೇಳಿ ಮುಗಿಸುತ್ತೇನೆ. ಸರಕಾರ ಮಾಡುವ ಘೋಷಣೆಗಳು ಬರೀ ಘೋಷಣೆಗಳಾಗಿರದೆ ಜನರ ಮನಮುಟ್ಟುವಂತೆ ಅವರಿಗೆ ಬೇಕಾದಂತಹ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ನಿಮ್ಮ ಪ್ರಚಾರ ಮಾಧ್ಯಮಗಳಾಗಲೀ ನಿಮ್ಮ ಅಂಕಿಸಂಖ್ಯೆಗಳಾಗಲೀ ಅವರಿಗೆ ಅವಶ್ಯಕತೆ ಇಲ್ಲ. ಈ ಭಾಷಣದಲ್ಲಿ ಏನು ತಮ್ಮ ನೀತಿ ಧೋರಣೆಗಳನ್ನು ತಿಳಿಸಿದ್ದೀರಿ ಅದನ್ನು ಸಮರ್ಪಕವಾಗಿ ಆದಷ್ಟು ಶೀಘ್ರವಾಗಿ ಕಾರ್ಯಗತಗೊಳಿಸಲಿಕ್ಕೆ ಅಗತ್ಯವಾದ ಕ್ರಮವನ್ನು ಸರಕಾರ ಕೈಗೊಳ್ಳಬೇಕೆಂದು ಒತ್ತಾಯಿಸಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಪಾಟೀಲ್ (ಹುಲಕೋಟಿ).—ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ಭಾಷಣದ ಬಗ್ಗೆ ವಂದನೆಗಳನ್ನು ಸಮರ್ಪಿಸುತ್ತಾ ಮಾನ್ಯ ಸದಸ್ಯರುಗಳು ಮಾತನಾಡುತ್ತಾ ಅವಸರದಲ್ಲಿ ಕೆಲವು ಮಾತುಗಳನ್ನು ಮರೆತಂತೆ ಕಾಣುತ್ತದೆ, ಅವುಗಳ ಬಗ್ಗೆ ಮಾತ್ರ ಒಂದೆರಡು ಮಾತುಗಳನ್ನು ನಾನು ಹೇಳುತ್ತೇನೆ. ಮಾನ್ಯ ರಾಜ್ಯಪಾಲರು ಮೊಟ್ಟಮೊದಲನೆಯದಾಗಿ, ಆಡಳಿತಾತ್ಮಕವಾದ ವಿಷಯದಲ್ಲಿ ಕೆಲವು ಮಾತುಗಳನ್ನು ಆಡಿದ್ದಾರೆ. ನಮ್ಮ ಆಡಳಿತ ಸರಿಯಾಗಿ ಸಾಗಿದರೆ ಮಾತ್ರ ನಾವು ಮಾಡತಕ್ಕಂತಹ ಕಾರ್ಯಕ್ರಮಗಳಾಗಲಿ ಅಥವಾ ಚಟುವಟಿಕೆಗಳಾಗಲಿ ಸಮರ್ಪಕವಾಗಿ ನಡೆಯುತ್ತವೆ. ಆಡಳಿತ ಸರಿಯಾಗಿ ನಡೆಯಬೇಕಾದರೆ ಮೊಟ್ಟಮೊದಲನೆಯದಾಗಿ ರೀ ಆರ್ಗನೈಸೇಷನ್ ಸರಿಯಾಗಿ ಆಗಬೇಕು. ಕರ್ನಾಟಕ ಪ್ರಾಂತ್ಯ ಬಹುದೊಡ್ಡದಾದ ಪ್ರಾಂತ್ಯ. ಈ ಪ್ರಾಂತ್ಯದಲ್ಲಿ ಕೆಲವು ತಾಲ್ಲೂಕುಗಳು ಅತಿ ಸಣ್ಣದಾಗಿದೆ. ಈಗ ಕೂರ್ಗ್ ಜಿಲ್ಲೆ ತೆಗೆದುಕೊಂಡರೆ ಇದು ಸ್ವಲ್ಪ ತಾಲ್ಲೂಕುಗಳಿಂದ ಕೂಡಿದಾಗಿದೆ. ಕಾರವಾರ ಜಿಲ್ಲೆಯೂ ಕೂಡ ಅದೇರೀತಿಯಾಗಿದೆ. ಇನ್ನು ಕೆಲವು ದೊಡ್ಡ ದೊಡ್ಡ ಜಿಲ್ಲೆಗಳಾಗಿವೆ. ಇವೆಲ್ಲವುಗಳಿಗೂ ಸಮರ್ಪಕವಾದಂಥ ಹಣದ ವಿತರಣೆಯಾಗಬೇಕಾದರೆ ಕಾರ್ಯಾಚರಣೆಗಳು ವಿತರಣೆಯಾಗಬೇಕಾದರೆ ನಮ್ಮಲ್ಲಿ ಜಿಲ್ಲೆಗಳು ಪುನರ್ವಿಂಗಡಣೆಯಾಗುವುದು ಅತ್ಯಂತ ಅವಶ್ಯಕವಾಗಿದೆ. ರಾಜ್ಯ ಸರಕಾರವಾಗಲಿ ರಾಷ್ಟ್ರ ಸರಕಾರವಾಗಲಿ ಅಥವಾ ಪ್ಲಾನಿಂಗ್ ಕಮೀಷನ್ ಆಗಲೀ ಈ ಜಿಲ್ಲೆಗಳ ಪುನರ್ವಿಂಗಡನೆಯ ಆಧಾರದ ಮೇಲೆ ಹಣವನ್ನು ವಿತರಣೆ ಮಾಡುವಂತಹ ಸಂಪ್ರದಾಯ ಇರುವುದು

ನಮ್ಮೆಲ್ಲರಿಗೂ ಗೊತ್ತಿದೆ. ಆದರೆ ದುರ್ದೈವ, ಈ ವಿಷಯವಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಅಕ್ಷರವನ್ನೂ ಬರೆಯದು ಇರುವುದೆ ನನಗೆ ವಿಷಾದವನ್ನುಂಟುಮಾಡಿದೆ.

ಮಾನ್ಯ ರಾಜ್ಯಪಾಲರು ಈ ವಿಷಯವನ್ನು ವಿಚಾರ ಮಾಡಿದಿದ್ದರೆ ಅವರಿಗೆ ಅನಿಸುತ್ತಿತ್ತು. ೧೯೭೫ನೇ ಇಸವಿಯಲ್ಲಿ ದಿವಂಗತ ದೇವರಾಜ ಅರಸ್‌ರವರ ಮಂತ್ರಿಮಂಡಲ ಇದ್ದಾಗ ವಾಸುದೇವರಾವ್ ಸಮಿತಿ ವರದಿಯನ್ನು ಸ್ವೀಕರಿಸಿದರು. ಜಿಲ್ಲೆಗಳನ್ನು ಯಾವರೀತಿ ಪುನರ್ ವಿಂಗಡಣೆ ಮಾಡಬೇಕು, ತಾಲ್ಲೂಕುಗಳನ್ನು ಯಾವರೀತಿ ಪುನರ್ ವಿಂಗಡಣೆ ಮಾಡಬೇಕೆಂದು ಅವರು ವರದಿಕೊಟ್ಟರು. ಆ ವರದಿಯನ್ನು ಆಧರಿಸಿ ಜಿಲ್ಲೆಗಳನ್ನು ಮಾಡಿದ್ದರೆ ಹೆಚ್ಚು ಸೂಕ್ತವಾಗುತ್ತಿತ್ತು. ಇದರ ಜೊತೆಗೆ ಕೆಲವು ಅಧಿಕಾರೇತರರ ಕಡೆಯಿಂದ ವಿಚಾರಣೆ ಮಾಡಿಸೋಣ ಹೆಚ್ಚು ವ್ಯಾಪಕವಾಗುವಂಥ ರೀತಿಯಲ್ಲಿ ಮಾಡಿಸೋಣ ಎಂದು ಹುಂಡೇಕರ್ ಸಮಿತಿಯನ್ನು ೧೯೮೪ರಲ್ಲಿ ನೇಮಕ ಮಾಡಿದರು. ಶ್ರೀಮಾನ್ ಹುಂಡೇಕರ್ ಸಮಿತಿಯವರು ಬಹಳಕಾಲವನ್ನು ತೆಗೆದುಕೊಂಡು ಅಧಿಕಾರಿಗಳನ್ನು, ಅಧಿಕಾರೇತರರನ್ನು ಶಾಸಕರನ್ನು, ಮಂತ್ರಿಗಳನ್ನು ಹೀಗೆ ಎಲ್ಲರನ್ನೂ ವಿಚಾರ ಮಾಡಿ ೭-೮-೮೬ರಲ್ಲಿ ಒಂದು ವರದಿಯನ್ನು ಕೊಟ್ಟರು. ಆ ರಿಪೋರ್ಟ್ ಕೂಡಲೇ ಅಮಲಿನಲ್ಲಿ ಬರಬಹುದು ಎಂದು ಅನೇಕ ಜನ ವಿಚಾರ ಮಾಡಿದರು ಆದರೆ ಅದು ಆಗಲಿಲ್ಲ. ಅನಂತರ ಶ್ರೀಮಾನ್ ಗದ್ದಿಗೌಡರ ಸಮಿತಿಯನ್ನು ನೇಮಕ ಮಾಡಿದರು. ಇವರು ೧೯೮೭ ೮೮ರಲ್ಲಿ ಒಂದು ವರದಿಯನ್ನು ಕೊಟ್ಟರು. ಅವರು ವರದಿಯನ್ನು ಕೊಟ್ಟು ಇಷ್ಟು ದಿವಸವಾದರೂ ಸರ್ಕಾರದವರು ಕಣ್ಣುಮುಚ್ಚಿಕೊಂಡು ಕುಳಿತದ್ದು ನಿಜವಾಗಿಯೂ ಶೋಚನೀಯ ವಾದದು. ಬಹುಶಃ ಜನತಾ ಪಕ್ಷದವರು ತಮ್ಮ ತಮ್ಮೊಳಗಿನ ಜಗಳದ ಪರಿಣಾಮವಾಗಿ ಅಥವಾ ಬೇರೆ ಇನ್ನಾವುದಾದರೂ ಸಮಸ್ಯೆಗಳಿಂದ ಈ ಕೆಲಸವನ್ನು ಮಾಡುವುದನ್ನು ಮರೆತರೋ ಗೊತ್ತಿಲ್ಲ, ಅವರು ಮರೆತರೂ ಪರವಾಗಿಲ್ಲ. ಅವರು ಮಾಡದೇ ಮರೆತಂಥ ಕೆಲಸವನ್ನು ಮಾಡಬೇಕಾದ ಜವಾಬ್ದಾರಿ ನಮ್ಮ ವೀರೇಂದ್ರ ಪಾಟೀಲರ ಮಂತ್ರಿ ಮಂಡಲದ ಮೇಲಿದೆ. ದಾವಣಗೆರೆ ಜಿಲ್ಲೆಯಾಗಲಿ ದಾವಣಗೆರೆ ಯಲ್ಲಿ ಒಂದು ಯೂನಿವರ್ಸಿಟಿ ಮಾಡಬೇಕೆಂದು ಹೇಳಿದೆವು. ದಾವಣಗೆರೆ ಕೇಂದ್ರವಾದಂಥ ಪ್ರದೇಶ, ಅದು ಜಿಲ್ಲೆಯಾಗಲಿಕ್ಕೆ ಸರ್ವರೀತಿಯಲ್ಲೂ ಯೋಗ್ಯವಾದಂಥಾದ್ದಿದೆ. ಅದೇರೀತಿ ಗದಗ್ ಜಿಲ್ಲೆಯಾಗಲಿಕ್ಕೆ ಯೋಗ್ಯವಾದಂಥಾದ್ದಿದೆ. ಗದಗ್‌ನಲ್ಲಿ ಅನೇಕ ಭಾಗಗಳನ್ನು ಕೂಡಿಸಿ ಗದಗ್ ಯಾವರೀತಿ ಜಿಲ್ಲೆಯಾಗ ಬೇಕು, ಧಾರವಾಡ ದೊಡ್ಡದಾದಂಥ ಪ್ರದೇಶ ಅದನ್ನು ಯಾವರೀತಿ ವಿಂಗಡಣೆ ಮಾಡಬೇಕೆಂದು ಸ್ಪಷ್ಟವಾಗಿ ಮೂರೂ ಸಮಿತಿಯವರು ತಮ್ಮ ವರದಿಯಲ್ಲಿ ನಮೂದಿಸಿದ್ದಾರೆ. ಆದರೂ ಕೂಡ ಈ ಕೆಲಸವನ್ನು ಸರ್ಕಾರದವರು ಮಾಡಲಿಕ್ಕೆ ಆಗಲಿಲ್ಲ. ಅದೇರೀತಿ ಚಾಮರಾಜ ನಗರವನ್ನೂ ಕೂಡ ಗಣನೆಗೆ ತೆಗೆದುಕೊಳ್ಳಬೇಕು. ಇವೆಲ್ಲವನ್ನು ಕೊಡುವಂಥ ಜವಾಬ್ದಾರಿ ಸರ್ಕಾರಕ್ಕೆ ಸೇರಿದ್ದು. ಫೈನಾನ್‌ಷಿಯಲ್ ಡಿಫಿಕಲ್ಟಿ ಈ ರಾಜ್ಯಸರ್ಕಾರಕ್ಕೆ ಯಾವಾಗಲೂ ಇದ್ದೇ ಇರುತ್ತದೆ. ಏಕೆಂದರೆ ನಾವು ಉತ್ಪಾದನೆಯನ್ನು ಹೆಚ್ಚಿಸತಕ್ಕ ಕೆಲಸವನ್ನು ಏನೂ ಮಾಡುವುದಿಲ್ಲ. ಕಾಂಗ್ರೆಸ್‌ನವರು ಜನತಾ ಸರ್ಕಾರದ ಮೇಲೆ, ಜನತಾ ಸರ್ಕಾರದವರು ಕಾಂಗ್ರೆಸ್ ಮೇಲೆ ದೂರಿಕೊಂಡು ಹೋಗುವುದರಿಂದ ಉತ್ಪಾದನೆ ಜಾಸ್ತಿಯಾಗುವುದಿಲ್ಲ. ಅಗ್ರೋ ಬೇಸ್ಡ್ ಇಂಡಸ್ಟ್ರೀಸ್‌ನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಪ್ರಾರಂಭ ಮಾಡಿದರೆ ಉತ್ಪಾದನೆ ತಾನೇ ತಾನಾಗಿ ಜಾಸ್ತಿಯಾಗುತ್ತದೆ. ಆದ್ದರಿಂದ ಉತ್ಪಾದನೆಯನ್ನು ಜಾಸ್ತಿ ಮಾಡಲು ಎಲ್ಲ ಪಕ್ಷದವರೂ ಕೂಡಿ ಕೆಲಸ ಮಾಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನೂ ಮುಂದಾದರೂ ಈ ಜಿಲ್ಲೆಗಳನ್ನು ಪುನರ್ ವಿಂಗಡಣೆ ಮಾಡತಕ್ಕ ಕೆಲಸವನ್ನು ತೀವ್ರವಾಗಿ ಮಾಡಬೇಕು. ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಬೋರ್ಡಿಗೆ ಹೇಗೆ ಹಣವನ್ನು ಶೇಖರಿಸಿ ಒಂದು ಕೀರ್ತಿಯನ್ನು ಪಡೆದುಕೊಳ್ಳಬೇಕೆಂದು ಹೇಳುತ್ತಾರೊ ಅದೇರೀತಿ ಜಿಲ್ಲೆಗಳನ್ನು ಪುನರ್ ವಿಂಗಡಣೆ ಮಾಡಿ ಕೀರ್ತಿ ಪಡೆಯಬೇಕು. ಅದಕ್ಕೆ ವಿರೋಧಿ ಪಕ್ಷದವರೂ ಸಹಿತ ಸಹಾಯಕರಾಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ನೀರು ಸರಬರಾಜಿನ ಬಗ್ಗೆ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಬಹಳ ಸುಂದರವಾಗಿ ಏನು ಹೇಳಿದ್ದಾರೆಂದರೆ, "ನನ್ನ ಸರ್ಕಾರವು. ಸಾಂಸ್ಥಿಕ ಹಣಕಾಸು ನೆರವಿನೊಂದಿಗೆ ರಾಜ್ಯದಲ್ಲಿನ ೨೭ ಪಟ್ಟಣಗಳು ಹಾಗೂ ನಗರಗಳಿಗೆ ನೀರು ಪೂರೈಕೆಯನ್ನು ಹೆಚ್ಚಿಸಲು ಯೋಜನೆಗಳನ್ನು ರೂಪಿಸಿದೆಯೆಂಬುದು ಮಾನ್ಯ ಸದಸ್ಯರಿಗೆ ಸಂತೋಷ ತರುವ ವಿಷಯವಾಗಿದೆ" ಎಂದು ಹೇಳಿದ್ದಾರೆ. ಇದು ನಿಜ. ೨೭ ಪಟ್ಟಣ ಹಾಗೂ ನಗರಗಳಿಗೆ ನೀರನ್ನೊದಗಿಸಲು ಪ್ಲಾನು, ಎಸ್ಟಿಮೇಟ್ ಮಾಡಿದ್ದಾರೆ. ಆದರೆ ಹಿಂದೆ ಮಂಜೂರಾಗಿ ಪ್ಲಾನ್ ಮತ್ತು ಎಸ್ಟಿಮೇಟ್ ಎಗ್ಸಿಕ್ಯೂಟ್ ಆದಂಥ ಕೆಲಸಗಳನ್ನು ಏನು ಮಾಡಿದ್ದೀರಿ. ೧೯೭೫ರಲ್ಲಿ ಮಾನ್ಯ ದೇವರಾಜ ಅರಸರ ಕಾಲದಲ್ಲಿ ಹಾಕಿದಂಥ ಫೌಂಡೇಷನ್ ಸ್ಟೋನ್ ಇವತ್ತಿಗೂ ಹಾಗೆಯೇ ಇದೆ. ಆ ಕೆಲಸ ಪೂರ್ತಿ ಆಗಿಲ್ಲ. ಮಂತ್ರಿಗಳು ಬರುತ್ತಾರೆ ಹೋಗುತ್ತಾರೆ, ಸರ್ಕಾರಗಳು ಬರುತ್ತವೆ, ಹೋಗುತ್ತವೆ, ಆದರೆ ಖಾಯಂ ಆಗಿರತಕ್ಕ ಅಧಿಕಾರಿಗಳ ದಕ್ಷತೆ ಎಲ್ಲಿ

ಹೋಗುತ್ತದೆ, ಅವರು ಏತಕ್ಕೆ ದಕ್ಷತೆಯಿಂದ ಈ ಕೆಲಸವನ್ನು ಮಾಡಲಿಲ್ಲ. ೧೫ ವರ್ಷಗಳ ಕಾಲ ಆದರೂ ಯಾವ ಒಂದು ನೀರಿನ ಯೋಜನೆಯನ್ನು ಪೂರ್ಣವಾಗಿ ಮಾಡಿಲ್ಲ, ಎಂದರೆ ಇದಕ್ಕಿಂತ ಹೆಚ್ಚು ಅದಕ್ಷತೆಯ ಪರಿಣಾಮ ಯಾವುದಿದೆ ಎಂದು ಪ್ರಶ್ನೆ ಮಾಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ನನಗೆ ಗದಗಿನ ಬಗ್ಗೆ ಒಂದು ಪತ್ರವನ್ನು ಬರೆದಿದ್ದಾರೆ. ಈಗ ಹೇಳುವುದೇನೆಂದರೆ ನೀವು ಎಲ್ಲ ಯೋಜನೆಗಳನ್ನೂ ಪೂರ್ತಿಯಾಗಿ ಅಧ್ಯಯನ ಮಾಡಿ ಯಾವ ಯಾವ ಅಧಿಕಾರಿಗಳು ಏನೇನು ತಪ್ಪು ಮಾಡಿದ್ದಾರೆ ಎಂಬುದನ್ನು ನೋಡಿ ಅವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ೫೮ ವರ್ಷದ ವರೆಗೆ ಅವರು ಇರುವುದು ಬೇಡ, ೫೫ ವರ್ಷಕ್ಕೆ ರಿಟೈರ್ ಮಾಡಿ. ಒಂದು ವೇಳೆ ಹೊಸ ಅಧಿಕಾರಿಗಳು ಏನಾದರೂ ಬಂದಿರುವವರಿದ್ದರೆ ಅವರಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಂಡು ಹೊರಗೆ ಹಾಕಿದರೆ ನಮ್ಮ ದಕ್ಷತೆ ಬೆಳೆಯುತ್ತದೆ. ಯೋಜನೆಯ ಹೆಸರಿನಲ್ಲಿ ಹಣ ಬಂದರೂ ಸಹ ಆ ಹಣ ಎಲ್ಲಿ ಖರ್ಚಾಗುತ್ತದೆಂದರೆ ಅವರ ಪಗಾರ ಮತ್ತು ಭತ್ಯೆಗಳಿಗೋಸ್ಕರ ಖರ್ಚಾಗುತ್ತದೆ. ಇದು ನಿಜವಾಗಿಯೂ ತಪ್ಪಬೇಕೆನ್ನುವ ಮಾತನ್ನು ನಾನು ಹೇಳಲು ಇಚ್ಛೆಪಡುತ್ತೇನೆ. ಮೂರನೆಯ ಮಾತೆಂದರೆ, ಮಾನ್ಯ ವಿರೋಧಪಕ್ಷದ ಸ್ನೇಹಿತರಿಗೆ ಬಹಳ ನೊಂದು ಹೇಳುತ್ತೇನೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಸಹಕಾರಿ ಚಳುವಳಿ ಬಹಳ ಉತ್ಸುಕತೆಯಿಂದ ಬೆಳೆದುಬಂದಿದೆ. ಸಹಕಾರಿ ಚಳುವಳಿ ಇನ್ನಷ್ಟು ಬೆಳೆಯಬೇಕು. ನಾವು ಬಹಳ ದೊಡ್ಡವರಾಗಿಲ್ಲದಿದ್ದರೂ, ಕಾರ್ಯಪ್ರವೃತ್ತರಾಗಿಲ್ಲದಿದ್ದರೂ ನಮ್ಮ ಅಪ್ಪನಕಾಲಕ್ಕೆ ಸಹಕಾರಿ ಚಳುವಳಿ ಹುಟ್ಟಿದ್ದು ಎಂದು ಹೇಳುವಷ್ಟರ ಮಟ್ಟಿಗಾದರೂ ಕರ್ನಾಟಕದವರಿಗೆ ಒಂದು ಹೆಮ್ಮೆ ಇದೆ. ಆದರೆ ಈಗ ಏನಾಗಿದೆ ಎಂದರೆ ಬಡ್ಡಿ ಸೂಟು ಬಿಡುತ್ತೇವೆ, ಸಾಲ ಸೂಟಿ ಬಿಡುತ್ತೇವೆ ಎನ್ನುವುದರೊಳಗೆ ಸಹಕಾರಿ ಚಳುವಳಿಯನ್ನು ಮುಚ್ಚುತ್ತೇವೆ ಎನ್ನುವ ಮಾತನ್ನು ನೆನಪಿಡಬೇಕಾಗುತ್ತದೆ. ೬೦ ವರ್ಷಗಳ ಕಾಲದಿಂದ ನಡೆದುಬಂದ ಈ ಸಹಕಾರಿ ಚಳುವಳಿಯನ್ನು ನಾವು ಕೇವಲ ರೈತರ ಹಿತ ಮಾಡುತ್ತೇವೆಂದು ಹೇಳಿ ಈ ಹಣ ಸೂಟ್ ಬಿಡುವುದರಿಂದ ರೈತರ ಹಿತ ಆಗುತ್ತದೆಯೆ? ಡಿ. ಡಿ. ಡಿಆರ್‌ಐ ಆಕ್ಟ್ ಮಾಡಿದಿರಿ. ಹಣ ಸೂಟ್ ಬಿಟ್ಟಿರಿ, ಸಹಕಾರಿ ಸಾಲವನ್ನು ಸೂಟ್ ಬಿಡಿಸಿದಿರಿ ಆದರೆ ಇವತ್ತು ಸಹಕಾರಿ ಸಾಲ ಸೂಟ್ ಬಿಟ್ಟ ರೈತರು ಒಬ್ಬನಾದರೂ ಉದ್ಧಾರ ಆದುದನ್ನು ಯಾರಾದರೂ ನನ್ನ ನಜರಿಗೆ ತಂದರೆ ನಾನು ಅವರಿಗೆ ಶರಣಾಗುತ್ತೇನೆ. ಸಾಲ ಸೂಟ್ ಬಿಟ್ಟಿದ್ದರಿಂದ ಸೊಸೈಟಿಗಳು ಹೋಯಿತು, ರೈತರೂ ಉದ್ಧಾರವಾಗಲಿಲ್ಲ. ನಮ್ಮ ಹಳ್ಳಿಗಳಲ್ಲಿ ಒಂದು ಗಾದೆ ಇದೆ. "ನಾನು ಸತ್ತರೆ ಸಾವಿಲ್ಲಪ್ಪ, ನಾನು ಯಾರ ಹತ್ತಿರ ಸಾಲ ತಂದಿದ್ದೇನೆಯೋ ಅವರ ಋಣ ತೀರಿಸುತ್ತೇನೆಂದು ಹೇಳುತ್ತಾರೆ" ಋಣ ತೀರಿಸುವಂಥ ಜವಾಬ್ದಾರಿ, ನೈತಿಕ ಹೊಣೆಯನ್ನು ಹೊತ್ತಂತ ದೊಡ್ಡ ಮನುಷ್ಯ ರೈತ. ಅವನ ಹೆಸರನ್ನು ಹೇಳಿ ಕೆಲವು ರೈತರಿಗೆ ಸಾಲ ಸೂಟು ಬೀಡಬೇಕೆಂಬ ನೆವದಿಂದ ರೈತನ ಅಜ್ಞಾನದ ದುರುಪಯೋಗವನ್ನು ನಾವು ಮಾಡಿಕೊಳ್ಳುತ್ತೇವೆ ಎನ್ನುವ ಮಾತನ್ನು ನಾವು ಮರೆಯಬಾರದು. ಇವತ್ತು ಹೇಳುತ್ತೇನೆ. ಮುಖ್ಯಮಂತ್ರಿಗಳಿಗೆ ಧೈರ್ಯ ಬರಬೇಕಾದರೆ ವಿರೋಧ ಪಕ್ಷದವರು ಇವತ್ತು ಅವರಿಗೆ ಧೈರ್ಯ ಕೊಡಬೇಕು. ನೀವು ಸಾಲವನ್ನು ಸೂಟು ಬಿಡುವುದು ಬೇಡ, ಆದರೆ ರೈತರ ಸಲುವಾಗಿ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಆಗ್ರೊ ಬೇಸ್ಡ್ ಇಂಡಸ್ಟ್ರಿ ತೆಗೆಯಿರಿ, ಕೋಆಪರೇಟೀವ್ ಇಂಡಸ್ಟ್ರಿ ತೆಗೆಯಿರಿ, ರೈತರಿಗೆ ಬೇಕಾಗುವ ಶೇರಿನ ಹಣವನ್ನು ಕೊಡಿರಿ. ಅದನ್ನು ಆತನು ಉಪಯೋಗ ಮಾಡಿ ಆದರಿಂದ ಸಂಸ್ಥೆಗಳನ್ನು ಕಟ್ಟಲಿ ಎಲ್ಲೆಲ್ಲಿ ಯಾವ ಯಾವ ಆಗ್ರೊ ಪ್ರೊಡ್ಯೂಸ್ ಬೆಳೆಗಳನ್ನು ಬೆಳೆಯುತ್ತಾನೆ ಅಂಥವುಗಳಿಗೆ ಆಯಾ ಸ್ಥಳಗಳಲ್ಲಿ ಆಯಾ ಪಟ್ಟಣಗಳಲ್ಲಿ ಆಯಾಯ ಊರುಗಳಲ್ಲಿ ಸಂಸ್ಥೆಗಳನ್ನು ಮಾಡಿದರೆ ಅದರಮುಖಾಂತರ ಆತನು ಉತ್ಪಾದನೆ ಹೆಚ್ಚು ಮಾಡಲಿ ಎನ್ನುವ ಸ್ಥಿತಿಯಲ್ಲಿ ಮಾಡಬೇಕೆಂದು ಕೇಳಿಕೊಂಡು, ಇಷ್ಟು ಮಾತನಾಡಲು ಮಾನ್ಯ ಉಪಾಧ್ಯಕ್ಷರು ನನಗೆ ಸ್ಪೆಷಲ್ ಆಗಿ ಟೈಮ್ ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ).—ಮಾನ್ಯ ಉಪಾಧ್ಯಕ್ಷಿಣಿಯವರೇ, ರಾಜ್ಯದ ರಾಜ್ಯಪಾಲರು ೧೫ನೇ ತಾರೀಖು ಮಾಡಿದಂಥ ಭಾಷಣಕ್ಕೆ ವಂದನೆಯನ್ನು ಸೂಚಿಸುವ ನಿರ್ಣಯ ಏನು ಇದೆ ಅದನ್ನು ವಿರೋಧ ಮಾಡುತ್ತಾ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಈ ಭಾಷಣ ಈಗಾಗಲೇ ಈ ಸದನದಲ್ಲಿ ಈ ಸರ್ಕಾರ ಬಂದಮೇಲೆ ಮಾಡಿದ ಎರಡನೆಯ ಭಾಷಣವಾಗಿದೆ. ಮಾನ್ಯ ಅಧ್ಯಕ್ಷಣಿಯವರೇ ಚುನಾವಣೆಗೆ ಮುನ್ನ ಅಧಿಕಾರದಲ್ಲಿದ್ದಂಥ ಯಾವುದೇ ಪಕ್ಷದ ಸರ್ಕಾರ, ಬರುವ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಹಿಂದಿನ ವರ್ಷ ರಾಜ್ಯಪಾಲರ ಮೂಲಕ ಮಾಡಿದಂಥ ಭಾಷಣಕ್ಕೆ ಮತ್ತು ಆ ವರ್ಷ ಅಂದಿನ ಸರ್ಕಾರ ಆಯುವ್ಯಯ ಪತ್ರದ ಮುಖಾಂತರ ಹೇಳಿದಂಥ ಮಾತುಗಳಿಗೆ ಏನು ಪ್ರಾಮುಖ್ಯತೆ ಇರಬಹುದೋ ಅದಕ್ಕಿಂತ ಹೆಚ್ಚು ಪ್ರಾಮುಖ್ಯತೆಯನ್ನು ಚುನಾವಣೆಯಾದ ನಂತರ ಬಂದ ಸರ್ಕಾರ ಗೆಲುವನ್ನು ಮನಸ್ಸಿನಲ್ಲಿಟ್ಟುಕೊಂಡು ಹುಮ್ಮನಸ್ಸಿನಿಂದ ಕೆಲವು ಕಾರ್ಯಕ್ರಮಗಳನ್ನು ರೂಪಿಸುವಂಥದ್ದನ್ನು ನಾವು ಕಂಡುಕೊಂಡಿದ್ದೇವೆ. ಮೊದಲನೆಯದಾಗಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೆಚ್ಚಿನ ವಿವರಗಳನ್ನು ಕೊಡದಿದ್ದರೂ ಸರ್ಕಾರದ ಕೆಲವು ವಿಚಾರಗಳನ್ನು ಪ್ರಸಾ

ಮಾಡಿದ್ದಾರೆ. ಈ ಸರ್ಕಾರದ ಅರ್ಥ ಮಂತ್ರಿಗಳೂ ಸಹ ತಮ್ಮ ಆಯವ್ಯಯ ಪತ್ರದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ, ಅಧಿಕಾರಕ್ಕೆ ಬರುವಾಗ ಮತ್ತು ಬಂದ ಮೇಲೆ ನಾವು ಅನೇಕ ವಿಚಾರಗಳನ್ನು ಜನರ ಕಲ್ಯಾಣ ದೃಷ್ಟಿಯಿಂದ ಮಾಡುತ್ತೇವೆ ಎಂಬ ಮಾತನ್ನು ಹೇಳುವುದನ್ನು ನಾವು ಕೇಳಿದ್ದೇವೆ. ಅದೇ ರೀತಿಯಲ್ಲಿ ಈ ಸರ್ಕಾರವು ಸಹ ಈ ಒಂದು ಭಾಷಣದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದೆ. ಸರ್ಕಾರಿ ನೌಕರರ ಮುಷ್ಕರದಿಂದ ಹಿಡಿದು ಕನ್ನಡ ಭಾಷೆಯನ್ನು ಆಡಳಿತದಲ್ಲಿ ಉಪಯೋಗ ಮಾಡುವವರೆಗೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದೆ. ಹೀಗೆ ಮಾಡಿದಂಥ ಅನೇಕ ವಿಚಾರಗಳನ್ನು ನಾವು ಒಪ್ಪುವುದಿಲ್ಲವೆಂಬ ಮಾತನ್ನು ಹೇಳಿದ್ದೇನೆ. ಸಾರ್ವಜನಿಕವಾಗಿ ಯಾವುದೇ ಸರ್ಕಾರ ಇದ್ದರೂ ಸಹ ಹೇಳುವಂತಹ ಮಾತುಗಳನ್ನು ಇವರು ಹೇಳಿದ್ದಾರೆ. ಮೊದಲನೆಯದಾಗಿ ಆಡಳಿತದಲ್ಲಿ ದಕ್ಷತೆ ಇರಬೇಕು, ಸೇವಾ ಶಿಸ್ತನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂದು ಹೇಳಿದ್ದಾರೆ. ನೌಕರಶಾಹಿ ವ್ಯವಸ್ಥೆ ಜನಸಾಮಾನ್ಯರ ಆಶೋತ್ತರಗಳಿಗೆ ಸ್ಪಂದಿಸುತ್ತಿಲ್ಲ ಎಂದು ಹೇಳಿದ್ದಾರೆ. ಭ್ರಷ್ಟಾಚಾರ ಎಲ್ಲಾ ಕಡೆ ವ್ಯಾಪಿಸಿದೆ ಎಂದು ಹೇಳಿದ್ದಾರೆ. ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾ ಇವುಗಳನ್ನು ಹತ್ತಿಕ್ಕಲಿಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. ಇದನ್ನು ನಾವು ಇಷ್ಟರಮಟ್ಟಿಗೆ ಒಪ್ಪುತ್ತೇವೆ. ಆದರೆ ಈಗ ಅವರು ತೆಗೆದುಕೊಳ್ಳುವಂತಹ ಕ್ರಮಗಳು ಈ ಎಲ್ಲಾ ಸಮಸ್ಯೆಗಳನ್ನು ನಿವಾರಣೆ ಮಾಡಿ ದೇಶದಲ್ಲಿರತಕ್ಕ ನಿರುದ್ಯೋಗ, ಬಡತನ ಮತ್ತು ಅನಕ್ಷರತೆಯನ್ನು ಹೋಗಲಾಡಿಸಿ ಹೊಸ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವುದಕ್ಕೆ ಸಹಕಾರಿಯಾದಂಥ ಕಾರ್ಯನೀತಿಯನ್ನು ಇವರು ಅನುಸರಿಸುತ್ತಿದ್ದಾರೆಯೋ ಎಂಬುದರ ಬಗ್ಗೆ ನಾವು ಇವತ್ತು ಆಲೋಚನೆ ಮಾಡಿದರೆ ತಮಗೆ ಗೊತ್ತಾಗುತ್ತದೆ. ಮುಂದೆ ನಾನು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದಾಗ ಈ ಸರ್ಕಾರ ಯಾವ ರೀತಿ ತನ್ನ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತದೆ ಎನ್ನುವುದರ ಬಗ್ಗೆ ತಾವು ವಿಚಾರ ಮಾಡಬಹುದಾಗಿದೆ. ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಮಾತಿನ ಸಂಘರ್ಷಣೆಯಿಂದ ಅಥವಾ ಚರ್ಚೆಯ ಧಾಟಿಯಿಂದ ಬಿಸಿಯಾದ ವಾತಾವರಣವನ್ನು ಉಂಟುಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಆದರೆ ಇರುವಂಥ ಆಡಳಿತ ವ್ಯವಸ್ಥೆ ಬಗ್ಗೆ ಬೆಳಕನ್ನು ಚೆಲ್ಲುವಂಥ ಪ್ರಯತ್ನ ಮಾಡುತ್ತೇನೆ. ಈಗಾಗಲೇ ಆ ಕಡೆಯ ಅನೇಕ ಸದಸ್ಯರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಪದೇ ಪದೇ ಆ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟವಿಲ್ಲದಿದ್ದರೂ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ವಿರೋಧ ಪಕ್ಷದ ಸದಸ್ಯರಾದ ನೀವು ಏನು ಮಾಡಿದ್ದೀರಿ ನಿಮ್ಮ ಸರ್ಕಾರ ಇದ್ದಾಗ ಎಂದು ಪ್ರಶ್ನೆ ಮಾಡುತ್ತಾ ಅವರು ಮಾಡಿದ್ದನ್ನು ಸಮರ್ಥನೆ ಮಾಡುತ್ತಾ ಅವರು ತಮ್ಮ ಅಧಿಕಾರವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುವುದಾದರೆ, ಈ ಜನತಂತ್ರ ವ್ಯವಸ್ಥೆಗೆ ಇದು ಖಂಡಿತವಾಗಿ ಪೂರಕವಾದ ಧಾಟಿ ಅಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ತಾವು ಹೇಳುವಂತಹ ಮಾತು ಏನಿದೆ, ತಾವು ಅನುಸರಿಸುವ ಕಾರ್ಯನೀತಿ ಏನಿದೆ ತಾವು ಜಾರಿಗೆ ತರಬಹುದಾದಂಥ ಕಾರ್ಯಕ್ರಮಗಳು ಏನಿವೆ ಆ ಕಾರ್ಯಕ್ರಮಗಳಿಂದ ಈ ದೇಶದ ಬಡಜನರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವುದಾದರೆ, ಈ ದೇಶದ ವಿವಿಧ ವರ್ಗಗಳ ನಡುವಿನ ಅಂತರ, ಸಾಮಾಜಿಕ ಅಸಮಾನತೆ ಇರಬಹುದು ಅಥವಾ ಸಾಮಾಜಿಕ ನ್ಯಾಯದಿಂದ ವಂಚಿತರಾದಂಥ ಜನ ಯಾರಿದ್ದಾರೆ ಅವರಿಗೆ ಒಳ್ಳೆಯದನ್ನು ಮಾಡುವ ದೃಷ್ಟಿಯಿಂದ ಕಾರ್ಯಕ್ರಮ ರೂಪಿತವಾಗಿ ಜಾರಿಗೆ ತರುವುದಾದರೆ ಖಂಡಿತವಾಗಿ ನಾವು ಈ ಕಡೆಯಿಂದ ಅವರಿಗೆ ಬೆಂಬಲ ಕೊಡುತ್ತೇವೆ. ಅವರು ಮಾಡಿದ ಎಲ್ಲ ಕೆಲಸಗಳನ್ನು ನಾವು ಒಪ್ಪದೆ ಇರಬಹುದು. ಆದರೆ ಯಾವ ಕೆಲಸದಿಂದ ಈ ದೇಶದ ಸಾಮಾನ್ಯ ಜನರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೆ ಕ್ರಮ ತೆಗೆದು ಕೊಂಡಿದಿದ್ದರೆ ಆ ಕೆಲಸವನ್ನು ನಾವು ಹೇಳಬೇಕಾಗುತ್ತದೆ ಯಾವುದೇ ಸರ್ಕಾರ ತಾನು ಅನುಸರಿಸುವ ತೆರಿಗೆ ನೀತಿ ಏನಿದೆ ಅಂದರೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ರೀತಿ ಮತ್ತು ಕ್ರೋಢೀಕೃತವಾದಂಥ ಸಂಪನ್ಮೂಲಗಳನ್ನು ನಾವು ಯಾವ ರೀತಿ ತೊಡಗಿಸುತ್ತೇವೆ, ತೊಡಗಿಸಿದ ಸಂಪನ್ಮೂಲಗಳಿಂದ ಈ ದೇಶದ ಸಂಪತ್ತು, ಆದಾಯ ಹೆಚ್ಚುವರಿಯಾದರೆ ಆ ಹೆಚ್ಚುವರಿಯಾದಂಥ ಸಂಪತ್ತು ಮತ್ತು ಆದಾಯಗಳಿಂದ ಬಂದ ಅಭ್ಯುದಯ ಯಾರ ಪಾಲಿಗೆ ಹೋಗಿದೆ ಎಂಬುದರ ಬಗ್ಗೆ ನಾವು ಇವತ್ತು ವಿಚಾರ ಮಾಡಬೇಕಾಗಿದೆ. ಸ್ವಾತಂತ್ರ್ಯ ಬಂದಾಗಿನಿಂದ ಅನೇಕ ಪಕ್ಷಗಳ ಸರ್ಕಾರಗಳು ನಮ್ಮ ದೇಶದಲ್ಲಿ ಬಂದಿರಬಹುದು. ಸ್ವಾತಂತ್ರ್ಯ ನಂತರ ೭ ಪಂಚವಾರ್ಷಿಕ ಯೋಜನೆಗಳನ್ನು ಈಗಾಗಲೇ ಜಾರಿಗೆ ತಂದಿದ್ದೇವೆ. ಲಕ್ಷಾಂತರ ಕೋಟಿ ರೂಪಾಯಿಗಳನ್ನು ಕಳೆದ ನಾಲ್ಕು ದಶಕಗಳಲ್ಲಿ ಖರ್ಚು ಮಾಡಿದ್ದೇವೆ. ಆದರೆ ಖರ್ಚುಮಾಡಿದ ಲಕ್ಷಾಂತರ ಕೋಟಿ ರೂಪಾಯಿಗಳಿಂದ ಬಂದಂಥ ಅಭ್ಯುದಯದ ಫಲ ಏನಿದೆ ಆ ಫಲ ಈ ದೇಶದಲ್ಲಿ ಯಾವ ಜನರಿಗೆ ಹೋಗಬೇಕಾಗಿತ್ತೋ ಆ ಜನರಿಗೆ ಹೋಗಿದೆಯೆ ಎಂದು ವಿಚಾರ ಮಾಡಿದಾಗ ಅನೇಕ ಕಾರಣಗಳಿಂದ ಈ ಒಂದು ಅಭ್ಯುದಯದ ಫಲ ಸಾಮಾನ್ಯ ಜನರಿಗೆ ಸಿಕ್ಕಿಲ್ಲವೆಂದು ನಾವೆಲ್ಲಾ ಒಪ್ಪಿಕೊಳ್ಳಬೇಕಾಗುತ್ತದೆ. ಅದೂ ಅಲ್ಲದೆ, ಈ ದೇಶದ ಮೂರನೇ ಒಂದು ಭಾಗಕ್ಕಿಂತ ಹೆಚ್ಚು ಜನ ಬಡತನದಲ್ಲಿ

ದ್ದಾರೆ ಮತ್ತು ಅನಕ್ಷರಸ್ಥರಾಗಿ ಸ್ವಾತಂತ್ರ್ಯ ಬಂದು ೪೦ ವರ್ಷಗಳ ನಂತರವೂ ಇದ್ದಾರೆಂದರೆ ಇದಕ್ಕಿಂತ ನಮ್ಮ ವೈಫಲ್ಯವನ್ನು ಎತ್ತಿಕೊಳ್ಳುವಂಥ ಉದಾಹರಣೆ ಬೇರೊಂದು ಬೇಕಾಗಿಲ್ಲ ಎಂಬ ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಮೊದಲನೆಯದಾಗಿ ತೆರಿಗೆ ಹಾಕುವ ನೀತಿಯನ್ನು ತೆಗೆದುಕೊಂಡಾಗ ಜನಸಾಮಾನ್ಯರ ಕಲ್ಯಾಣವನ್ನು ಮನಸ್ಸಿನಲ್ಲಿಟ್ಟು ಕೊಂಡು ಯಾರಿಗೆ ತೆರಿಗೆ ಕೊಡುವ ಶಕ್ತಿ ಇದೆ ಅಂತಹವರಿಂದ ತೆರಿಗೆ ವಸೂಲ್ಮಾಡಬೇಕೆಂದು ಹೇಳುತ್ತೇನೆ. ಆದರೆ ಈ ಸರ್ಕಾರ ಬಂದಮೇಲೆ ಯಾವ ರೀತಿ ತೆರಿಗೆ ವಸೂಲ್ಮಾಡುವುದಕ್ಕೆ ಪ್ರಯತ್ನ ಮಾಡಿದೆ ? ಯಾರಿಗೆ ತೆರಿಗೆ ಕೊಡುವುದಕ್ಕೆ ಶಕ್ತಿ ಇದೆ ಅವರಿಂದ ತೆರಿಗೆ ವಸೂಲ್ಮಾಡುವುದು ಮಾತ್ರವಲ್ಲ ಅವರಿಂದ ಸೋರಿಕೆಯಾಗುವ ತೆರಿಗೆ ಹಣವನ್ನು ಕ್ರೋಢೀಕರಿಸುವುದಕ್ಕೆ, ಸೋರಿಕೆಯನ್ನು ತಪ್ಪಿಸಲಿಕ್ಕೆ ಯಾವ ಕ್ರಮ ತೆಗೆದುಕೊಂಡಿದೆ ? ಹಿಂದೆ ಅನೇಕ ಸಂದರ್ಭಗಳಲ್ಲಿ ಆಡಳಿತ ಪಕ್ಷದ ಸದಸ್ಯರು ನಾವು ಆ ಕಡೆ ಇದ್ದಾಗ ವಿರೋಧ ಪಕ್ಷದವರು ಆರೋಪಗಳನ್ನು ಮಾಡುತ್ತಿದ್ದರು. ಮಾನ್ಯ ಅರ್ಥ ಮಂತ್ರಿಗಳೂ ಸಹ ಹೇಳುತ್ತಿದ್ದರು. ನಿಮ್ಮದು ಹೆಂಡದ ದೊರೆಗಳ ಬ್ರೀಫ್‌ಕೇಸಿನಲ್ಲಿರುವಂಥ ಸರ್ಕಾರ ನಮ್ಮದಲ್ಲ. ಎಂದು ನಾನು ಕೇಳುತ್ತೇನೆ. ಹೆಂಡದ ದೊರೆಗಳ ಬ್ರೀಫ್‌ಕೇಸಿನಲ್ಲಿರುವಂಥ ಸರ್ಕಾರ ನಮ್ಮದಾಗಿದ್ದರೆ ತಮ್ಮದು ಇವತ್ತು ಏನಾಗಿದೆ. ತಮ್ಮದು ಸಾರಾಯಿ ದೊರೆಗಳ ಬ್ರೀಫ್‌ಕೇಸ್‌ನಲ್ಲಿರುವಂಥ ಸರ್ಕಾರ ಆಗಿದೆಯೋ? ನಿಮಗೆ ನೇರವಾಗಿ ಜವಾಬ್ದಾರಿ ಇಲ್ಲದಿರಬಹುದು. ಆದರೆ ರಾಷ್ಟ್ರಪತಿಯವರ ಆಡಳಿತ ಕಾಲದಲ್ಲಿ ರಾಜ್ಯಪಾಲರು ಆಡಳಿತ ಮಾಡಬೇಕಾದರೆ ಈ ದೇಶದಲ್ಲಿ ಒಂದು ಕಾನೂನು ತರಲಿಕ್ಕೆ ಪ್ರಯತ್ನ ಮಾಡಿದರು. ಯಾರ ಉದ್ಧಾರಕ್ಕೋಸ್ಕರ ಈ ಕಾನೂನು ತರಲಿಕ್ಕೆ ಪ್ರಯತ್ನ ಮಾಡಿದರು ? ಸಾರಾಯಿ ಮೇಲೆ ಶೇಕಡ ೧೩ ರಷ್ಟಿದ್ದ ಮಾರಾಟ ತೆರಿಗೆಯನ್ನು (ಕೊನೆಯ ಹಂತದ ಮಾರಾಟ ತೆರಿಗೆ ಸೇರಿ) ಪ್ರಥಮ ಹಂತದ ಮಾರಾಟ ತೆರಿಗೆಯಾಗಿ ಮಾರ್ಪಾಡು ಮಾಡಿ ರಾಷ್ಟ್ರಪತಿಯವರ ಒಪ್ಪಿಗೆಗೆ ಕಳುಹಿಸಿದರು.

ಇದರ ಹಿಂದೆ ಏನಾಗಿದೆ? ಈ ಪ್ರಸ್ತಾಪವನ್ನು ಪುನಃ ಮಾಡುತ್ತಿದ್ದೇನೆ. ಕಳೆದ ಎರಡು ಸಾರಿ ಈ ಸದನದಲ್ಲಿ ಈ ವಿಚಾರವನ್ನು ಪ್ರಸ್ತಾಪ ಸಹ ಮಾಡಿದಾಗಲೂ ಸರ್ಕಾರದಿಂದ ಆಗಲೀ ಮುಖ್ಯ ಮಂತ್ರಿಗಳಿಂದ ಆಗಲಿ, ಅರ್ಥಮಂತ್ರಿಗಳಿಂದಾಗಲೀ ನೇರವಾದ ಉತ್ತರ ಬರದೇ ಇರುವುದರಿಂದ ನಮ್ಮ ಸಂಶಯ ಮತ್ತಷ್ಟು ಬಲವಾಗಿದೆ. ಇದರಲ್ಲೇನಾದರೂ ವ್ಯವಹಾರ ನಡೆದಿದೆಯೋ ? ಹಾಗಿಲ್ಲದಿದ್ದರೆ ನೇರವಾಗಿ ಇಂತಿಂಥ ಕಾರಣದಿಂದ ಕೊನೆ ಹಂತದ ಮಾರಾಟ ತೆರಿಗೆಯನ್ನು ವಜಾ ಮಾಡಿದ್ದೇವೆ ಎಂದು ಹೇಳಬೇಕಾಗಿತ್ತು. ಅವರ ನಿರುತ್ತರ ಏನಿದೆ ಅದು ನಮ್ಮ ಸಂಶಯಕ್ಕೆ ಎಡೆ ಮಾಡಿಕೊಡುತ್ತಿದೆ. ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ದೇಶದಲ್ಲಿ ಸರ್ಕಾರ ಬದಲಾವಣೆಯಾದರೆ ಜನಸಾಮಾನ್ಯರ ಸಂಕಷ್ಟವನ್ನು ಬಗೆಹರಿಸಲಿಕ್ಕೆ ಸಾಧ್ಯವಿಲ್ಲ. ಕೇವಲ ಸರ್ಕಾರದ ಬದಲಾವಣೆಯಿಂದ ಜನರ ಸಂಕಷ್ಟ ಬಗೆಹರಿಸಲಿಕ್ಕೆ ಸಾಧ್ಯವಾಗುವಂತಿದ್ದರೆ ಇಷ್ಟು ಹೊತ್ತಿಗೆ ಎಲ್ಲ ಜನರ ಉದ್ಧಾರ ಆಗಬೇಕಾಗಿತ್ತು, ಆದರೆ ಯಾವುದೇ ಒಂದು ಸರ್ಕಾರ ಬಂಡವಾಳಶಾಹಿಗಳ ಹಿಡಿತದಿಂದ ತಪ್ಪಿಸಿಕೊಳ್ಳು ವುದಕ್ಕೆ ಪ್ರಯತ್ನ ಮಾಡಬೇಕು. ಒಂದು ಸರ್ಕಾರ ಒಬ್ಬ ಬಂಡವಾಳಶಾಹಿಯಿಂದ ತಪ್ಪಿಸಿಕೊಂಡು ಮತ್ತೊಬ್ಬ ಬಂಡವಾಳಶಾಹಿಯ ಹಿಡಿತದಲ್ಲಿ ಕೆಲಸ ಮಾಡಲಿಕ್ಕೆ ಪ್ರಾರಂಭ ಮಾಡುವುದಾದರೆ ಖಂಡಿತ ಅದು ಸರ್ಕಾರದ ಬದಲಾವಣೆ ಆಗುವುದಿಲ್ಲ. ಯಜಮಾನಿಕೆಯ ಬದಲಾವಣೆಯಾಗುತ್ತದೆ. ಆದ್ದರಿಂದ ಜನ ಸಾಮಾನ್ಯರ ಸಂಕಷ್ಟಗಳನ್ನು ನಿವಾರಿಸಬೇಕಾದರೆ ಯಜಮಾನಿಕೆಯ ಹಿಡಿತದಿಂದ ತಪ್ಪಿಸಿಕೊಳ್ಳುವ ಪ್ರಯತ್ನವನ್ನು ಯಾವುದೇ ಸರ್ಕಾರ ಮಾಡಬೇಕು. ಅಂಥ ಹಿಡಿತವನ್ನು ಛಿದ್ರಗೊಳಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಅಂಥ ಹಿಡಿತವನ್ನು ಛಿದ್ರಗೊಳಿಸುವುದಕ್ಕೆ ಕೆಲಸ ಮಾಡಿದೆಯೋ ಎಂದರೆ ನನ್ನ ಭಾವನೆಯಲ್ಲಿ ಈ ಸರ್ಕಾರವೂ ಅಂಥ ಆರೋಪ ಮಾಡುವಂಥ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಸಂದರ್ಭದಲ್ಲಿ ಏನಾಗುತ್ತದೆ ಎಂಬ ಬಗ್ಗೆ ಉದಾಹರಣೆ ಮೂಲಕ ಹೇಳುತ್ತೇನೆ. ಈ ದೇಶದಲ್ಲಿ ಕೆಮಿಕಲ್ ಇಂಡಸ್ಟ್ರೀಸ್ ಇವೆ. ಒಂದು ಕಾಲದಲ್ಲಿ ಶೋಧಿತ ಮದ್ಯಸಾರವನ್ನು ಅವಲಂಬಿಸಿ ಮಾಡತಕ್ಕ ರಾಸಾಯನಿಕ ಕೈಗಾರಿಕಾ ಘಟಕಗಳು ಸುಮಾರು ೯೦ ಇದ್ದವು, ಈ ೯೦ ರಾಸಾಯನಿಕ ಕೈಗಾರಿಕಾ ಘಟಕಗಳು ಕೊಟ್ಟಂಥ ಮದ್ಯಸಾರವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದವು ಸರಿಯಾಗಿ ನಡೆಯುತ್ತಿಲ್ಲ ಎಂದು ಅನೇಕ ಘಟಕಗಳು ಮುಚ್ಚಲ್ಪಟ್ಟವು. ನಂತರ ಅದರ ಬಗ್ಗೆ ಪರಿಶೀಲನೆ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಿದರು. ಆ ಸಮಿತಿಯವರು ವರದಿ ಕೊಟ್ಟು ೫೦ ಘಟಕಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿದರು ಆಗಿನ ಸರ್ಕಾರ ಆ ಘಟಕಗಳಿಗೆ ಮದ್ಯಸಾರ ಕೊಡುವುದನ್ನು ನಿಲ್ಲಿಸಿತು. ತದನಂತರ ರಾಜ್ಯಪಾಲರ ಆಡಳಿತದಲ್ಲಿ ಅದೇ ಘಟಕಗಳನ್ನು ರಿವೈವ್ ಮಾಡುವ ಪ್ರಸಂಗ ನಡೆಯಿತು. ನಾವು ಕೇವಲ ಕಾನೂನನ್ನು ಹೇಳಿದರೆ ಪ್ರಯೋಜನವಿಲ್ಲ. ಅದರ ಹಿನ್ನೆಲೆಯೇನು ಎಂಬುದನ್ನು ನೋಡಬೇಕು. ಇವತ್ತಿನ ದಿವಸ ಈ ಘಟಕಗಳು ಏನಿವೆ ಇದನ್ನು ತಾವು ಒಂದು ಸಾರಿ ನೋಡಬೇಕು. ಈ ದೇಶದಲ್ಲಿರುವ ದೊಡ್ಡ ದೊಡ್ಡ

ಅಧಿಕಾರಿಗಳ ಸಂಬಂಧಿಗಳು, ಎಕ್ಸೈಜ್ ಕಮಿಷನರ್ ಆಗಿದ್ದಂಥವರ ಸಂಬಂಧಿಗಳು, ದೇಶದ ಇತರ ಶಾಸಕರ ಮತ್ತು ಮಂತ್ರಿಗಳ ಸಂಬಂಧಿಗಳು ಇಂಥ ಘಟಕಗಳನ್ನು ನಡೆಸುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಏನನ್ನು ಮಾಡಬೇಕು ? ಇಂಥ ದುರುಪಯೋಗವಾದಂಥ ಪರಿಸ್ಥಿತಿಯಲ್ಲಿ ಕಠಿಣವಾದ, ದೃಢವಾದ ಕ್ರಮಗಳನ್ನು ಏನು ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳುವ ನೈತಿಕ ಹೊಣೆಗಾರಿಕೆ ಅಥವಾ ಶಕ್ತಿ ಈ ಸರ್ಕಾರಕ್ಕೆ ಇಲ್ಲದೇ ಇದ್ದರೆ ಖಂಡಿತವಾಗಿಯೂ ಈ ಸರ್ಕಾರವು ಜನಸಾಮಾನ್ಯರ ದೃಷ್ಟಿಯಲ್ಲಿ ಕೆಲಸ ಮಾಡಿದಂತಾಗುವುದಿಲ್ಲ. ಸಮೀರ್‌ವಾಡಿಯಲ್ಲಿ ಒಂದು ಡಿಸ್ಟಿಲರಿ ಇತ್ತು. ಅಲ್ಲಿ ರೈಡ್ ಮಾಡಿದರು. ಆಗ ಶ್ರೀರಾಮನ ಲೆಕ್ಕ ಮತ್ತು ಶ್ರೀ ಕೃಷ್ಣನ ಲೆಕ್ಕ ಸಿಕ್ಕಿತು. ಶ್ರೀ ಕೃಷ್ಣನ ಲೆಕ್ಕದ ಆಧಾರದ ಮೇಲೆ ಸುಮಾರು ಎರಡೂವರೆ ಕೋಟಿ ರೂಪಾಯಿನಷ್ಟು ಮಾರಾಟ ತೆರಿಗೆಯನ್ನು ಅವರು ತಪ್ಪಿಸಿದ್ದಾರೆಂಬುದು ವ್ಯಕ್ತವಾಯಿತು. ಆ ತೆರಿಗೆಯನ್ನು ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಿ ಅದರ ಜೊತೆಯಲ್ಲಿ ಆ ಲೆಕ್ಕದ ಪುಸ್ತಕದಲ್ಲಿ ಇಂತಿಂಥವರಿಗೆ ಇಂತಿಂಥ ಹಣವನ್ನು ನಾವು ಅಡ್ವಾನ್ಸ್ ಆಗಿ ಕೊಟ್ಟಿದ್ದೇವೆ ಎಂದು ನಮೂದು ಮಾಡಿದ್ದಾರೆ ಆ ಪುಸ್ತಕಗಳನ್ನು ಹಿಂದಕ್ಕೆ ಪಡೆಯುವುದಕ್ಕೆ ಮಾಡಿದ ಸಾಹಸ, ದುಸ್ಸಾಹಸ ಎಂದು ಹೇಳಬಹುದು ವ್ಯರ್ಥವಾದಂಥ ಸಾಹಸ ಎಂದು ಹೇಳಬಹುದು ಅದು ರಾಜ್ಯಪಾಲರ ಆಡಳಿತದಲ್ಲಿ ನಡೆಯಿತು. ತದನಂತರ ಬಂದ ಸರ್ಕಾರ ಈ ಪುಸ್ತಕಗಳ ಆಧಾರದ ಮೇಲೆ ಸಂಬಂಧಪಟ್ಟವರಿಂದ ತೆರಿಗೆಯನ್ನು ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದೆಯೆ? ಮತ್ತು ಅದರ ಜೊತೆಯಲ್ಲಿ ಪುಸ್ತಕದಲ್ಲಿ ಇಂತಿಂಥವರಿಗೆ ಇಷ್ಟಿಷ್ಟು ಅಡ್ವಾನ್ಸ್ ಕೊಟ್ಟಿತ್ತು ಎಂದು ಏನು ಹೇಳಿದ್ದರು ಆ ಹಣವನ್ನು ತೆಗೆದುಕೊಂಡ ಅಧಿಕಾರಿಗಳ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದೆಯೆ? ನಾವು ದಕ್ಷತೆಯನ್ನು ಹೆಚ್ಚು ಮಾಡುತ್ತೇವೆ. ಭ್ರಷ್ಟಾಚಾರ ನಿವಾರಣೆ ಮಾಡುತ್ತೇವೆಂದು ಅವರು ಹೇಳುತ್ತಾರೆ. ಆದರೆ ಈ ಸರ್ಕಾರವು ಬರೀ ಮಾತಿನಲ್ಲಿ ಹೇಳಿದರೆ ಸಾಕಾಗುವುದಿಲ್ಲ. ತನ್ನ ಕೃತಿಯಲ್ಲಿ ಇದನ್ನು ತೋರಿಸ ಬೇಕಾಗುತ್ತದೆ. ಇವತ್ತಿನ ದಿವಸ ಇಂಥ ಅವ್ಯವಹಾರವನ್ನು ಬಲಿ ಹಾಕದಿದ್ದರೆ, ಸಂಬಂಧಪಟ್ಟಂಥ ಅಧಿಕಾರೇತರ ಮೇಲಾಗಲಿ, ಅಧಿಕಾರಿಗಳ ಮೇಲಾಗಲಿ ಕ್ರಮ ತೆಗೆದುಕೊಳ್ಳದಿದ್ದರೆ ಖಂಡಿತವಾಗಿ ಭ್ರಷ್ಟಾಚಾರವನ್ನು ಹತ್ತಿಕ್ಕುತ್ತೇನೆ. ಎಂದು ಹೇಳುವ ಮಾತಿನಂತೆ ನಡೆದಂತಾಗುವುದಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಬರೀ ಕ್ರಮ ತೆಗೆದುಕೊಳ್ಳಬೇಕು, ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೀರಿ. ಯಾವ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚನೆ ಮಾಡಿ ಸ್ವಾಮಿ.

೪-೩೦ ಪಿ. ಎಂ.

ಶ್ರೀ ಹೆಚ್. ಏಕಾಂತಯ್ಯ.—ಕ್ರಮ ಅಂದರೆ ಕಾನೂನಿನ ಕ್ರಮ. ನಾನು ಭ್ರಷ್ಟನಾದರೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ ನೀವು ಭ್ರಷ್ಟರಾದರೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು. ಅಪರಾಧ ಮಾಡಿದರೆ ಕಾನೂನು ಪ್ರಕಾರ ಶಿಕ್ಷೆಗೆ ಒಳಪಡಿಸುವ ಕ್ರಮ ತೆಗೆದುಕೊಳ್ಳಬೇಕು ಎಂಬ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಾದ ಮೇಲೆ ಇನ್ನೂ ಅನೇಕ ವಿಚಾರಗಳನ್ನು ಉದಾಹರಿಸಿ ಹೇಳಬಹುದು. ಈ ಒಂದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅನೇಕ ದುರ್ಘಟನೆಗಳು ನಡೆಯುತ್ತವೆ. ಯಾವತ್ತೂ ವ್ಯವಹಾರ ಇಲ್ಲದಂಥ ಸರ್ಕಾರ ನಮ್ಮದಾದರೂ ಇರುವುದಿಲ್ಲ, ಅವರದಾದರೂ ಇರುವುದಿಲ್ಲ ಏಕೆಂದರೆ, ಎಲ್ಲಾ ವ್ಯವಹಾರಗಳು ನಮಗೆ ಗೊತ್ತಿದ್ದೇ ನಡೆಯುವುದಿಲ್ಲ. ತಮಗೆ ಗೊತ್ತಿಲ್ಲದೇ ಬೇಕಾದಷ್ಟು ನಡೆಯುತ್ತವೆ ಒಂದು ವಿದ್ಯಾ ವಿಕಾಸ ಯೋಜನೆ ನಮ್ಮಲ್ಲಿ ಜಾರಿಗೆ ಬಂದಿದೆ. ಅದು ಬರೀ ಅಗ್ಗದ ಪ್ರಚಾರ ಇದನ್ನು ನಿಲ್ಲಿಸಿಬಿಡಬೇಕೆಂದು ನಮ್ಮ ಸ್ನೇಹಿತರು ಹೇಳಿದರು. ನಿಲ್ಲಿಸಲಿ. ಅದು ಅವರಿಗೆ ಬಿಟ್ಟಂಥ ತೀರ್ಮಾನ ಇವತ್ತಿನ ದಿವಸ ನಮ್ಮ ಭಾವನೆಗಳನ್ನು ನಾವು ಬೇಕಾಗಿದೆ. ಇವತ್ತು ದೇಶದಲ್ಲಿ ಆರ್ಥಿಕವಾಗಿ ಯಾರು ದುಸ್ಥಿತಿಯಲ್ಲಿ ಇದ್ದಾರೆ ಅವರಿಗೆ ಸಹಾಯ ಮಾಡುವ ಸಲುವಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದ್ದಿತು. ಇವತ್ತು ಆದಾಯ ಪುರಸ್ಕೃತ ದೇಶದ ಉತ್ಪಾದನೆ ಹೆಚ್ಚಿಸುವಂತಹ ಕಾರ್ಯಕ್ರಮಗಳನ್ನು ನಾವು ದೇಶದಲ್ಲಿ ಹೆಚ್ಚು ಹೆಚ್ಚು ಕಾರ್ಯರೂಪಕ್ಕೆ ತರಬೇಕು. ಇವತ್ತು ಅವುಗಳಿಂದ ದೇಶದ ಸಂಪತ್ತು ಹೆಚ್ಚಾದರೆ ಅದರ ಲಾಭ ಈ ದೇಶದ ಬಡಜನರಿಗೆ ಸಿಗಬೇಕು ಎನ್ನುವುದನ್ನು ಒಪ್ಪುತ್ತೇನೆ ಇವತ್ತಿದ ದಿವಸ ನಮ್ಮ ದೇಶದಲ್ಲಿ ಕಡು ಬಡತನದಿಂದ ಜೀವನ ಮಾಡುವುದಕ್ಕೆ ಸಾಧ್ಯವಾಗದೇ ಇರುವಂತಹ ಜನರು ಬಹಳ ಇದ್ದಾರೆ. ಇವರ ಅಭಿವೃದ್ಧಿಗೆ ಏನು ಮಾಡಬೇಕು? ಇವತ್ತು ಹಾಕಿಕೊಂಡ ಕಾರ್ಯಕ್ರಮಗಳು ಅಗ್ಗದ ಪ್ರಚಾರಕ್ಕಾಗಿ ಹಾಕಿಕೊಂಡ ಕಾರ್ಯಕ್ರಮಗಳು ಎಂದು ತಾವು ಕರೆದಿರಿ. ಸಾಲ ಮೇಳ ಮಾಡಿದಾಗ ನಿಮಗೆ ಏನೂ

ನಿಸಲಿಲ್ಲವೆ? ಅಥವಾ ನಮ್ಮದೇ ಆದಂಥ ಗಂಗಾ ಕಲ್ಯಾಣ, ಭಾಗ್ಯಜ್ಯೋತಿ ಯೋಜನೆಗಳನ್ನು ಅವರು ಬೇರೆ ರಾಜ್ಯಗಳಲ್ಲಿ ಜಲಗಾರ ಕುಟೀರಜ್ಯೋತಿ ಆಗಿರಬಹುದು. ಅವನ್ನು ಜಾರಿಗೆ ತಂದಾಗ ಇವುಗಳೆಲ್ಲವೂ ಅಗ್ಗದ ಪ್ರಚಾರ ಎಂದು ನಾವು ಹೇಳಲಿಕ್ಕೆ ಸಾಧ್ಯವಾಗುತ್ತದೆಯೇ? ಇಂತಹವು ಅಗ್ಗದ ಕಾರ್ಯಕ್ರಮಗಳು ಎಂದು ನಾವು ಹೇಳಿದರೆ ಅವರಿಗೆ ಏನೆನಿಸುತ್ತದೆ? ಇವತ್ತು ಸಾಮಾಜಿಕವಾಗಿ, ಆರ್ಥಿಕವಾಗಿ, ಹಿಂದುಳಿದಿರುವ ಜನರಿಗೆ ತಮ್ಮ ಮಕ್ಕಳನ್ನು ಓದಿಸಲು ಆಗದೆ ಆರ್ಥಿಕವಾಗಿ ದುಃಸ್ಥಿತಿಯಲ್ಲಿದ್ದಾರೆ. ಅಂತಹವರಿಗೆ ಸ್ವಲ್ಪಮಟ್ಟಿಗಾದರೂ ರಿಯಾಯಿತಿ ಕೊಡುವ ಉದ್ದೇಶದಿಂದ ವಿದ್ಯಾ ವಿಕಾಸ ಯೋಜನೆಯನ್ನು ನಾವು ಜಾರಿಗೆ ತಂದಿದ್ದೇವೆಯೇ ಹೊರತು ಅಗ್ಗದ ಪ್ರಚಾರವನ್ನು ನಾವು ಎಂದೂ ಮಾಡಲಿಲ್ಲ. ಇವೆಲ್ಲಾ ಅಗ್ಗದ ಪ್ರಚಾರ ಎನ್ನುವುದಾದರೆ ಅವರ ಇಂತಹ ಕಾರ್ಯಕ್ರಮಗಳು ಪಟ್ಟಿಯನ್ನೇ ತಯಾರಿಸಿ ನಾವು ಅವರಿಗೆ ಹೇಳಬಹುದು, ಇಂತಹ ಕಾರ್ಯಕ್ರಮಗಳು ಅವರ ಆಡಳಿತ ಅವಧಿಯ ಕಾಲದಲ್ಲಿಯೂ ಆಗಿವೆ ಎಂಬುದನ್ನು ಅವರು ಮರೆಯಬಾರದು. ಇವತ್ತಿನ ದಿವಸ ಅವರು ಸಂಪನ್ಮೂಲ ಶೇಖರಣೆಯಲ್ಲಿ ಅವರು ಅನುಸರಿಸುವಂಥ ನೀತಿ ಏನಿದೆ. ಅದು ಬಂಡವಾಳಶಾಹಿಗಳ ಪರವಾಗಿದೆ. ಜನ ಸಾಮಾನ್ಯರ ಪರವಾದ ನೀತಿಯನ್ನು ಅನುಸರಿಸುತ್ತಿಲ್ಲ ಎಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ತೆರಿಗೆ ವಸೂಲಾತಿಯಲ್ಲಿ ನಿಷ್ಠೂರವಾದಂಥ ಮತ್ತು ದೃಢವಾದಂಥ ಕಾರ್ಯ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಹೇಗೆ ಹಣ ಸೋರಿಹೋಗುತ್ತಿದೆ ಎಂಬುದಕ್ಕೆ ಉದಾಹರಣೆಯಾಗಿ ಹೇಳುವುದಾದರೆ ಇವತ್ತು ಬೆಂಗಳೂರು– ನೆಲಮಂಗಲ ನಡುವೆ ಚೆಕ್‌ಪೋಸ್ಟ್ ಇದೆ ಇವತ್ತು ಬೆಂಗಳೂರು ಹೆಚ್ಚು ಕಡಿಮೆ ನೆಲಮಂಗಲದವರೆಗೆ ಬೆಳೆದಿದೆ, ಇವತ್ತು ವ್ಯಾಪಾರಸ್ಥರು ನಮಗಿಂತ ಬುದ್ಧಿವಂತರಾಗಿದ್ದು ಅವರು ತಮ್ಮ ಕಛೇರಿಯನ್ನು ನೆಲಮಂಗಲದಲ್ಲಿ ತೆರೆದಿರುತ್ತಾರೆ, ಇದರಿಂದ ತೆರಿಗೆ ತಪ್ಪಿಸಲು ಅನುಕೂಲವಾಗಿರುವುದರಿಂದ ಈಗ ಏನು ಬೆಂಗಳೂರು ನೆಲಮಂಗಲ ಮಧ್ಯೆ ಚೆಕ್‌ಪೋಸ್ಟ್ ಇದೆ ಅದು ಅನವಶ್ಯಕ ಎಂದು ಹೇಳುತ್ತೇನೆ. ಅದನ್ನು ನೆಲಮಂಗಲದವರೆಗೆ ವಿಸ್ತರಣೆ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಅನೇಕ ವಿಧವಾದಂಥ ಇಂಟರ್‌ಮೀಡಿಯೆಟ್ ಚೆಕ್‌ಪೋಸ್ಟ್‌ಗಳಿವೆ. ಇವತ್ತು ಅಲ್ಲಿಯ ಅಧಿಕಾರಿಗಳಿಂದ ಶೋಷಣೆ ಹೆಚ್ಚಾಗಿದೆಯೇ ಹೊರತು. ಆ ಅಧಿಕಾರಿಗಳಿಗೆ ಲಾಭ ಹೆಚ್ಚಾಗಿದೆಯೇ ಹೊರತು ದೇಶಕ್ಕೇನೂ ಆದಾಯ ಹೆಚ್ಚಾಗಿಲ್ಲ. ಆದ್ದರಿಂದ ಇವತ್ತು ಈ ಚೆಕ್‌ಪೋಸ್ಟ್‌ಗಳನ್ನು ವಜಾ ಮಾಡಿ ಮೊಬೈಲ್ ಯೂನಿಟ್ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಶಿರಾದಲ್ಲಿ ಖಾಯಂ ಚೆಕ್‌ಪೋಸ್ಟ್ ಇದ್ದರೆ ತೆರಿಗೆ ತಪ್ಪಿಸಲು ಆ ಜನ ಬೇರೆ ಉಪಾಯವನ್ನು ಹುಡುಕುತ್ತಾರೆ. ಆದ್ದರಿಂದ ಇವತ್ತು ಅವುಗಳನ್ನು ಮೊಬೈಲ್ ಯೂನಿಟ್‌ಗಳಾಗಿ ಪರಿವರ್ತನೆ ಮಾಡಿದರೆ ತೆರಿಗೆ ಕದಿಯುವುದು ಸ್ವಲ್ಪಮಟ್ಟಿಗೆ ತಪ್ಪಿ ದೇಶಕ್ಕೂ ಆದಾಯ ಬರುತ್ತದೆಯೆಂದು ಹೇಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ನೀವು ಇದ್ದಾಗ ಅದನ್ನು ಮಾಡಿದ್ದರೆ ಈಗ ನಮಗೆ ಅದು ಆದರ್ಶವಾಗುತ್ತಿತ್ತು. ನೀವು ಇದ್ದಾಗ ಅದನ್ನು ಏಕೆ ಮಾಡಿಲ್ಲ.

ಶ್ರೀ ಹೆಚ್. ಏಕಾಂತಯ್ಯ.—ಬದಲಾದ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಜನತಾಂತ್ರಿಕ ವ್ಯವಸ್ಥೆಯಲ್ಲಿ ಇದನ್ನೆಲ್ಲಾ ಮಾಡಬೇಕಾಗುತ್ತದೆ. ಈಗ ನಿಮಗೆ ಮಾಡಿ ಎಂದು ನಾವು ಹೇಳುತ್ತಿದ್ದೇವೆ. ನಿಮ್ಮ ಕೈಯ್ಯಲ್ಲಿ ಆಗದಿದ್ದರೆ ನಿಮ್ಮ ಪಾತ್ರವನ್ನು ನಾವು ವಹಿಸಬೇಕಾಗುತ್ತದೆ. ನೀವು ಇದನ್ನು ಮಾಡಿ ಮಾಡುವುದಕ್ಕಾಗದಿದ್ದರೆ ನೀವು ಈ ಕಡೆ ಬನ್ನಿ, ನಾವು ಆ ಕಡೆ ಹೋಗಿ ಮಾಡಿ ತೋರಿಸುತ್ತೇವೆ.

ಶ್ರೀ ಆರ್. ಎನ್. ನಾಯಕ್.—ತಾವು ಬರೀ ಸ್ಥಾನಕ್ಕೆ ತಕ್ಕಹಾಗೆ ಮಾತನಾಡುತ್ತೀರೆಂದು ನಾನು ಹೇಳುತ್ತೇನೆ. ಈ ಕಡೆ ಇದ್ದಾಗ ಮಾಡದೇ ಆ ಕಡೆ ಹೋದಮೇಲೆ ಮಾಡಿ ಎಂದು ಹೇಳುತ್ತಿದ್ದೀರಿ ಆಯಾ ಸ್ಥಾನಕ್ಕೆ ತಕ್ಕ ಮಾತನ್ನು ತಾವು ಆಡುತ್ತಿದ್ದೀರಿ.

ಶ್ರೀ ಹೆಚ್. ಏಕಾಂತಯ್ಯ.—ಅವರಿಗೆ ಪ್ರತಿವಾದ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ.

ಶ್ರೀ ಕುನ್ನೂರು ಮಂಜುನಾಥ ಚನ್ನಪ್ಪ—ಈಗಿರುವ ಚೆಕ್‌ಪೋಸ್ಟ್‌ಗಳ ಜೊತೆಗೇ ಮೊಬೈಲ್ ಚೆಕ್‌ಪೋಸ್ಟ್‌ಗಳು ಇರುವುದು ಉತ್ತಮ. ಬರೀ ಮೊಬೈಲ್ ಚೆಕ್‌ಪೋಸ್ಟ್‌ಗಳಿಂದ ಯಾವಾಗಲೂ ಓಡಾಡುತ್ತಿರುವ ಎಲ್ಲ ವಾಹನಗಳ ಮೇಲೆ ನಿಗಾವಹಿಸಲು ಸಾಧ್ಯವಾಗುವುದಿಲ್ಲ. ಇದನ್ನು ನಿಯಂತ್ರಿಸಲು ಮೊಬೈಲ್ ಒಂದರಿಂದಲೇ ಸಾಧ್ಯವಾಗದ್ದರಿಂದ ಎರಡೂ ರೀತಿಯ ಚೆಕ್‌ಪೋಸ್ಟ್ ಇದ್ದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ,

ಉಪಾಧ್ಯಕ್ಷರು.—ಏಕಾಂತಯ್ಯನವರೇ, ತಾವು ತಮ್ಮ ಭಾಷಣವನ್ನು ಬೇಗ ಮುಗಿಸಿ.

ಶ್ರೀ ಹೆಚ್. ಏಕಾಂತಯ್ಯ.—ಆಡಳಿತ ಪಕ್ಷಕ್ಕೆ ಹೆಚ್ಚು ಕಾಲವನ್ನು ಕೊಟ್ಟಿದ್ದೀರಿ, ಅದಕ್ಕಿಂತ ಹೆಚ್ಚಿಗೆ ಕಾಲವನ್ನು ನಮಗೆ ಕೊಡಬೇಕಾಗುತ್ತದೆ. ಈ ಸರ್ಕಾರ ದೃಢವಾದಂಥ ಮತ್ತು ಕಠಿಣವಾದಂಥ

ನಿರ್ಧಾರ ತೆಗೆದುಕೊಳ್ಳುವುದಕ್ಕೆ ಅಸಹಾಯಕ ಪರಿಸ್ಥಿತಿಯಲ್ಲಿದೆ. ಮಾನ್ಯ ವಿರೋಧಪಕ್ಷದ ನಾಯಕರು ಚುನಾವಣೆಯ ಬಗ್ಗೆ ಈ ಸರ್ಕಾರದವರು ಎಂತಹ ತೀರ್ಮಾನವನ್ನು ತೆಗೆದುಕೊಂಡರು ಎಂದು ಹೇಳಿದರು ಅದನ್ನು ನಾನು ಮತ್ತೊಮ್ಮೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಮೈಸೂರಿನಲ್ಲಿ ಮಹಾರಾಜ ಅರಮನೆ ಇದೆ. ಈ ಅರಮನೆಯ ಆವರಣದಲ್ಲಿ ಅಥವಾ ಒಳಗಡೆ ಚಿತ್ರೀಕರಣ ಮಾಡಲಿಕ್ಕೆ ನಮ್ಮ ಸರ್ಕಾರ ಅಥವಾ ಕರ್ನಾಟಕ ರಾಜ್ಯ ಸರ್ಕಾರ ಯಾರಿಗೂ ಅವಕಾಶ ಕೊಡುತ್ತಿರಲಿಲ್ಲ. ಕರ್ನಾಟಕ ಸೋಪ್ ಅಂಡ್ ಡಿಟರ್ಜಂಟ್ ಲಿಮಿಟೆಡ್ ಮೈಸೂರು ಸ್ಯಾಂಡಲ್ ಸೋಪ್‌ನವರು ಜಾಹಿರಾತಿಗೋಸ್ಕರ ಚಿತ್ರೀಕರಣ ಮಾಡುತ್ತೇವೆಂದು ಬಂದ ಸಂದರ್ಭದಲ್ಲಿ ನಾವು ಅದನ್ನು ವಿರೋಧ ಮಾಡಿ ಅವಕಾಶ ಕೊಡಲಿಲ್ಲ. ನಾವು ಅಂದರೆ ಸರ್ಕಾರ. ಆದರೆ ಫ್ರೆಂಚ್ ಸಂಸ್ಥೆಯಿಂದ ಚಿತ್ರೀಕರಣ ಮಾಡಲಿಕ್ಕೆ ಈ ಸರ್ಕಾರಕ್ಕೆ ಅರ್ಜಿ ಬಂತು. ನನಗೆ ತಿಳಿದಮಟ್ಟಿಗೆ, ಈ ಸರ್ಕಾರದ ಒಂದೆರಡು ಪ್ರಕರಣಗಳಲ್ಲಿ ಅನುಮತಿ ಕೊಡಲಿಕ್ಕೆ ವಿರೋಧ ಮಾಡಿತು. ಆ ರೀತಿ ಆದೇಶ ಸಹ ಕೊಟ್ಟಿತ್ತು. ಆದರೆ ಇದ್ದಕಿದ್ದ ಹಾಗೆ ಮೂರನೇ ಸಾರಿ ಅರ್ಜಿ ಬಂದಾಗ, ಫ್ರೆಂಚ್ ಸಂಸ್ಥೆಗೆ ಚಿತ್ರೀಕರಣ ಮಾಡಲಿಕ್ಕೆ ಈ ಸರ್ಕಾರ ಅವಕಾಶ ಕೊಡುತ್ತದೆ. ಇದರ ಅರ್ಥವೇನು? ಅಂದರೆ ಈ ಸರ್ಕಾರ ತನ್ನ ನಿರ್ಧಾರಗಳನ್ನು ಯಾವಾಗ ಬೇಕಾದರೂ, ಹೇಗೆ ಬೇಕಾದರೂ ಬದಲಾವಣೆ ಮಾಡುವ ಪರಿಸ್ಥಿತಿಯಲ್ಲಿದೆ. ಈ ಸರ್ಕಾರಕ್ಕೆ ಯಾವುದೇ ಒಂದು ನಿರ್ಧಾರ ತೆಗೆದುಕೊಳ್ಳಬೇಕಾದರೆ ಒಂದು ಖಚಿತವಾದ ನೀತಿ ಇದೆಯೋ? ಆ ನೀತಿ ಇಲ್ಲದಿದ್ದರೆ ಯಾವುದೇ ಒಂದು ಹೊರಗಿನ ಕಾರಣಗಳಿಂದ ಇಂತಹ ಅವಕಾಶ ಮಾಡಿ ಕೊಟ್ಟಿದ್ದಾರೆಂದು ನಾವು ಭಾವಿಸಲಿಕ್ಕೆ ಅಡ್ಡಿಯಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಹಿರಿಯ ಸದಸ್ಯರು, ಮಾಜಿ ಮಂತ್ರಿಗಳು ಅವರು ಸಹ ನೋಡಿದ್ದಾರೆ ಅವರಿಗೆ ಚಲನಚಿತ್ರಗಳಲ್ಲಿ ಅನುಭವ ಕಡಿಮೆಯೆಂದು ಕಾಣುತ್ತದೆ. ನಮ್ಮ ಕರ್ನಾಟಕದವರು. ಭಾರತ ರಾಷ್ಟ್ರಕ್ಕಿಂತ ಹೊರಗಡೆ ಇರುವಂಥ 'ನ್ಯೂಯಾರ್ಕ್'ಗೆ ಹೋಗಿ ಅಲ್ಲಿ ಫಿಲಂಗಳನ್ನು ತೆಗೆದು ಕೊಂಡು ಬಂದಿದ್ದಾರೆ. ಆದ್ದರಿಂದ ಈ ಚಲನ ಚಿತ್ರಗಳು ಬೆಳೆಯಬೇಕಾಗಿದ್ದರೆ ಎಲ್ಲಾ ಕಡೆ ಅವಕಾಶ ಕೊಟ್ಟೇ ಕೊಡಬೇಕಾಗುತ್ತದೆ. ಅದಕ್ಕೆ ಯಾವುದೇ ನೀತಿ, ಧೋರಣೆಗಳು ಇಲ್ಲ, ನೀವು ಮಾಡಿಲ್ಲ, ನಾವು ಮಾಡುವುದಕ್ಕಾಗುವುದಿಲ್ಲ. ಸನ್ನಿವೇಶಕ್ಕೆ ತಕ್ಕಂತೆ ಮಾಡಬೇಕಾಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ.—ಅವರು ನೀತಿಬಾಹಿರವಾದ ನೀತಿಯನ್ನು ಅನುಸರಿಸುವುದಾದರೆ ನನ್ನ ತಕರಾರು ಇಲ್ಲ. ಕರ್ನಾಟಕ ಸರ್ಕಾರದ ಒಂದು ಘಟಕಕ್ಕೆ ಚಿತ್ರೀಕರಣ ಮಾಡಲಿಕ್ಕೆ ಅವಕಾಶವನ್ನು ನಿರಾಕರಣೆ ಮಾಡಿದಂತಹ ಸರ್ಕಾರ, ಅದೇ ಫ್ರೆಂಚ್ ಸಂಸ್ಥೆಗೆ ಎರಡು ಸಾರಿ ಚಲನಚಿತ್ರೀಕರಣ ಮಾಡಲಿಕ್ಕೆ ನಿರಾಕರಣೆ ಮಾಡಿದ ಸರ್ಕಾರ, ಯಾವ ಕಾರಣಕ್ಕೋಸ್ಕರ ಮೂರನೇ ಸಾರಿ ಅವರಿಗೆ ಅನುಮತಿ ನೀಡಿದೆ ? ಇದು ನನ್ನ ಪ್ರಶ್ನೆ ? ಇದಕ್ಕೆ ನೇರವಾದ ಉತ್ತರವನ್ನು ಹೇಳುತ್ತಾರೆಂದು ನಾನು ಭಾವಿಸುತ್ತೇನೆ. ಇಂತಹ ಅನೇಕ ನಿದರ್ಶನಗಳು ಇವೆ, ಅವುಗಳನ್ನೆಲ್ಲಾ ಹೇಳುವುದಕ್ಕೆ ಸಮಯವಿಲ್ಲ. ಈ ಸರ್ಕಾರದ ನೀತಿ ಏನು ಇದೆ ?.........

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಇನ್ನು ೫ ನಿಮಿಷಗಳಲ್ಲಿ ಮುಗಿಸುತ್ತೀರಾ ?

ಶ್ರೀ ಹೆಚ್. ಏಕಾಂತಯ್ಯ.—ನಾನಿನ್ನು ಭಾಷಣವನ್ನೇ ಪ್ರಾರಂಭ ಮಾಡಿಲ್ಲ. ಬರೀ ಸರ್ಕಾರ ಹೊಗಳುವವರಿಗೆ, ಸರ್ಕಾರಕ್ಕೆ ಬೆಂಬಲ ಮಾಡುವವರಿಗೆ ವೇಳೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರದವರು ಅನುಸರಿಸತಕ್ಕ ನೀತಿ ಬಂಡವಾಳಶಾಹಿಗಳ ಪರವಾಗಿದೆ. ನೌಕರಶಾಹಿ ಪರವಾಗಿದೆಯೇ ಹೊರತು ಜನಸಾಮಾನ್ಯರ ಪರವಾಗಿಲ್ಲ. ಈ ಸರ್ಕಾರಕ್ಕೆ ಒಂದು ಗೊತ್ತಾದ ನೀತಿ ಇಲ್ಲ ಎನ್ನುವುದಕ್ಕೆ ನಾನು ಒಂದು ಉದಾಹರಣೆಯನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ನಾನು ಈಗಾಗಲೇ ಹೇಳಿದಹಾಗೆ, ವಿದ್ಯಾ ವಿಕಾಸ ಯೋಜನೆ ನಮ್ಮಲ್ಲಿ ಜಾರಿಯಲ್ಲಿತ್ತು. ಆಗ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಟ್ಟೆಗಳನ್ನು ಸರಬರಾಜು ಮಾಡುವ ಕೆಲಸ ಮಾಡುತ್ತಿತ್ತು. ರಾಜ್ಯಪಾಲರ ಆಡಳಿತದ ಅವಧಿಯಲ್ಲಿ ಒಬ್ಬ ಅಧಿಕಾರಿ ತನಗೆ ಬೇಕಾದವರಿಗೆ ಕೊಡಬೇಕೆಂದು ತೀರ್ಮಾನ ಮಾಡಿ ಬಿನ್ನಿ ಬಟ್ಟೆಗಳನ್ನು ಕೊಂಡುಕೊಳ್ಳುವುದಕ್ಕೆ ಆರ್ಡರ್ ಮಾಡಿದ ಈ ದೇಶದಲ್ಲಿ ರಾಜಕಾರಣಿಗಳು ಮಾತ್ರ ತಪ್ಪು ಮಾಡುವುದಿಲ್ಲ. ರಾಜಕಾರಣಿಗಳು ತಪ್ಪು ಮಾಡಿದರೆ ಇಲ್ಲಿ ಅದನ್ನು ನಾವು ನೀವು ಪ್ರಸ್ತಾಪ ಮಾಡುತ್ತೇವೆ. ಆದರೆ ಅಧಿಕಾರಿಗಳು ತಪ್ಪು ಮಾಡಿದ ಸಂದರ್ಭಗಳಲ್ಲಿ ಆ ತಪ್ಪನ್ನು ಸರಿಪಡಿಸುವಂತಹ ಕ್ರಮವನ್ನು ಮೇಲ್ಮಟ್ಟದವರು ತೆಗೆದುಕೊಂಡಿದ್ದರೂ ಸಹ ಆ ತಪ್ಪಿಗೆ ಕಾರಣರಾದವರ ಮೇಲೆ ದೃಢವಾದಂಥ ಶಿಸ್ತಿನ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಈ ಅಧಿಕಾರಿಗಳು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಾರೆ. ತಪ್ಪಿಸಿಕೊಳ್ಳುವುದಕ್ಕೆ ಬೇಕಾದಂಥ ಕಾರ್ಯನಿರ್ವಹಣೆ ಮಾಡುತ್ತಾರೆ. ನೌಕರಶಾಹಿ ಅಧಿಕಾರದಲ್ಲಿದ್ದಾಗ ಯಾರು ಹೊಣೆಗಾರಿಕೆಯಿಂದ ಕೆಲಸ ಮಾಡುವುದಿಲ್ಲ, ಅಂತಹವರ ಬಗ್ಗೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಅಪರಾಧ ಮಾಡಿದವರಿಗೆ ಶಿಕ್ಷೆ ಕೊಡುವ ಕೆಲಸ ಮಾಡ

ಬೇಕಾಗುತ್ತದೆ. ಇಂತಹ ಅನೇಕ ಉದಾಹರಣೆಗಳನ್ನು ನಾನು ಹೇಳಬಹುದು. ಇವತ್ತಿನ ದಿವಸ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಆರ್ಥಿಕಾಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ. ನಾನು ಒಂದು ಯೋಜನೆಯನ್ನು ಅವರ ಗಮನಕ್ಕೆ ತರುತ್ತೇನೆ. ಅದೇನೆಂದರೆ, ೧೯೮೯ನೇ ಇಸವಿಯ ಏಪ್ರಿಲ್ ಒಂದನೇ ತಾರೀಖಿನಿಂದ ಇಡೀ ರಾಷ್ಟ್ರದಲ್ಲಿ ದಶಲಕ್ಷ ಬಾವಿಯೋಜನೆ ಜಾರಿಗೆ ಬಂತು. ಈ ಬಾವಿಯೋಜನೆ ಜಾರಿಗೆ ಬಂದಮೇಲೆ ಲಕ್ಷಾಂತರ ರೂಪಾಯಿಗಳನ್ನು ನಾವು ಜಿಲ್ಲಾ ಪರಿಷತ್ತುಗಳಿಗೆ ಕೊಟ್ಟಿದ್ದೇವೆ. ಯಾರು ಒಂದು ಹೆಕ್ಟೇರ್‌ಗಿಂತ ಕಡಿಮೆ ಭೂಮಿ ಇರತಕ್ಕಂಥ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರು ಇದ್ದಾರೆ, ಅವರಿಗೆ ಪುಕ್ಕಟೆಯಾಗಿ ಬಾವಿ ತೆಗೆಸಿಕೊಡಬೇಕು ಎನ್ನುವುದು ಮೂಲ ಉದ್ದೇಶ. ಹೀಗೆ ಕೊಟ್ಟಂಥ ಹಣ ಎಷ್ಟು ದುರುಪಯೋಗ ಆಗಿದೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ತಮ್ಮ ಮುಂದೆ ಇಡುವುದಕ್ಕೆ ಇಚ್ಛೆಪಡುತ್ತೇನೆ. ಧಾರವಾಡ ಜಿಲ್ಲೆ ಒಂದರಲ್ಲೇ ಸುಮಾರು ೨೦ ಲಕ್ಷ ರೂಪಾಯಿಗಳ ಅವ್ಯವಹಾರ ವಾಗಿದೆ. ಈ ಯೋಜನೆಯನ್ನು ಎಲ್ಲಾ ಜಿಲ್ಲೆಯವರೂ ತೆಗೆದುಕೊಂಡಿಲ್ಲ. ಕೆಲವು ಜಿಲ್ಲೆಯವರು ತೆಗೆದುಕೊಂಡಿದ್ದಾರೆ. ಕೆಲವು ಜಿಲ್ಲೆಯವರು ತೆಗೆದುಕೊಂಡಿಲ್ಲ. ಯಾವ ಒಂದು ಕಾರ್ಯಕ್ರಮ ದಲಿತರ ಉದ್ಧಾರಕ್ಕೋಸ್ಕರ ಇದೆ, ಅವರ ಬಗ್ಗೆ ಪ್ರೀತಿ ಇದೆಯೆಂದು ಹೇಳುತ್ತಾರೆ. ಈ ಪ್ರೀತಿ ಇರುವವರು ಅಧಿಕಾರಕ್ಕೆ ಬಂದಮೇಲೆ ಅವರ ಗಮನಕ್ಕೆ ಈ ದುರುಪಯೋಗವಾಗಿರುವುದನ್ನು ತಂದರೂ ಕೂಡ, ಕಾನೂನಿನನ್ವಯ ಸಂಬಂಧಪಟ್ಟಂಥ ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದಾರೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.ಒಂದುಜಿಲ್ಲೆಯಲ್ಲಿ ಬಡವರಿಗೋಸ್ಕರ, ದಲಿತರಿಗೋಸ್ಕರ ಸುಮಾರು ೨೦ಲಕ್ಷ ರೂಪಾಯಿಗಳ ಕಾರ್ಯಕ್ರಮ ಏನಿತ್ತು. ಅದು ದುರುಪಯೋಗ ಆದರೆ ಇದರ ಬಗ್ಗೆ ತಾವು ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಇದನ್ನು ಅವರ ಗಮನಕ್ಕೆ ಸಂಬಂಧಪಟ್ಟವರು ತಂದಿದ್ದಾರೆ, ಪತ್ರಿಕೆಯಲ್ಲಿ ಬಂದಿದೆ. ಅವರ ಗಮನಕ್ಕೆ ತಂದರೂ ಕೂಡ ಯಾವ ಕೆಲಸವನ್ನೂ ಮಾಡಲಿಲ್ಲ. ಈ ದಶಲಕ್ಷ ಬಾವಿ ಯೋಜನೆಯನ್ನು ಜಾರಿಗೆ ತರುವುದಕ್ಕೆ ಪ್ರತ್ಯೇಕವಾದಂಥ ಒಂದು ಸಮಿತಿ ಇರಬೇಕು, ಫಲಾನುಭವಿಗಳ ಆಯ್ಕೆ ಆಗಬೇಕು. ಅವರಿಗೆ ಹಣ ಸರಿಯಾದ ರೀತಿಯಲ್ಲಿ ಫಲಾನುಭವಿಗಳ ಮೂಲಕ ಖರ್ಚು ಮಾಡಬೇಕಾಗುತ್ತದೆ. ಆದರೆ ಈ ನಿಯಮಗಳಿಗೆ ತಿಲಾಂಜಲಿ ಕೊಟ್ಟು ಫಲಾನುಭವಿಗಳಿಗೆ ಗೊತ್ತಿಲ್ಲದ ಹಾಗೆ ಇವತ್ತಿನ ದಿವಸ ೩ ಸಾವಿರ ರೂಪಾಯಿಗಳನ್ನು ಖರ್ಚು ಮಾಡುವ ಜಾಗದಲ್ಲಿ ೧೭-೧೮ ಸಾವಿರ ರೂಪಾಯಿ ಖರ್ಚು ಮಾಡಿದ್ದಾರೆ ಆದ್ದರಿಂದ ಇದರ ಬಗ್ಗೆ ಸರ್ಕಾರ ಕೂಡಲೇ ಸೂಕ್ತವಾದಂಥ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ. ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದ್ದರೆ ಅದು ಏನು ಕ್ರಮ ಎಂದು ಹೇಳಬೇಕು. ಇದು ಕೇಂದ್ರ ಸರ್ಕಾರದ ಹಣ. ಈ ಎಲ್ಲಾ ನಿಯಮಗಳನ್ನು ಮೀರಿ ಫಲಾನುಭವಿಗಳಿಗೆ ತಿಳಿಸದೆ ಅವರ ಹಿತಕ್ಕಾಗಿ ಯಾವ ಕೆಲಸವನ್ನೂ ಮಾಡದೆ ಈ ಹಣವನ್ನು ಲಪಟಾಯಿಸುವಂಥ ಜನ ಇದ್ದಾರೆ. ಇದರ ಹಿಂದೆ ಪ್ರಭಾವಯುತವಾದಂಥ ಜನ ಇದ್ದಾರೆ. ಇವರನ್ನು ರಕ್ಷಣೆ ಮಾಡುವುದಕ್ಕೋಸ್ಕರವಾಗಿ ಕಾರ್ಯಕ್ರಮ ತೆಗೆದುಕೊಂಡಿಲ್ಲವೋ ಎಂದು ನಾವು ಕೇಳಬೇಕಾಗುತ್ತದೆ. ಇವತ್ತಿನ ದಿವಸ ನಮ್ಮ ಅರ್ಥಮಂತ್ರಿಗಳು ಹೇಳಿದ್ದಾರೆ ಮತ್ತು ಈ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಹೇಳಿದೆ ನಾವು ರೋಗಗ್ರಸ್ಥ ಘಟಕಗಳನ್ನು, ಅವು ಸಹಕಾರಿ ಕ್ಷೇತ್ರದಲ್ಲಿ ಇರಬಹುದು ಅಥವಾ ಬೇರೆ ಕ್ಷೇತ್ರದಲ್ಲಿ ಇರಬಹುದು ಅದನ್ನು ಪುನರುಜ್ಜೀವನ ಮಾಡುವುದಕ್ಕೆ, ಪುನಶ್ಚೇತನಗೊಳಿಸಲಿಕ್ಕೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಬೇಕು. ಈಗಾಗಲೇ ಇಂತಹ ಪರಿಸ್ಥಿತಿಯನ್ನು ಪರಿಶೀಲನೆ ಮಾಡುವುದಕ್ಕೆ ಸಮಿತಿ ನೇಮಕ ಮಾಡಿದ್ದೇವೆ ಎಂದು ಹೇಳಿದ್ದಾರೆ. ಈ ಸಮಿತಿಗಳ ನೇಮಕ ಮತ್ತು ಅವುಗಳ ಶಿಫಾರಸ್ಸುಗಳು ಏನಿವೆ. ಇದು ಯಾವುದೇ ಸರ್ಕಾರ ಬಂದರೂ ಮಾಮೂಲಾಗಿ ನಡೆಯುವಂಥ ಪರಿಸ್ಥಿತಿ ಆಗಬಾರದು. ಈ ರೋಗಗ್ರಸ್ತ ಘಟಕಗಳನ್ನು ಪುನಶ್ಚೇತನಗೊಳಿಸುವುದಕ್ಕೆ ಹಿಂದೆ ಒಂದು ಸಮಿತಿಯನ್ನು ಮಾಡಿದ್ದರು. ಆ ಸಮಿತಿ ಅನೇಕ ವಿಧವಾದಂಥ ಅಭಿಪ್ರಾಯಗಳನ್ನು ಕೊಟ್ಟಿರಬಹುದು. ಅವುಗಳನ್ನು ಪುನರ್ ಪರಿಶೀಲಿಸಿ ರೋಗಗ್ರಸ್ಥ ಘಟಕಗಳನ್ನು, ಅದು ಸಹಕಾರ ಕ್ಷೇತ್ರದ ನೂಲಿನ ಗಿರಣಿ ಆಗಿರಬಹುದು, ಸಕ್ಕರೆ ಕಂಪನಿ ಆಗಿರಬಹುದು, ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದಲ್ಲದೆ. ಈ ದೇಶದಲ್ಲಿ ಸಾರ್ವಜನಿಕ ವಲಯ ಘಟಕಗಳು ಏನಿವೆ, ಇವುಗಳ ಬಗ್ಗೆ ಸಮತಾವಾದ ಸಮಾಜ ರಚನೆಯಲ್ಲಿ ನಂಬಿಕೆ ಇರುವಂಥ ಸರ್ಕಾರ ಪ್ರಾಮಾಣಿಕತೆಯಿಂದ ನಡೆದುಕೊಳ್ಳಬೇಕು. ನಷ್ಟದಲ್ಲಿರುವ ಸಾರ್ವಜನಿಕ ವಲಯದಲ್ಲಿರುವ ಘಟಕಗಳನ್ನು ಮುಚ್ಚಬೇಕು, ಅದರ ಸುಸಂಬದ್ಧತೆಯನ್ನು ಇವತ್ತು ಆಲೋಚನೆ ಮಾಡಬೇಕೆಂಬ ಮಾತನ್ನು ಹೇಳುತ್ತಾರೆ. ಮಾನ್ಯ ಅಧ್ಯಕ್ಷಣಿಯವರೇ, ತಾವು ಕೂಡ ಸಮಾಜವಾದಿಗಳು. ತಾವು ಇದರ ಬಗ್ಗೆ ಚಿಂತನೆ ಮಾಡುತ್ತೀರೆಂದು ನನಗೆ ಗೊತ್ತಿದೆ. ಈ ದೇಶದಲ್ಲಿ ಯಾವುದೇ ಸರ್ಕಾರ ಇರಬಹುದು, ಸಾರ್ವಜನಿಕ ವಲಯದಲ್ಲಿ ಇಲ್ಲವೇ ಸಹಕಾರ ಕ್ಷೇತ್ರದಲ್ಲಿ ಘಟಕಗಳನ್ನು

ಸ್ಥಾಪನೆ ಮಾಡುವುದು, ಸ್ಥಾಪನೆ ಮಾಡಿದಂಥ ಘಟಕಗಳನ್ನು ಲಾಭದಾಯಕವಾಗದ ರೀತಿಯಲ್ಲಿ ಆಡಳಿತ ಮಾಡಲಿಕ್ಕೆ ಸಹಾಯ ಮಾಡುವುದು ಆ ಮೇಲೆ ಅವುಗಳನ್ನು ಮಾರುವುದು ಇಷ್ಟೇ ಈ ಸರ್ಕಾರಗಳ ಕೆಲಸ ಸಾರ್ವಜನಿಕ ಕ್ಷೇತ್ರದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಹಾಕಿ ಈ ಘಟಕಗಳನ್ನು ಸ್ಥಾಪನೆ ಮಾಡಿದಾಗ ಇದರಿಂದ ಲಾಭ ಪಡೆಯುತಕ್ಕಂಥ ಜನ ಇದ್ದಾರೆ. ಈಗಲೂ ಸಹ ಖಂಡಿತವಾಗಿ ಲಾಭವನ್ನು ಮಾಡಲಿಕ್ಕೆ, ಪ್ರೋತ್ಸಾಹವನ್ನು ಕೊಡಲಿಕ್ಕೆ ಮನಸ್ಸು ಇಲ್ಲವೆಂಬುದನ್ನು ನೋಡಿದ್ದೇವೆ. ಆದರೆ ಶ್ರೀ ಕಾಗೋಡು ತಿಮ್ಮಪ್ಪನವರು ನೀವು ಮಾಡಿದಿರಲ್ಲ ಎಂದು ಹೇಳಿದರು. ನಾವು ಮಹದೇಶ್ವರ ಕಾರ್ಖಾನೆಯನ್ನು ಗೌರಿಬಿದನೂರಿನಲ್ಲಿ ಮಾರಿದ್ದೇವೆಂಬ ಸಮರ್ಥನೆಯ ಆಧಾರದ ಮೇಲೆ ತಾವು ಇವತ್ತಿನ ದಿವಸ ಬೇರೆ ಬೇರೆ ಘಟಕಗಳನ್ನು ಮಾರಲಿಕ್ಕೆ ತಯಾರಿದ್ದೀರಾ ಎಂಬ ಮಾತನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ. ನಿಜವಾಗಿ ಸಾರ್ವಜನಿಕ ಘಟಕಗಳನ್ನು ಸ್ಥಾಪನೆ ಮಾಡುವುದರಿಂದ ಮತ್ತು ಅವುಗಳನ್ನು ಖಾಸಗೀಕರಣ ಮಾಡುವುದರಿಂದ ಸಂಬಂಧಪಟ್ಟವರಿಗೆ ಲಾಭ ಆಗುತ್ತದೆ. ಯಾರು ಅವುಗಳನ್ನು ತೆಗೆದುಕೊಳ್ಳುತ್ತಾರೆ ಅವರಿಗೆ ಲಾಭವಾಗುತ್ತದೆಯೇ ಹೊರತಾಗಿ ಜನಸಾಮಾನ್ಯರಿಗೆ ಲಾಭ ಆಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇದನ್ನು ಕೈಬಿಡಬೇಕೆಂಬ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಅನೇಕ ಉದಾಹರಣೆಗಳನ್ನು ಕೊಡಬಹುದು, ಭ್ರಷ್ಟಾಚಾರ ನಿರ್ಮೂಲನೆ ವಿಚಾರವಾಗಲೀ, ದಕ್ಷತೆಯನ್ನು ಹೆಚ್ಚಿಸುವ ವಿಷಯವಾಗಲಿ, ಆ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂಬ ಮಾತನ್ನು ಹೇಳಿದ್ದಾರೆ, ಆದರೆ, ಇದಕ್ಕೆ ಪೂರಕವಾದಂಥ ಯಾವುದೇ ಕಾರ್ಯಕ್ರಮವನ್ನು ಈ ಸರ್ಕಾರ ಇಲ್ಲಿಯವರೆಗೆ ತೆಗೆದುಕೊಂಡಿಲ್ಲ. ಅದಕ್ಕೆ ಬದಲಾಗಿ, ಅವರು ಹಿಂದೆ ಆಡಳಿತದಲ್ಲಿ ಛಿದ್ರತೆ ಇತ್ತು ಎಂಬುದನ್ನು ಹೇಳುತ್ತಿದ್ದರು. ಹಾಗಾದರೆ ಆಡಳಿತ ಛಿದ್ರತೆ ಇದ್ದರೆ ಭ್ರಷ್ಟಾಚಾರ ಇದ್ದರೆ ಅಧಕ್ಷತೆ ಇದ್ದರೆ ಅದನ್ನು ನಿವಾರಣೆ ಮಾಡುವುದಕ್ಕೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಲಿಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ, ತಮ್ಮ ಸರ್ಕಾರದಲ್ಲಿ ಇರತಕ್ಕ ಫೈಲುಗಳಲ್ಲಿ, ಭ್ರಷ್ಟಾಚಾರದ ಆರೋಪ ಇರುವಂತಹ ಅಧಿಕಾರಿಗಳ ಮೇಲೆ ಸರಿಯಾದ ಕ್ರಮವನ್ನು ಏಕೆ ತೆಗೆದುಕೊಂಡಿಲ್ಲ. ಅನೇಕ ದುರುಪಯೋಗದ ಕಡತಗಳು ಇದ್ದು, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನೌಕರಶಾಹಿಯ ಪ್ರಭಾವಕ್ಕೆ ಒಳಗಾಗಿ ಇಲ್ಲವೇ ರಾಜಕೀಯ ಕಾರಣದಿಂದ ಕ್ರಮವನ್ನು ತೆಗೆದುಕೊಳ್ಳುವಂಥ ಪರಿಸ್ಥಿತಿಯಲ್ಲಿಲ್ಲವೆಂದು ಹೇಳುತ್ತಿದ್ದೇನೆ. ಇವತ್ತಿನದಿವಸ ನಾನು ಹೇಳಿದಂಥ ಅನೇಕ ವಿಚಾರಗಳು ಏನಿವೆ, ಈ ವಿಚಾರಗಳನ್ನು ಪ್ರಸ್ತಾಪ ಮಾಡಿದಾಗ, ಈ ಸರ್ಕಾರ ನಿಜವಾಗಿಯೂ ಅತ್ಯಂತ ನಿರ್ಜೀವ ಸರ್ಕಾರ, ನಿಶ್ಚೇತನವಾದ ಸರ್ಕಾರ ಎಂದು ಹೇಳುತ್ತೇನೆ. ಆ ಕಡೆಯ ಸದಸ್ಯರು ಹೇಳಿದ ಮತ್ತು ಬಳಸಿದ ಪದಗಳನ್ನು ನಾನು ಉಪಯೋಗ ಮಾಡುವುದಕ್ಕೆ ಇಷ್ಟಪಡುವುದಿಲ್ಲ ಅದು ಅವರ ಅಭಿಪ್ರಾಯ ಇರಬಹುದು. ಇವತ್ತಿನದಿವಸ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ನೀತಿ ನಿರೂಪಣೆಗಳನ್ನು ಏನು ಹೇಳಿದೆ, ಅದಕ್ಕೆ ಖಂಡಿತವಾಗಿಯೂ ಒತ್ತು ಕೊಡುವಂತಹ ಪ್ರಾಮಾಣಿಕವಾಗಿ ಕಾರ್ಯರೂಪದಲ್ಲಿ ತರುವಂತಹ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಮನಸ್ಸಿಲ್ಲ ಎಂಬ ಮಾತನ್ನು ಹೇಳುತ್ತೇನೆ. ಇಷ್ಟನ್ನು ಹೇಳುತ್ತಾ, ಇನ್ನು ಕೆಲವು ವಿಚಾರಗಳು ರೈತರ ಬಗ್ಗೆ ಹೇಳಿದ್ದಾರೆ ಇವರು ಹೋದ ವರ್ಷದಲ್ಲಿ ಒಂದು ನೀತಿಯನ್ನು ಹೇಳಿದರು. ರಾಗಿ ಬೆಲೆ ಬಹಳ ಕಡಿಮೆಯಾಗಿದೆ, ಅದಕ್ಕೆ ರಾಗಿ ಬೆಳೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಕೊಂಡುಕೊಳ್ಳುತ್ತೇವೆ ಎಂಬ ಮಾತನ್ನು ಹೇಳಿದರು. ಚಿತ್ರದುರ್ಗ, ಶಿವಮೊಗ್ಗ ಮತ್ತಿತರ ಕಡೆಗಳಲ್ಲಿ ರಾಗಿ ಬೆಲೆ ಕಡಿಮೆಯಾಗಿದೆ. ಈ ಸರ್ಕಾರ ಹಿಂದೆ ತೆಗೆದುಕೊಂಡ ತೀರ್ಮಾನದ ಪ್ರಕಾರ, ೧೯೫ ರೂಪಾಯಿ ಕೊಟ್ಟು ಮುಕ್ತ ಮಾರುಕಟ್ಟೆಯಲ್ಲಿ, ರಾಗಿ ಬೆಳೆಗಾರರಿಗೆ ಸಹಾಯ ಮಾಡುವ ದೃಷ್ಟಿಯಿಂದ ಕೊಂಡುಕೊಳ್ಳಬೇಕಾಗಿತ್ತು. ನಾವು ಈ ಮಾತನ್ನು ಸಂಬಂಧಪಟ್ಟವರ ಗಮನಕ್ಕೆ ತಂದರೂ, ಸರ್ಕಾರದವರು ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿಲ್ಲ. ರೈತರಿಗೆ ಬೇಕಾದ ಎಲ್ಲಾ ಸಹಾಯವನ್ನು ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ನಿಜವಾಗಿ ನೋಡಿದಾಗ, ಅವರಿಗೆ ವಂಚನೆ, ಮೋಸ ಮಾಡುತ್ತಿದ್ದು, ಈ ವಿಷಯದಲ್ಲಿ ಆಲೋಚನೆ ಮಾಡದೇ, ಪ್ರಾಮಾಣಿಕವಾಗಿ, ರೈತರಿಗೆ ಸಹಾಯ ಮಾಡುವುದಕ್ಕೆ ಸರ್ಕಾರ ತಯಾರಿಲ್ಲ ಎಂಬ ಮಾತನ್ನು ಹೇಳಬೇಕಾಗಿದೆ. ಇನ್ನು ಸಕ್ಕರೆ ಬೆಲೆಯನ್ನು ಕೇಂದ್ರ ಸರ್ಕಾರ ೬೦ ರೂಪಾಯಿನಷ್ಟು ಹೆಚ್ಚಿಸಿದೆ. ಈ ಬೆಲೆ ಏರಿಕೆಯ ಉಪಯೋಗ ಏನಿದೆ ಅದನ್ನು ಈ ದಿವಸ ರೈತರಿಗೆ ಕೊಡಬೇಕು ಕನಿಷ್ಟ ಕಬ್ಬಿನ ಬೆಲೆ ೨೫ ರೂಪಾಯಿ ಹೆಚ್ಚಿಸಿದ್ದಾರೆ, ಇವೆಲ್ಲವನ್ನೂ ಪರಿಶೀಲನೆಗೆ ತೆಗೆದುಕೊಂಡಾಗ, ನಮ್ಮ ದೇಶದಲ್ಲಿ ಕೈಗಾರಿಕಾ ಉತ್ಪನ್ನ ಅಥವಾ ಕೃಷಿ ಉತ್ಪನ್ನ ಹೆಚ್ಚಾಗದೇ ಇದ್ದರೆ ಸಂಪತ್ತು ಹೆಚ್ಚಾಗುವುದಕ್ಕೆ ಸಾಧ್ಯವಿಲ್ಲ. ಈ ಸಂಪತ್ತು ಹೆಚ್ಚಾಗದೇ ಇದ್ದರೆ ನಮ್ಮ ಸಂಪನ್ಮೂಲಗಳನ್ನು ಸಂಗ್ರಹಿಸಲಿಕ್ಕೆ ಸಾಧ್ಯವಿಲ್ಲ. ಕಳೆದ ೫-

ವರ್ಷಗಳಿಂದ, ಈ ದೇಶದಲ್ಲಿ ಬರಗಾಲ ಬಂದುದರಿಂದ, ನಾವು ಸಂಪನ್ಮೂಲಗಳನ್ನು ಹೆಚ್ಚು ಶೇಖರಣೆ ಮಾಡುವುದಕ್ಕೆ ಸಾಧ್ಯವಾಗಿಲ್ಲ ಎಂಬ ಮಾತನ್ನು ಹೇಳುತ್ತೇನೆ. ೭ನೇ ಯೋಜನಾ ಅವಧಿಯಲ್ಲಿ ಕೇಂದ್ರ ಯೋಜನಾ ಆಯೋಗ ನಿಗದಿ ಮಾಡಿದ ಸಂಪನ್ಮೂಲ ಸಂಗ್ರಹಣೆ ಏನಿದೆ, ಅದನ್ನು ನಾವು ಸಂಗ್ರಹ ಮಾಡಿದ್ದೇವೆ. ಹಾಗೂ ನಿಗದಿತ ಯೋಜನಾ ವೆಚ್ಚವನ್ನೂ ಸಹ ನಾವು ಸಂಗ್ರಹ ಮಾಡಿದ್ದೇವೆಂದು ಹೇಳುತ್ತೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ನಿಮ್ಮ ಕಾಲದಲ್ಲಿ ಏನೂ ಆಗಿಲ್ಲ, ಕೃಷಿ ಉತ್ಪನ್ನದಲ್ಲಿ ಹೆಚ್ಚಾಗಿಲ್ಲವೆಂದು ಹೇಳಿದರು ಕೃಷಿ ಉತ್ಪನ್ನದಲ್ಲಿ ೧೯೭೨-೭೩ರಲ್ಲಿ ಇದ್ದುದಕ್ಕಿಂತ ಹೆಚ್ಚಿನ ಕೃಷಿ ಉತ್ಪನ್ನ ೧೯೭೮-೭೯ರಲ್ಲಿ ನಮ್ಮ ರಾಜ್ಯದಲ್ಲಿ ಆಗಿದೆ. ನಮ್ಮ ರಾಜ್ಯದಲ್ಲಿರತಕ್ಕ ಕೃಷಿ ಉತ್ಪನ್ನ ಅಥವಾ ನಮ್ಮ ದೇಶದಲ್ಲಿರತಕ್ಕ ಕೃಷಿ ಉತ್ಪನ್ನದಿಂದ ನಮ್ಮ ದೇಶದ ಜನರಿಗೆ ಸಾಕಷ್ಟು ಆಹಾರಧಾನ್ಯ ನೀಡಲಿಕ್ಕೆ ಸಾಧ್ಯವಾಗದೇ ಇರಬಹುದು. ಚೀನಾ ಒಂದರಲ್ಲಿ, ಒಂದು ವರ್ಷಕ್ಕೆ ಒಬ್ಬ ಮನುಷ್ಯನಿಗೆ ೩೦೦ ಕೆ. ಜಿ. ಕೊಟ್ಟರೆ, ನಮ್ಮ ರಾಷ್ಟ್ರದಲ್ಲಿ ಕೇವಲ ೨೦೦ ಕೆ. ಜಿ. ಒಂದು ವರ್ಷಕ್ಕೆ ಒಬ್ಬ ಮನುಷ್ಯನಿಗೆ ಕೊಡುತ್ತಿದ್ದೇವೆ. ಈ ದಶಕದ ಕೊನೆಯಲ್ಲಿ ಏನಾದರೂ ನಾವು ಇದೇ ರೀತಿಯಲ್ಲಿ ಕೃಷಿ ಉತ್ಪನ್ನವನ್ನು ಹೆಚ್ಚು ಮಾಡಿಕೊಳ್ಳದಿದ್ದರೆ, ನಾವು ಈ ದೇಶದ ಜನಕ್ಕೆ ಉಣ್ಣಲಿಕ್ಕೆ ಅನ್ನವನ್ನು ಕೊಡಲಾರದಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಕೃಷಿ ಉತ್ಪನ್ನ ಹೆಚ್ಚು ಮಾಡಲಿಕ್ಕೆ ಬೇಕಾದ ಕಾರ್ಯನೀತಿಯನ್ನು ನಾವು ಅನುಸರಿಸಬೇಕು. ಉದಾಹರಣೆಗೆ ಹೇಳುವುದಾದರೆ, ೧೯೬೦-೬೧ರಲ್ಲಿ ಏನಿತ್ತು, ಅದು ೧೯೭೦-೭೧ರ ರಾಸಾಯನಿಕ ಗೊಬ್ಬರ ಬಳಕೆಯನ್ನು ತೆಗೆದುಕೊಂಡಾಗ, ಒಂದಕ್ಕೆರಡರಷ್ಟು ಜಾಸ್ತಿಯಾಗಿದೆ. ೧೯೭೦-೭೧ ಮತ್ತು ೧೯೭೮-೭೯ರ ಅಂಕಿಅಂಶ ತೆಗೆದುಕೊಂಡಾಗ ಈ ರಾಸಾಯನಿಕ ಗೊಬ್ಬರದ ಉಪಯೋಗ ಎರಡರಷ್ಟು ಜಾಸ್ತಿಯಾಗಿದೆ. ಇವತ್ತಿನ ದಿವಸ ೮ ಲಕ್ಷ ಟನ್ ಗೊಬ್ಬರವನ್ನು ನಾವು ಉಪಯೋಗಿಸುತ್ತೇವೆ. ಆದ್ದರಿಂದ ಇವತ್ತು ರಾಜ್ಯಸರ್ಕಾರವಾಗಲೀ ಅಥವಾ ಕೇಂದ್ರ ಸರ್ಕಾರವಾಗಲೀ, ಕೃಷಿ ಉತ್ಪನ್ನವನ್ನು ಹೆಚ್ಚು ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡದೇ ಹೋದರೆ ಹಾಗೂ ಕೃಷಿಕರಿಗೆ ಬೇಕಾದ ರಿಯಾಯಿತಿಗಳನ್ನು ಕೊಡದೇ ಹೋದರೆ, ಸಾಮಾನ್ಯ ಜನರು ಉಣ್ಣಲಾರದ ಪರಿಸ್ಥಿತಿ ಬರುವುದಕ್ಕೆ ಸಾಧ್ಯವಾಗುತ್ತಿದೆ. ಆದ್ದರಿಂದ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನು ವಿದ್ಯುತ್ ಸರಬರಾಜಿನಲ್ಲಿ ತೊಂದರೆ ಇದೆ ಇದರ ಬಗ್ಗೆ ಮಾನ್ಯ ಸದಸ್ಯರು ಈಗಾಗಲೇ ಪ್ರಸ್ತಾಪ ಮಾಡಿರುವುದರಿಂದ, ನಾನು ಇದರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ನೀರಾವರಿಗೆ, ವಿದ್ಯುತ್ ಉತ್ಪನ್ನ ಮಾಡುವುದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡುತೇವೆಂದು ಹೇಳಿದ್ದಾರೆ. ೧೯೭೦-೭೧ರಲ್ಲಿ ಕೇವಲ ೯ರಷ್ಟು ಮಾತ್ರ ಈ ಕೃಷಿಗೆ ವಿದ್ಯುತ್ ಕೊಡುತ್ತಿದ್ದರು.

೧೯೭೮-೭೯ ರಲ್ಲಿ ನಮ್ಮ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಶೇಕಡಾ ೩೦ ರಷ್ಟನ್ನು ರೈತರಿಗೆ ಕೊಡುತ್ತಿದ್ದೇವೆ. ಆವತ್ತು ಕೇವಲ ೧೦ ಪೈಸೆ ದರದಲ್ಲಿ ಕೊಡುತ್ತಿದ್ದೆವು. ವಿದ್ಯುತ್ ಉತ್ಪಾದನೆ ದರ ಒಂದು ಯೂನಿಟ್‌ಗೆ ೩೮ ಪೈಸೆ ಆಗುತ್ತಿದ್ದರೂ ಕೂಡಾ ರೈತರಿಗೆ ೧೦ ಪೈಸೆ ದರದಲ್ಲಿ ಕೊಡುತ್ತಿದ್ದೆವು. ಇವತ್ತಿನ ದಿವಸ ರೈತರಿಗೆ ಬೇಕಾದುದು ಏನು ಎಂದರೆ ವಿದ್ಯುತ್ ೪೦ ಸಾವಿರ ಪಂಪ್‌ಸೆಟ್ಸ್‌ಗೆ ವಿದ್ಯುತ್ ಕೊಡುತ್ತೇವೆ ಎಂಬ ಮಾತನ್ನು ತಾವು ಹೇಳಿದ್ದರೂ ಸಹ ಈ ಸರಕಾರ ಬಂದ ಮೇಲೆ ೩೧.೩.೭೯ ರ ವರೆಗೆ ವಿದ್ಯುದ್ದೀಕರಣ ಮಾಡಿದ ಪಂಪು ಸೆಟ್ಟುಗಳ ಸಂಖ್ಯೆ ತೆಗೆದುಕೊಂಡರೆ ಕೇವಲ ೨೩ ಸಾವಿರ ಗುರಿಯನ್ನೂ ಇವರು ಮಾಡಿಲ್ಲ. ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ಇವತ್ತು ಸಾವಿರಾರು ಜನ ರೈತರು ಏನು ವಿದ್ಯುತ್‌ಗಾಗಿ ಕಾದು ಕುಳಿತಿದ್ದಾರೆ ಅವರಿಗೆ ವಿದ್ಯುತ್ ಕೊಡುವ ಕೆಲಸ ಕೂಡಲೇ ಆಗಬೇಕು ಮತ್ತು ಕೃಷಿ ಉತ್ಪನ್ನಕ್ಕೆ ಸಹಕಾರವಾದ ನೀತಿಯನ್ನು ಅವರು ಅನುಸರಿಸಬೇಕೆಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಕೈಗಾರಿಕಾ ಉತ್ಪನ್ನ ಇರಬಹುದು, ಅದರ ಸೂಚ್ಯಂಕವನ್ನು ತೆಗೆದುಕೊಂಡಾಗ ೧೯೬೦-೬೧ ರಲ್ಲಿ ಕೈಗಾರಿಕಾ ಉತ್ಪನ್ನದ ಸೂಚ್ಯಂಕ ಕಡಿಮೆ ಇತ್ತು. ಅದಕ್ಕೆ ಎರಡರಷ್ಟು ಅಂದರೆ ೨೩೩ ರಷ್ಟು ಇವತ್ತಿನ ದಿವಸ ಆಗಿದೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ಕೈಗಾರಿಕಾ ಉತ್ಪನ್ನದಲ್ಲಿ ಆಗಿರುವ ಪ್ರಗತಿಯನ್ನಾಗಲಿ ಕೃಷಿ ಉತ್ಪನ್ನದಲ್ಲಾಗಿರುವ ಪ್ರಗತಿಯನ್ನಾಗಲೀ ತೆಗೆದುಕೊಂಡಾಗ, ಕಳೆದ ಐದಾರು ವರ್ಷಗಳಲ್ಲಿ ಏನೂ ಪ್ರಗತಿಯಾಗಿಲ್ಲ ಎಂಬ ಮಾತನ್ನು ಮಾನ್ಯ ಸದಸ್ಯರು ಏನು ಹೇಳಿದರು, ಅದು ಅಂಕಿ ಅಂಶಗಳಿಂದ ದೂರವಾದಂಥ ವಿಚಾರ ಎಂದು ಹೇಳುತ್ತೇನೆ. ನಿಜವಾಗಿಯೂ ನಮ್ಮ ಗುರಿ ಇರುವಷ್ಟು ಉತ್ಪಾದನೆ ಆಗಿರಲಿಕ್ಕಿಲ್ಲ, ಇದಕ್ಕೆ ಮಳೆ ಮತ್ತು ಅಭಾವ ಪರಿಸ್ಥಿತಿ ಕಾರಣ ಎಂಬ ಮಾತನ್ನು ಹೇಳುತ್ತೇನೆ. ಇವತ್ತಿನ ದಿವಸ ಈಗ ಹೇಳಿದಂಥ ವಿಚಾರಗಳು ಏನಿದ್ದಾವೆ, ಈ ವಿಚಾರಗಳಲ್ಲಿ ಈ ಸರಕಾರ ಯಾವುದೇ ದೃಢವಾದ ನೀತಿಯನ್ನು ಅನುಸರಿಸದೇ ಇರುವುದರಿಂದ ಇದು ಅತ್ಯಂತ ನಿರ್ಜೀವವಾದ, ನಿಷ್ಕ್ರಿಯವಾದ ಸರಕಾರ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮುಂದಾದರೂ ಈ ಜಡತ್ವದಿಂದ ಮೇಲಕ್ಕೆ ಬರಬೇಕು. ನಾವು ಎಲ್ಲವನ್ನೂ ಸಹ ಟೀಕೆ

ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಯಾವ ಒಂದು ಕಾರ್ಯನೀತಿಯನ್ನು ಅನುಸರಿಸುವುದರ ಮೂಲಕ ಈ ದೇಶದ ಜನ ಸಾಮಾನ್ಯರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವೋ ಯಾವ ಒಂದು ಕಾರ್ಯಕ್ರಮದಿಂದ ಈ ದೇಶದಲ್ಲಿರುವ ಸಾಮಾಜಿಕ ಅಸಮಾನತೆ ಮತ್ತು ಆರ್ಥಿಕ ವಿಷಮತೆ ಕಡಿಮೆಯಾಗುತ್ತದೋ ಅಂತಹ ಎಲ್ಲ ಕಾರ್ಯಕ್ರಮಕ್ಕೆ ಪಕ್ಷಬೇಧ ಮರೆತು ನಾವು ಬೆಂಬಲವನ್ನು ಕೊಡುತ್ತೇವೆ. ಆದರೆ ಈ ಕಾರ್ಯಕ್ರಮಗಳನ್ನು ಅನುಸರಿಸುವಾಗ ಈ ಸರಕಾರ ಅನುಸರಿಸುವ ಧಾಟಿ ಏನಿದೆ ಆ ಧಾಟಿ ಬಂಡವಾಳ ಶಾಹಿ ಮತ್ತು ನೌಕರ ಶಾಹಿಯ ಪರವಾಗಿದ್ದು, ಜನಸಾಮಾನ್ಯರ ಮತ್ತು ದುಡಿಯುವ ವರ್ಗದ ಪರ ಇಲ್ಲ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಸಾವಿರಾರು ಕಾರ್ಮಿಕರು ರೋಗಗ್ರಸ್ಥ ಘಟಕಗಳ ಮುಚ್ಚುವಿಕೆಯಿಂದ ಕೆಲಸವಿಲ್ಲದೆ ಇದ್ದಾರೆ. ಅದರ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೋಗಗ್ರಸ್ಥ ಘಟಕಗಳು ಏನಿವೆ, ಯಾವ ಕಾರ್ಖಾನೆಯ ಕಾರ್ಮಿಕರು ಕೆಲಸವಿಲ್ಲದೆ ಇದ್ದಾರೆ, ಆ ದುಡಿಯುವ ವರ್ಗದ ಜನರಿಗೆ ಸ್ವಲ್ಪವಾದರೂ ಸಹಾಯ ಮಾಡುವ ನೀತಿಯನ್ನು ನಿಮ್ಮ ಸರಕಾರ ಅನುಸರಿಸಬೇಕು. ಶೋಷಣೆ ಹೆಚ್ಚು ಮಾಡುವಂತಹ ರೀತಿಯಲ್ಲಿ ಖಾಸಗೀಕರಣ ಮಾಡುವುದಕ್ಕೆ ನಿಮ್ಮ ಸರಕಾರ ಪ್ರಯತ್ನ ಮಾಡಬಾರದು ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ನಷ್ಟದ ಆಧಾರದ ಮೇಲೆ ಇದನ್ನು ಮಾಡುತ್ತೇವೆ ಎಂಬ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದೇ ಮಾತನ್ನು ಮುಂದುವರೆಸಿ, ಸಾರ್ವಜನಿಕ ವಲಯದ ಎಲ್ಲ ಘಟಕಗಳನ್ನು, ಅವು ಕೇಂದ್ರ ಸರಕಾರದ ಅಧೀನದಲ್ಲಿರುವ ಘಟಕಗಳೇ ಆಗಿರಬಹುದು, ರಾಜ್ಯ ಸರಕಾರದ ಅಧೀನದಲ್ಲಿರುವ ಘಟಕಗಳೇ ಆಗಿರಬಹುದು ಸಹಕಾರಿ ಕ್ಷೇತ್ರದ ಅಧೀನದಲ್ಲಿರುವ ಘಟಕಗಳೇ ಆಗಿರಬಹುದು. ಈ ಎಲ್ಲ ಘಟಕಗಳನ್ನು ಒಂದಲ್ಲ ಒಂದು ಕಾರಣದಿಂದ ಒಂದಲ್ಲ ಒಂದು ರೀತಿ ಬಂಡವಾಳ ಶಾಹಿಗಳಿಗೆ ಕೊಡುವ ಒಂದು ಪ್ರಯತ್ನ ಅಥವಾ ಸಂಚು ನಡೆದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಪೂರ್ಣವಾಗಿ ವಿರೋಧ ಮಾಡುತ್ತೇನೆ. ಮತ್ತು ಇದರ ಬಗ್ಗೆ ಸರಕಾರ ಅನುಸರಿಸುವ ನೀತಿ ಏನಿದೆ ಅದನ್ನು ಕೂಡಾ ವಿರೋಧ ಮಾಡಿ, ಇವತ್ತಿನ ದಿವಸ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮಂತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಏನು ಭಾಷಣ ಮಾಡಿದ್ದಾರೆ ಅದಕ್ಕೆ ವಂದನೆಯನ್ನು ಸಲ್ಲಿಸುತ್ತಾ, ಈ ಭಾಷಣದಲ್ಲಿ ನಮ್ಮ ಸರಕಾರ ಏನೇನು ಕೆಲವು ಉತ್ತಮವಾದ ಕೆಲಸಗಳನ್ನು ಮಾಡಬೇಕೆಂದು ಹೊರಟಿದೆ, ಆದರ ಬಗ್ಗೆ ಸೂಚನೆ ಮಾಡಿದ್ದಾರೆ. ಆದನ್ನು ನಾನು ಮೆಚ್ಚುತ್ತಾ, ಶ್ಲಾಘಿಸುತ್ತಾ, ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಆಡಳಿತ ಯಂತ್ರವನ್ನು ಚುರುಕುಗೊಳಿಸುತ್ತೇವೆಂದು ಹೇಳಿದ್ದಾರೆ. ಅದರ ಬಗ್ಗೆ ನನ್ನ ಅಭಿಪ್ರಾಯ ಇಷ್ಟೆ. ಹಿಂದಿನ ಸರಕಾರದಲ್ಲಿ ಯಾವುದೇ ಕೆಲಸವಾಗಬೇಕಾದರೂ ಸಹ ಸಾಮಾನ್ಯ ಜನರಿಗೆ ತುಂಬಾ ತೊಂದರೆಯಾಗುತ್ತಿತ್ತು. ಒಂದು ಫೈಲ್ ಹೋದರೆ ಆದಕ್ಕೆ ಹತ್ತಾರು ತಿಂಗಳು ಕಾಯಬೇಕಾಗುತ್ತಿತ್ತು. ಇವತ್ತೂ ಸಹ ಇನ್ನೂ ಆ ಜಾಡು ಅಳಿಸಿಲ್ಲ ಎನಿಸುತ್ತದೆ ಸರಕಾರಿ ಯಂತ್ರ ಸ್ವಲ್ಪ ಜಡ್ಡು ಹಿಡಿದಿದೆ ಎಂದರೆ ತಪ್ಪಾಗಲಾರದು. ನಮ್ಮಲ್ಲಿ ಜಡ್ಡು ಹಿಡಿದಿದೆ ಎಂದರೆ, ಕುಂಠಿತವಾಗಿದೆ, ಮಡುಗಟ್ಟಿದೆ ಎಂದು ಹೇಳುತ್ತಾರೆ. ಅದನ್ನು ನಾವು ನಿಜವಾಗಿಯೂ ಇವತ್ತು ಚುರುಕುಗೊಳಿಸಬೇಕಾಗಿದೆ. ಇನ್ನೂ ಈ ಸರಕಾರಿ ಯಂತ್ರಕ್ಕೆ ಚಾಟಿ ಏಟು ತಗಲಿಲ್ಲ. ನಮ್ಮ ತಾಲ್ಲೂಕುಗಳಲ್ಲಿ ಸಾಮಾನ್ಯವಾಗಿ ಕೆಲವಾರು ಕಡೆ ನೋಡುತ್ತೇವೆ. ಒ. ಎ. ಪಿ. ಸ್ಯಾಂಕ್ಷನ್ ಆಗಬೇಕಾದರೆ, ಅಥವಾ ನಿಂತು ಹೋಗಿರುವ ಒ.ಎ.ಪಿ. ಬರಬೇಕು ಎಂದು ಹೇಳಬೇಕಾದರೆ ನೂರಾರು ಜನ ತಾಲ್ಲೂಕು ಕಚೇರಿಗಳಿಗೆ, ಟ್ರೆಜರಿಗೆ ಅಲೆದೂ ಅಲೆದೂ ಕೊನೆಗೆ ರಾಜಕಾರಣಿಗಳ ಬೆನ್ನು ಹತ್ತುತ್ತಾರೆ. ನನ್ನದು ಒ, ಎ. ಪಿ. ನಿಂತು ಆರು ತಿಂಗಳಾಗಿದೆ ಒಂದು ವರ್ಷವಾಗಿದೆ ಎಂದು ಬರುತ್ತಾರೆ. ಇದಕ್ಕೆ ಕಾರಣ ಇಷ್ಟೇ, ಅಧಿಕಾರಿಗಳಲ್ಲಿ ಚುರುಕು ಇಲ್ಲ.

ಆ ಮೇಲೆ ಇವತ್ತು ಸಣ್ಣಪುಟ್ಟ ಕೆಲಸಗಳಾಗಬೇಕಾದರೂ ಸಹ ವಿಧಾನ ಸೌಧದಿಂದ ಎಂ. ಎಸ್. ಬಿಲ್ಡಿಂಗ್‌ಗೆ ಫೈಲ್‌ಗಳು ಹೋಗಬೇಕಾಗಿದ್ದರೂ ಅಥವಾ ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಫೈಲ್‌ಗಳು ಹೋಗಬೇಕಾಗಿದ್ದರೂ ಸಹ ಒಂದು ತಿಂಗಳು ಎರಡು ತಿಂಗಳು ಕಾಯಬೇಕಾಗುತ್ತದೆ. ಇಂತಹ ಒಂದು ಪರಿಸ್ಥಿತಿ ಇದ್ದರೆ ಜನರಿಗೆ ನಾವು ಒಳ್ಳೆಯ ಕೆಲಸ ಮಾಡುವುದು ಕಷ್ಟವಾಗುತ್ತದೆ. ಏಕೆಂದರೆ, ಜನರು ನಮ್ಮನ್ನು ತುಂಬ ನಂಬಿದ್ದಾರೆ ಮತ್ತು ನಮ್ಮಿಂದ ತುಂಬ ನಿರೀಕ್ಷೆ ಮಾಡುತ್ತಿದ್ದಾರೆ. ಇವತ್ತು ನಾವೆಲ್ಲರೂ ಬಹುಮತದಿಂದ ಗೆದ್ದು ಬರುವುದಕ್ಕೆ ಕಾರಣ ಹಿಂದೆ ಇದ್ದಂತಹ ಸರ್ಕಾರದ ಬಗ್ಗೆ ಜನರಿಗೆ ಒಂದು ರೀತಿಯಾದಂತಹ ಅಪನಂಬಿಕೆ ಅಥವಾ ಅವಿಶ್ವಾಸ ಬಂದಿತ್ತು. ಮುಂದೆ ಬರುವಂತಹ ಸರ್ಕಾರ ನಮಗೆ ಹೆಚ್ಚು ಹೆಚ್ಚು ಒಳ್ಳೆಯ ಕೆಲಸಕಾರ್ಯಗಳು ಮಾಡಬಹುದು ಎನ್ನುವ ಉದ್ದೇಶದಿಂದ ನಮ್ಮನ್ನು

ಚುನಾಯಿಸಿ ಕಳುಹಿಸಿಕೊಟ್ಟು ನಮ್ಮಿಂದ ಒಳ್ಳೆಯ ಅಭಿವೃದ್ಧಿ ಕೆಲಸಕಾರ್ಯಗಳನ್ನು ಆ ಜನ ನಿರೀಕ್ಷೆ ಮಾಡುತ್ತಿರುವಾಗ ನಾವೂ ಸಹ ಹಿಂದಿನ ಸರ್ಕಾರದ ನೀತಿ ಅನುಸರಿಸಿ ಆಡಳಿತದಲ್ಲಿ ಚುರುಕುತನ ಇಲ್ಲದಿದ್ದರೆ ನಮಗೂ ಸಹ ಒಳ್ಳೆಯ ಹೆಸರು ಬರುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ನಮ್ಮ ಸರ್ಕಾರ ಹೆಚ್ಚು ಮಹತ್ವವನ್ನು ಕೊಡಬೇಕಾಗುತ್ತದೆ. ಇನ್ನೊಂದು ಮಹತ್ವದ ವಿಷಯ ವೆಂದರೆ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ ವರ್ಷಗಳಿಂದ ೫೫ ವರ್ಷಗಳಿಗೆ ಇಳಿಸುತ್ತೇವೆಂದು ಹೇಳಿರುವುದು ನಿಜವಾಗಿಯೂ ಉತ್ತಮವಾದ ಯೋಚನೆ, ಇದನ್ನು ಮಾಡಲೇ ಬೇಕಾಗುತ್ತದೆ. ಅದಕ್ಕಾಗಿ ಇವತ್ತು ನೂರಾರು ಜನ ಯುವಕ ಯುವತಿಯರು ಉದ್ಯೋಗವಿಲ್ಲದೆ ತುಂಬಾ ನಿರಾಶೆಯಿಂದ ಕಾಯುತ್ತಿದ್ದಾರೆ. ಅಂತಹವರಿಗೆ ಅವಕಾಶ ಸಿಗುವಂತಾಗುತ್ತದೆ. ಇದನ್ನು ಆದಷ್ಟು ಬೇಗ ಜಾರಿಗೊಳಿಸತಕ್ಕಂಥಾದ್ದು ತುಂಬಾ ಉತ್ತಮ. ಇನ್ನು ಕಾನೂನು ಮತ್ತು ರಕ್ಷಣೆ ಮಾಡುವ ಸಲುವಾಗಿ ಪರಿಣಾಮಕಾರಿಯಾದ ವ್ಯವಸ್ಥೆ ಮಾಡುತ್ತೇನೆಂದು ಹೇಳಿದ್ದಾರೆ. ಇದು ಬಹಳ ಅಗತ್ಯ. ಕಾನೂನು ಮತ್ತು ರಕ್ಷಣೆ ಜನರಿಗೆ ಮತ್ತು ದುರ್ಬಲವರ್ಗದವರಿಗೆ ಹಾಗೂ ಹಿಂದುಳಿದ ವರ್ಗದವರಿಗೆ ಹಾಗೂ ಹರಿಜನ ಮತ್ತು ಗಿರಿಜನರಿಗೆ ಬಹಳ ಅಗತ್ಯವಾಗಿದೆ. ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಈ ಇಲಾಖೆಯಲ್ಲಿ ಹರಿಜನ ಮತ್ತು ಗಿರಿಜನರಿಗೆ ಹಾಗೂ ದುರ್ಬಲವರ್ಗದವರಿಗೆ ಹೆಚ್ಚಿನ ರಕ್ಷಣೆ ಸಿಗಬೇಕಾಗುತ್ತದೆ ಹಿಂದಿನ ಸರ್ಕಾರದಲ್ಲಿ ನಾವು ನೋಡಿದಾಗ ಹಲವಾರು ಕಡೆ ಹರಿಜನ ಮತ್ತು ಗಿರಿಜನರ ಮೇಲೆ ದೌರ್ಜನ್ಯಗಳು ನಡೆದವು. ಒಂದು ಪ್ರದೇಶದಲ್ಲಿ ಹರಿಜನರಿಗೆ ಮಲವನ್ನು ತಿನ್ನಿಸಿದರು ಎಂಬ ವಿಷಯವನ್ನು ಕೇಳಿ ನಾವೆಲ್ಲ ತಲೆ ತಗ್ಗಿಸುವಂತಾಯಿತು. ನಮ್ಮ ಚಿಕ್ಕಮಗಳೂರು ಜಿಲ್ಲೆಯ ಬಸವನ ಗೂಡು ಎನ್ನುವ ಕಡೆ ಹರಿಜನರಿಗೆ ಮತ್ತು ಸವರ್ಣೀಯರಿಗೆ ಗಲಾಟೆಯಾಗಿ ಹರಿಜನರಮನೆಗಳನ್ನು ಸುಟ್ಟು ಹಾಕಿದರು ಆಗ ಇದರ ಬಗ್ಗೆ ಪೋಲೀಸ್ ಇಲಾಖೆಯವರು ಏನು ಕ್ರಮ ತೆಗೆದುಕೊಳ್ಳಬೇಕಾಗಿತ್ತು, ಅದು ನಾವು ಎಣಿಸಿದಷ್ಟುಮಟ್ಟಿಗೆ ಕೆಲಸಆಗಲಿಲ್ಲ. ಅದೇರೀತಿಯಲ್ಲಿ ಮಂಡ್ಯ ಜಿಲ್ಲೆಯ ಕಾಡಕೊತ್ತನಹಳ್ಳಿಯಲ್ಲೂ ಸಹ ಸವರ್ಣೀಯರು ಹರಿಜನರಮೇಲೆ ದಾಳಿ ನಡೆಸಿ ಅವರ ಗುಡಿಸಲುಗಳನ್ನು ನಾಶ ಮಾಡಿ ಅವರಿಗೆ ಸಿಕ್ಕಾಪಟ್ಟೆ ಕಿರುಕುಳ ಕೊಟ್ಟಿದ್ದಾರೆ. ನಾವೂ ಸಹ ಶಾಸಕರಾಗಿ ಸಂಬಂಧಪಟ್ಟ ಇಲಾಖೆಯವರಿಗೆ ಹೇಳಿದ್ದೇವೆ. ಎಷ್ಟರ ಮಟ್ಟಿಗೆ ನಮ್ಮ ಜನರಿಗೆ ನ್ಯಾಯ ಸಿಗುತ್ತದೆ ಎನ್ನುವುದನ್ನು ಕಾದು ನೋಡ ಬೇಕಾಗಿದೆ. ಸರ್ಕಾರದವರು ಕಾನೂನು ಮತ್ತು ರಕ್ಷಣೆ ಹರಿಜನ ಮತ್ತು ಗಿರಿಜನರಿಗೆ ದಲಿತರಿಗೆ ಕೊಡಬೇಕು. ಕಾನೂನು ವ್ಯವಸ್ಥೆಯನ್ನು ಚುರುಕು ಗೊಳಿಸುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಹರಿಜನ ಮತ್ತು ಗಿರಿಜನರು ಏನು ಈ ಸರ್ಕಾರದ ಮೇಲೆ ನಂಬಿಕೆ ಇಟ್ಟಿದ್ದಾರೆ ಅವರು ಈ ನಂಬಿಕೆಯನ್ನು ಕಳೆದುಕೊಳ್ಳಬೇಕಾದ ಪ್ರಸಂಗ ಬರಬಹುದು. ಇನ್ನು ಗ್ರಾಮ ನೈರ್ಮಲ್ಯ ಯೋಜನೆಯನ್ನು ತಂದಿದ್ದಾರೆ. ನಿಜವಾಗಲೂ ಇದು ಮೆಚ್ಚತಕ್ಕಂಥ ವಿಷಯ. ಆದರೆ ಬಯಲುಸೀಮೆ ಪ್ರದೇಶದಲ್ಲಿ ಹೆಣ್ಣು ಮಕ್ಕಳಿಗೆ ಆಗಲಿ, ಊರಿನವರಿಗಾಗಲಿ ಲೆಟ್ರಿನ್ ಪ್ರಾಬ್ಲಂ ಇರುತ್ತದೆ. ನಮ್ಮ ಕಡೆ ಆದರೆ ತೋಟಗಳು ಹೆಚ್ಚು ಇರುತ್ತವೆ. ಕಾಡುಗಳಿರುತ್ತವೆ, ಅಷ್ಟು ಪ್ರಾಬ್ಲಂ ಇರುವುದಿಲ್ಲ. ನಮ್ಮ ಹಳ್ಳಿಗಾಡು ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಕುಡಿಯುವ ನೀರಿನ ವ್ಯವಸ್ಥೆ ಮಾಡಿಲ್ಲ, ಈ ಬಗ್ಗೆ ಮಹಿಳಾ ಶಾಸಕರೆಲ್ಲಾ ಸೇರಿ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆವು. ಈಗ ಗ್ರಾಮನೈರ್ಮಲ್ಯ ಯೋಜನೆಯನ್ನು ನಮ್ಮ ಹಳ್ಳಿಗಳಿಗೆ ಅಳವಡಿಸಿದ್ದೇ ಆದರೆ ನೀರೇ ಇಲ್ಲದಿದ್ದರೆ ಈ ಯೋಜನೆ ಎಷ್ಟರ ಮಟ್ಟಿಗೆ ಯಶಸ್ವಿಯಾಗಲಿಕ್ಕೆ ಸಾಧ್ಯವಾಗುತ್ತವೆ, ಇನ್ನೂ ಕೊಳಕಾಗುತ್ತದೆ. ಮೊದಲು ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಿ ಈ ಯೋಜನೆಯನ್ನು ಜಾರಿಗೆ ತಂದರೆ ಮಾತ್ರ ಸಾಧನೆ ಮಾಡಿದ ಹಾಗೆ ಆಗುತ್ತದೆ. ಇನ್ನು ಹರಿಜನ–ಗಿರಿಜನರಿಗೆ ಹೆಚ್ಚು ಆದ್ಯತೆ ಕೊಡುತ್ತೇವೆ, ಮತ್ತು ಹಾಸ್ಟಲ್‌ನಲ್ಲಿರುವ ಮಕ್ಕಳಿಗೆ ಊಟದ ವ್ಯವಸ್ಥೆಗೆ ಹೆಚ್ಚಿನ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಇದು ನಾವೆಲ್ಲ ಮೆಚ್ಚತಕ್ಕಂಥ ವಿಷಯ. ಇವತ್ತು ಏನಾಗಿದೆ ಎಂದರೆ ನಿಜವಾಗಲೂ ಸಮಾಜ ಕಲ್ಯಾಣ ಇಲಾಖೆ ನಿದ್ದೆ ಮಾಡುತ್ತಿದೆ ಎಂದು ಅನಿಸುತ್ತದೆ. ನನ್ನ ಜಿಲ್ಲೆಯಲ್ಲಿ ಮೊನ್ನೆ ಕಾಲೇಜು ಹಾಸ್ಟೆಲ್‌ನಲ್ಲಿ ಎರಡು ದಿವಸ ಮಕ್ಕಳಿಗೆ ಊಟ ಇರಲಿಲ್ಲ. ಆ ಮೇಲೆ ಹಾಸ್ಟೆಲ್ ಕಟ್ಟಡ ಕಟ್ಟಿ ಎಂಟು ತಿಂಗಳಾಗಿದೆ. ಕೊಳೆತು ನಾರುತ್ತಿದೆ, ಎಂಟು ವರ್ಷದ ಕಟ್ಟಡದ ತರಹ ಕಾಣುತ್ತಿದೆ. ಕಾರಣ ಅಲ್ಲಿ ಕೆಲಸ ಮಾಡುವವರಿಗೆ ಮಾನವೀಯತೆ ಇಲ್ಲ, ಕೆಲಸ ಮಾಡುವ ಮನಸ್ಸಿಲ್ಲ, ವರ್ಕ್ ಡಿವೋಷನ್ ಇಲ್ಲ. ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ವರ್ಕ್ ಡಿವೋಶನ್ ಬರದಿದ್ದರೆ ನಾವು ಏನೂ ಸಾಧನೆ ಮಾಡುವುದಕ್ಕೆ ಆಗುವುದಿಲ್ಲ. ಪಾಪದ ಮಕ್ಕಳನ್ನು ತಂದು ನಾವು ಜೀವಂತವಾಗಿ ಅವರನ್ನು ಕೊಲೆ ಮಾಡಿದ ಹಾಗೆ ಆಗುತ್ತದೆ. ಊಟದ ವ್ಯವಸ್ಥೆ ಸರಿಯಾಗಿ ಮಾಡದೆ ಅಲ್ಲಿ ಮಕ್ಕಳಿಗೆ ಕಲ್ಲು ಮತ್ತು ರಾಗಿ ಹಿಟ್ಟನ್ನು ಒಟ್ಟಿಗೆ ಬೆರೆಸಿ ಮುದ್ದೆ ಮಾಡಿ ಕೊಟ್ಟರೆ ಅವರು ತಿನ್ನಲಿಕ್ಕೆ ಸಾಧ್ಯವೇ? ನಾನು

ಇದನ್ನು ಜಿಲ್ಲಾ ಪರಿಷತ್ತಿನ ಮೀಟಿಂಗ್‌ನಲ್ಲಿ ಬಹಿರಂಗವಾಗಿ ಪ್ರತಿಭಟಿಸಿ ಈ ತರಹದ ಊಟ ಕೊಟ್ಟು ಮಕ್ಕಳನ್ನು ಏಕೆ ಕೊಲೆ ಮಾಡುತ್ತಿದ್ದೀರಿ ನೀವು ಕೊಡುವ ಆಹಾರ ನಿಜವಾಗಲೂ ಆ ಮಕ್ಕಳ ಆರೋಗ್ಯಕ್ಕೆ ಒಳ್ಳೆಯದೇ ಎಂದು ಗಲಾಟೆ ಮಾಡಿದೆ.

೫-೦೦ ಪಿ. ಎಂ.

ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಇಲ್ಲದೆ ಒಂದು ವರ್ಷವಾಗಿದೆ, ನಾವು ಹೇಗೆ ಈ ಹಾಸ್ಟೆಲ್‌ಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವೆಂದು ಜಿಲ್ಲಾಪರಿಷತ್ತಿನ ಅಧ್ಯಕ್ಷರು ಮತ್ತು ಸದಸ್ಯರು ಕೇಳಿದರು. ನಾನು ಆ ಮಾತನ್ನು ಸಂಬಂಧಪಟ್ಟ ಮಂತ್ರಿಯವರಿಗೂ ಹೇಳಿದ್ದೇನೆ. ಹೀಗೆ ಸಮಾಜ ಕಲ್ಯಾಣ ಇಲಾಖೆ ಕೇವಲ ಹರಿಜನರಿಗೋಸ್ಕರ ಇದೆ. ಹರಿಜನ ಗಿರಿಜನರ ಮಕ್ಕಳಿಗೆ ವಿದ್ಯಾಭ್ಯಾಸ ಕೊಟ್ಟು ಉದ್ಧಾರ ಮಾಡುತ್ತೇವೆಂದು ಹೇಳಿ ಅವರಿಗೆ ಸರಿಯಾಗಿ ನಡೆಸಿಕೊಡದೇ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಹಾಸ್ಟೆಲ್‌ಗಳನ್ನು ನಡೆಸುವುದಕ್ಕೆ ತೊಂದರೆ ಮಾಡಿರುವವರು ಯಾರಿದ್ದಾರೋ ಅವರುಗಳ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಹಾಸ್ಟೆಲ್‌ಗಳನ್ನು ಕೊಟ್ಟು ಹಾಸ್ಟೆಲ್‌ನಲ್ಲಿರುವ ಮಕ್ಕಳಿಗೆ ಯಾವುದೇ ರೀತಿಯ ಅನುಕೂಲ ಒದಗಿಸದೇ ಇದ್ದರೆ ಹಾಸ್ಟೆಲ್‌ಗಳು ಇದ್ದರೂ ಏನೂ ಪ್ರಯೋಜನವಾಗುವುದಿಲ್ಲ. ದಲಿತ ಸಂಘರ್ಷ ಸಮಿತಿಯವರು ಸರ್ಕಾರಕ್ಕೆ ಸಲಹೆ ಮಾಡಿರುವ ರೀತಿಯಲ್ಲಿ ಇನ್ನು ಮುಂದೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಕನಿಷ್ಟಪಕ್ಷ ಒಂದೊಂದಾದರೂ ರೆಸಿಡೆನ್‌ಷಿಯಲ್ ಹಾಸ್ಟೆಲ್‌ನ್ನು ಸರ್ಕಾರ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಸೈನಿಕ ಶಾಲೆಯ ಮಾದರಿಯಲ್ಲಿ ಹಿಂದುಳಿದ ವರ್ಗದ ಮಕ್ಕಳಿಗೆ ಏಕೆ ಸೌಲಭ್ಯಗಳನ್ನು ಕಲ್ಪಿಸಿ ಕೊಡಬಾರದೆಂದು ನನ್ನ ಸಲಹೆ. ಸೈನಿಕ ಶಾಲೆಗಳಲ್ಲಿ ಎಲ್ಲಾ ರೀತಿಯ ಸೌಲಭ್ಯಗಳು ಮಕ್ಕಳಿಗೆ ಇರುತ್ತದೆ. ಉತ್ತಮ ಕೊಠಡಿಗಳು, ಊಟ, ಬಟ್ಟೆ, ಪುಸ್ತಕಗಳನ್ನು ಕೊಡಲಾಗುತ್ತದೆ. ಆದರೆ, ಈಗ ನಮ್ಮ ರಾಜ್ಯದಲ್ಲಿ ಅನೇಕ ಕಡೆ ಹಾಸ್ಟೆಲ್‌ಗಳು ಇವೆ. ಈ ಹಾಸ್ಟೆಲ್‌ಗಳಿಗೆ ಸರಿಯಾದ ಕಟ್ಟಡಗಳು ಇರುವುದಿಲ್ಲ. ಆ ಹಾಸ್ಟೆಲ್‌ನಲ್ಲಿರುವ ಮಕ್ಕಳಿಗೆ ಸರಿಯಾದ ಊಟ, ಸರಿಯಾದ ಬಟ್ಟೆ, ಬೇಕಾದ ಪುಸ್ತಕಗಳು ಸಿಕ್ಕುವುದಿಲ್ಲ, ಈ ರೀತಿಯ ಅವ್ಯವಸ್ಥೆಯ ಹಾಸ್ಟೆಲ್‌ಗಳನ್ನು ನಡೆಸುವುದರಿಂದ ಯಾವ ಒಂದು ಸಾಧನೆಯನ್ನೂ ಮಾಡಿದ ಹಾಗೆ ಆಗುವುದಿಲ್ಲ. ಸೈನಿಕ ಶಾಲೆಯಲ್ಲಿ ರೆಸಿಡೆನ್‌ಷಿಯಲ್ ಟೈಪ್ ಹಾಸ್ಟೆಲ್ ಏನಿದೆ, ಆ ತರಹ ಜಿಲ್ಲೆಗೆ ಒಂದೊಂದು ಕೊಟ್ಟರೆ ಭಾರಿ ಒಳ್ಳೆಯ ಕೆಲಸ ಮಾಡಿದ ಹಾಗೆ ಆಗುತ್ತದೆ. ಇನ್ನು ಮುಂದೆ ಹರಿಜನ ಮತ್ತು ಗಿರಿಜನ ಮಕ್ಕಳಲ್ಲಿ ಯಾರು ಕಾಲೇಜು ಮಟ್ಟದಲ್ಲಿ ರ‍್ಯಾಂಕುಗಳನ್ನು ಪಡೆಯುತ್ತಾರೋ ಅಂಥವರುಗಳಿಗೆ ನೇರವಾಗಿ ಉದ್ಯೋಗ ಕೊಡುತ್ತೇವೆಂದು ನಮ್ಮ ಸರ್ಕಾರ ಹೇಳಿದೆ. ಹರಿಜನ ಮತ್ತು ಗಿರಿಜನರ ಮಕ್ಕಳು ಬೇರೆ ಜನಾಂಗದವರ ಮಕ್ಕಳೊಡನೆ ಕಾಂಪೀಟ್ ಮಾಡಿ ರ‍್ಯಾಂಕುಗಳನ್ನು ಪಡೆಯುವುದು ಕಷ್ಟವಾಗುತ್ತದೆ. ಆದುದರಿಂದ, ಯಾರು ಫಸ್ಟ್ ಕ್ಲಾಸ್ ಬರುತ್ತಾರೋ ಅಂಥವರುಗಳಿಗೆಲ್ಲಾ ನೇರವಾಗಿ ಸರ್ಕಾರದಲ್ಲಿ ಉದ್ಯೋಗವನ್ನು ಒದಗಿಸುವುದು ಉತ್ತಮ ಎಂದು ನನ್ನ ಸಲಹೆ. ಆ ಮೇಲೆ ಯಾರು ಸರ್ಕಾರಿ ಭೂಮಿಗಳನ್ನು ಒತ್ತುವರಿ ಮಾಡಿರುತ್ತಾರೋ ಅಂಥವರುಗಳಿಗೆ ಒತ್ತುವರಿ ಮಾಡಿದ ಭೂಮಿಯನ್ನು ಸಕ್ರಮಗೊಳಿಸುತ್ತೇವೆಂದು ಹೇಳಿರುವುದು ಮೆಚ್ಚುವಂಥಾದ್ದು. ನನ್ನ ಜಿಲ್ಲೆಯಲ್ಲಿ ನೂರಾರು ಎಕರೆ ಜಮೀನುಗಳನ್ನು ಶ್ರೀಮಂತರುಗಳೇ ಒತ್ತುವರಿ ಮಾಡಿಕೊಂಡಿದ್ದಾರೆ. ಒಂದು ರೀತಿ ಒತ್ತುವರಿಯನ್ನು ಸಕ್ರಮಗೊಳಿಸುವುದು ಉತ್ತಮ ಎನಿಸಿದರೂ ಸಹ ಎಲ್ಲಿ ಬಡ ಜನರಿಗೆ ಅನ್ಯಾಯವಾಗುತ್ತದೊ ಎನ್ನುವ ಹೆದರಿಕೆ ನನಗಿದೆ. ಲ್ಯಾಂಡ್ ಗ್ರ್ಯಾಂಟ್ ನಿಯಮದ ಪ್ರಕಾರ ೬೦ ಪರ್‌ಸೆಂಟ್ ಭೂಮಿ ಹರಿಜನರಿಗೆ ಏನು ಸಿಗಬೇಕಾಗಿತ್ತೋ ಅದು ಸಿಕ್ಕಿಲ್ಲ. ಇದಕ್ಕೆ ನನ್ನ ಸಲಹೆ ಏನೆಂದರೆ ಯಾರು ಹೆಚ್ಚು ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುತ್ತಾರೋ ಅಂಥವರುಗಳಿಂದ ಭೂಮಿಯನ್ನು ಕಿತ್ತು ಭೂಮಿ ಇಲ್ಲದ ಹರಿಜನ ಮತ್ತು ಗಿರಿಜನರುಗಳಿಗೆ ಹಂಚಬೇಕು, ಈ ರೀತಿ ಮಾಡಿದರೆ ಸರ್ಕಾರಕ್ಕೆ ಒಂದು ಒಳ್ಳೆಯ ಹೆಸರು ಬರುತ್ತದೆ ಹಾಗೂ ಉತ್ತಮ ಸಾಧನೆಯನ್ನು ಸರ್ಕಾರ ಮಾಡಿದ ಹಾಗೆ ಆಗುತ್ತದೆ. ಒತ್ತುವರಿ ಮಾಡಿದ ಭೂಮಿಯನ್ನು ಸಕ್ರಮಗೊಳಿಸುವ ಬಗ್ಗೆ ನಿಯಮಗಳನ್ನು ಮಾಡುವುದಕ್ಕಾಗಿ ಮಾನ್ಯ ದೇವರಾಜ ಅರಸುರವರ ಕಾಲದಲ್ಲಿ ಒಂದು ಎನ್‌ಕ್ರೋಚ್‌ಮೆಂಟ್ ರೆಗ್ಯುಲರೈಸೇಷನ್ ಕಮಿಟಿಯನ್ನು ಮಾಡಲಾಗಿತ್ತು. ಆ ಕಮಿಟಿಯಲ್ಲಿ ನಾನೂ ಸಹ ಸದಸ್ಯನಾಗಿದ್ದೆ. ಆ ಕಮಿಟಿಯು ಒಂದೆರಡು ಸಾರಿ ಮಾತ್ರ ಸಭೆ ಸೇರಿತ್ತು. ಆ ಕಮಿಟಿಯಲ್ಲೂ ಸಹ ಹರಿಜನರು ಮತ್ತು ಗಿರಿಜನರು ಒತ್ತುವರಿ ಮಾಡಿರುವಂಥ ಭೂಮಿಯನ್ನು ಸಕ್ರಮಗೊಳಿಸಬೇಕೆಂದು ಹೇಳಿತ್ತು. ಆದರೆ, ಅದನ್ನು ಇದುವರೆಗೂ ಜಾರಿಗೊಳಿಸುವುದಕ್ಕಾಗಲಿಲ್ಲ. ಎಷ್ಟು ಎಕರೆ ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆಂದು ಸರ್ವೆ ಮಾಡಿ ಅದರ ಆಧಾರದ ಮೇಲೆ ಫೈನ್ ಹಾಕಿ ಸಕ್ರಮಗೊಳಿಸಬೇಕು. ಹಾಗೂ ಹರಿಜನರು ಮತ್ತು ಗಿರಿಜನರು ಮಾಡಿರುವ ಎನ್‌ಕ್ರೋಚ್‌ಮೆಂಟ್‌ನ್ನು

ಫ್ರೀಯಾಗಿ ಸಕ್ರಮಗೊಳಿಸುವುದು ಉತ್ತಮವೆಂದು ನನ್ನ ಸಲಹೆ. ಆ ಮೇಲೆ ಗ್ರಾಮೀಣ ಮಟ್ಟದಲ್ಲಿ ಶೈಕ್ಷಣಿಕ ಪ್ರಗತಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿದೆ. ಹಳ್ಳಿಗಾಡು ಪ್ರದೇಶಗಳಲ್ಲಿರುವ ಹರಿಜನ ಮತ್ತು ಗಿರಿಜನರ ಬಡವರ ಮಕ್ಕಳು ಹೆಚ್ಚು ಓದಬೇಕೆಂದು ಸರ್ಕಾರ ಫ್ರೀ ಪುಸ್ತಕ, ಬಟ್ಟೆ, ಊಟ ಕೊಟ್ಟರೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಶಾಲೆಗೆ ಬರುತ್ತಿಲ್ಲ, ಬಂದರೂ ಮಧ್ಯದಲ್ಲೇ ಡ್ರಾಪ್ ಔಟ್ ಆಗುತ್ತಿದ್ದಾರೆ. ಈ ರೀತಿ ಆಗುವುದಕ್ಕೆ ಏನು ಕಾರಣವೆಂದು ಯಾರೂ ಯೋಚನೆ ಮಾಡುತ್ತಿಲ್ಲ. ಇನ್ನು ಮುಂದೆ ಹರಿಜನರ ಮತ್ತು ಗಿರಿಜನರ ಮಕ್ಕಳು ಹಾಗೂ ಹಿಂದುಳಿದ ವರ್ಗದವರ ಮಕ್ಕಳುಗಳು ಕಂಪಲ್ಸರಿಯಾಗಿ ಓದಲಿಕ್ಕೆ ವ್ಯವಸ್ಥೆ ಮಾಡಬೇಕಾಗುತ್ತದೆ. ಅವರ ತಂದೆ ತಾಯಿಗಳಿಗೆ ಕಾನೂನು ರೀತಿಯಲ್ಲಿ ಶಿಕ್ಷೆ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಅವರ ಮನ ಒಲಿಸಿ ಪ್ರತಿಯೊಂದು ಮಗುವೂ ಕನಿಷ್ಟ ಇಂತಿಷ್ಟು ವರ್ಷ ಓದಲೇಬೇಕು, ಎಸ್.ಎಸ್.ಎಲ್.ಸಿ. ತನಕ ಓದಲೇಬೇಕೆಂಬ ಕಡ್ಡಾಯ ನಿಯಮವನ್ನು ಜಾರಿಗೆ ತಂದು ನಿಮ್ಮ ಮಕ್ಕಳು ಓದದಿದ್ದರೆ ಅವರಿಗೆ ಕೊಡುವ ಸವಲತ್ತುಗಳನ್ನು ನಿಲ್ಲಿಸುತ್ತೇವೆ ಎಂದು ಹೇಳಿದರೆ ಆಗಲಾದರೂ ಅವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿಕೊಡುವ ಪ್ರಯತ್ನ ಮಾಡುತ್ತಾರೆಂದು ನನ್ನ ಅನಿಸಿಕೆ.

ಇವೊತ್ತು ಶಿಕ್ಷಕರ ಹುದ್ದೆಗಳು ಖಾಲಿ ಇದ್ದು ಅವುಗಳನ್ನು ತುಂಬಲು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಹೀಗೆ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವಾಗ ಕೆಲವರು ಟಿ.ಸಿ.ಹೆಚ್. ಮಾಡಿ ಏಜ್ ಬಾರ್ ಆಗಿ ಕಾಯುತ್ತಿದ್ದಾರೆ. ಅವರನ್ನು ತೆಗೆದುಕೊಳ್ಳಲು ಕ್ರಮ ತೆಗೆದುಕೊಳ್ಳಬೇಕು. ಈಗ ಒಂದು ವೇಳೆ ಮಾರ್ಕ್ಸ್ ಮೆರಿಟ್ ಆಧಾರದ ಮೇಲೆ ಅವರನ್ನು ತೆಗೆದುಕೊಳ್ಳುವುದಾದಲ್ಲಿ ವಯೋಮಿತಿಯನ್ನು ದಾಟಿದವರಿಗೆ ತೊಂದರೆಯಾಗಬಹುದು. ಹಾಗೆಯೇ ಇತರರೊಂದಿಗೆ ಅವರು ಕಾಂಪಿಟ್ ಮಾಡುವುದು ಕೂಡ ಕಷ್ಟ ಆಗಬಹುದು. ಅಷ್ಟೆ ಅಲ್ಲದೆ ಅವರು ಏಜ್‌ಬಾರ್ ಆಗಿರುವುದರಿಂದಾಗಿ ಅವರಿಗೆ ಬೇರೆ ಕೆಲಸಗಳಿಗೂ ಹೋಗಲು ಸಾಧ್ಯವಾಗುವುದಿಲ್ಲ. ಆದುದರಿಂದ ಅಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡುವಾಗ ಮಾರ್ಕ್ಸ್ ಮೆರಿಟ್ ಜೊತೆಗೆ ಏಜ್‌ನ್ನೂ ಕೂಡ ಪರಿಗಣಿಸಿ ಅವರನ್ನು ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಂಡು, ಈ ತನಕವೂ ಉದ್ಯೋಗದ ನಿರೀಕ್ಷೆಯಲ್ಲಿದ್ದ ನಿರುದ್ಯೋಗಿಗಳಿಗೆ ಹೆಚ್ಚಿನ ಒಂದು ಸಹಾಯವನ್ನು ಮಾಡಿ ಉಪಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ನನ್ನ ಸಲಹೆಯನ್ನು ಸರಕಾರದವರು ಗಮನಕ್ಕೆ ತೆಗೆದುಕೊಳ್ಳುತ್ತಾರೆ ಎಂದು ನಂಬಿದ್ದೇನೆ.

ಇನ್ನು ಸುಮಾರು ೨೭ ನಗರ ಹಾಗೂ ಪಟ್ಟಣಗಳಿಗೆ ಕುಡಿಯುವ ನೀರಿನ ಪೂರೈಕೆ ಮಾಡಿದ್ದೇವೆ ಎಂದು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿಯೂ ಇವೊತ್ತಿನ ದಿವಸ ಕುಡಿಯುವ ನೀರಿನ ಪೂರೈಕೆಯ ಸಮಸ್ಯೆಯು ಗಂಭೀರವಾಗಿದೆ. ಅದರಲ್ಲಿಯೂ ಮಲೆನಾಡಿನಲ್ಲಿ ನೀವು ಹೇಳಿದ ಎನ್‌ಆರ್‌ಡಬ್ಲ್ಯೂಎಸ್‌ಗೆ ಏನು ೭೫೦ ಜನಸಂಖ್ಯೆಯನ್ನು ನಿಗದಿ ಮಾಡಿದ್ದೀರಿ ಅದು ಸಿಗುವುದಿಲ್ಲ. ಅದೇ ರೀತಿಯಲ್ಲಿ ಎಡಬ್ಲ್ಯೂಎಸ್‌ಗೆ ಒಂದು ಸಾವಿರ ಜನಸಂಖ್ಯೆ ಏನು ಬೇಕು ಅದು ಕೂಡ ಸಿಗುವುದಿಲ್ಲ. ನಮ್ಮ ಗುಡ್ಡಗಾಡು ಪ್ರದೇಶದಲ್ಲಿ ಒಂದೊಂದು ಹಳ್ಳಿಯಲ್ಲಿ ೧೦೦–೨೦೦ ಜನರು ವಾಸಿಸುತ್ತಾರೆ. ಅಂತಹ ಕಡೆಗಳಿಗೆ ಎನ್.ಆರ್ ಡಬ್ಲ್ಯೂ ಮತ್ತು ಎ.ಆರ್.ಡಬ್ಲ್ಯೂ. ಎಸ್.ನ್ನೂ ಕೊಡುವುದಕ್ಕೆ ಆಗಿಲ್ಲ. ನಮ್ಮಲ್ಲಿ ಬೋರ್‌ವೆಲ್‌ಗಳು, ಓಪನ್‌ವೆಲ್‌ಗಳು ಡ್ರೈ ಅಪ್ ಆಗುತ್ತವೆ. ಆದುದರಿಂದ ಅಂತಹ ಕಡೆಗಳಿಗೆ ಜನಸಂಖ್ಯೆಯ ಮಿತಿಯನ್ನು ಕೊಟ್ಟು ನಿಗದಿಪಡಿಸಿದ ಮಿತಿಯನ್ನು ತೆಗೆದು ಹಾಕಿ ೨೦೦–೫೦೦ ಜನಸಂಖ್ಯೆ ಇರುವ ಕಡೆಗಳಿಗೂ ಹೆಚ್ಚು ನೀರು ಒದಗಿಸುವ ಕಾರ್ಯಕ್ರಮವನ್ನು ತೆಗೆದುಕೊಂಡು ಗ್ರಾಮೀಣ ಪ್ರದೇಶದಲ್ಲಿರುವ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯು ಹೆಚ್ಚಿಗೆ ಇರುವುದರಿಂದ ಅಲ್ಲಿಗೆ ಆದ್ಯತೆಯನ್ನು ಕೊಟ್ಟು ಸಮಸ್ಯೆಯನ್ನು ಪರಿಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಜನತಾ ಮನೆಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿಯಾಗಲಿ, ಬಜೆಟ್‌ನಲ್ಲಾಗಲಿ ಏನನ್ನೂ ಹೇಳಲಿಲ್ಲ. ಹಿಂದಿನ ಸರಕಾರದವರು ಇದ್ದಾಗ ಒಂದೊಂದು ಮಂಡಲಕ್ಕೆ ೧೦–೨೦ ಮನೆಗಳನ್ನು ಕಟ್ಟಿಸಿಕೊಟ್ಟಿದ್ದರು. ಆದರೆ ಅದರ ಹಂಚಿಕೆಯು ಸಮರ್ಪಕವಾಗಿ ಆಗಿಲ್ಲ. ಆ ಮನೆಗಳನ್ನು ಮಂಡಲದವರು ತಮ್ಮಲ್ಲಿಯೇ ಹಂಚಿಕೊಂಡರು. ಮತ್ತು ತಮಗೆ ಬೇಕಾದವರಿಗೆ ಮಾತ್ರ ಅದನ್ನು ಹಂಚಿದರು. ಆದುದರಿಂದ ಸಿಗಬೇಕಾದ ಅರ್ಹರಿಗೆ ಅದು ಸಿಗಲಿಲ್ಲ. ಇವೊತ್ತು ನೂರಾರು ಜನರು ತಮಗೆ ಮನೆಗಳು ಬೇಕೆಂದು ಅರ್ಜಿಗಳನ್ನು ಕೊಡುತ್ತಾ ಇದ್ದಾರೆ, ಆದುದರಿಂದ ಈ ಜನತಾ ಮನೆಗಳ ಬಗ್ಗೆ ಬಜೆಟ್‌ನಲ್ಲಿ ಹೆಚ್ಚು ಹಣವನ್ನು ಇಟ್ಟು ಒಂದು ತಾಲ್ಲೂಕಿಗೆ ಒಂದು ಸಾವಿರ ಅಥವಾ ಅದಕ್ಕೂ ಹೆಚ್ಚಿಗೆ ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇದರಿಂದ ಬಡವರಿಗೆ ಉಪಕಾರ ಮಾಡಿದಂತಾಗಿ ನಮ್ಮ ಸರಕಾರಕ್ಕೆ ಒಳ್ಳೆಯ ಹೆಸರು ಕೂಡ ಬರುತ್ತದೆ.

ಇನ್ನು ಕ್ರೀಡೆಗಳ ವಿಚಾರದಲ್ಲಿ ಹೇಳುವುದಾದರೆ, ತಾಲ್ಲೂಕು ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಕ್ರೀಡೆಗಳನ್ನು ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ, ಕ್ರೀಡಾಪಟುಗಳನ್ನು ಬೆಳೆಸಬೇಕೆಂಬ ದೃಷ್ಟಿಯಿಂದ, ಅವರಿಗೆ ಹೆಚ್ಚಿನ ಪ್ರೋತ್ಸಾಹ ಸಿಗುವ ದೃಷ್ಟಿಯಿಂದ ತಾಲ್ಲೂಕು ಮಟ್ಟದಲ್ಲೂ ಸಹ ತರಬೇತಿ ಕೇಂದ್ರಗಳನ್ನು ಮಾಡುತ್ತೇವೆ ಎಂದು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಇದು ಉತ್ತಮವಾದ ಸಲಹೆ. ಅದೇ ರೀತಿಯಲ್ಲಿ ಪ್ರತಿಯೊಂದು ಶಾಲೆಗೂ ಫಿಸಿಕಲ್ ಎಜುಕೇಷನ್ ಟೀಚರ್‌ನ್ನು ನೇಮಕ ಮಾಡಿದರೆ ನಮ್ಮ ತಾಲ್ಲೂಕು ಮಟ್ಟದಲ್ಲಿಯೂ ಉತ್ತಮವಾದ ಕ್ರೀಡಾಪಟುಗಳು ಹೊರಬರುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಅವರಿಗೆ ಸೂಕ್ತ ತರಬೇತಿ ಸಿಗುವಂಥ ಒಂದು ಕಾರ್ಯಕ್ರಮವನ್ನು ಜಾರಿಗೆ ತಂದು ಅವರಿಗೂ ಸಮವಕಾಶವನ್ನು ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇಷ್ಟನ್ನು ಹೇಳಿ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).— ಸನ್ಮಾನ್ಯ ಅಧ್ಯಕ್ಷರೇ. ಈ ಮಹಾ ಸಭೆಯಲ್ಲಿ ರಾಜ್ಯಪಾಲರು ಮಾಡಿದಂತಹ ಭಾಷಣಕ್ಕೆ ವಂದನೆ ಸಲ್ಲಿಸುತ್ತಾ, ಅವರು ಮೊದಲಿಗೆ ಗಡಿ ವಿವಾದದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಗಡಿ ವಿವಾದ ಮುಗಿದ ವಿಚಾರವೆಂದು ಮಾನ್ಯ ರಾಜ್ಯಪಾಲರು ಪ್ರಸ್ತಾಪಿಸಿದ್ದಾರೆ. ಅದು ದೃಢವಾದ ನಿಲುವೆಂದು ನಾನು ತಿಳಿದಿದ್ದೇನೆ. ಮಹಾರಾಷ್ಟ್ರದವರು ಪದೇ ಪದೇ ಮಹಾಜನ್ ವರದಿ ಬಗ್ಗೆ ತಪ್ಪು ತಿಳಿವಳಿಕೆ ಕೊಡುತ್ತಾ ಚರ್ಚೆಯನ್ನು ಮಾಡುತ್ತಿದ್ದಾರೆ. ಆ ದಿಸೆಯಲ್ಲಿ ನಮ್ಮ ರಾಜ್ಯಪಾಲರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಅದು ಮುಗಿದ ವಿಚಾರ ವೆಂದು ದೃಢ ನಿಲುವು ತಾಳಿರುವುದು ನನಗೆ ವೈಯಕ್ತಿಕವಾಗಿ ಸಂತೋಷ ತಂದಿದೆ. ಯಾವುದೇ ಮುಖ್ಯಮಂತ್ರಿ ಕೂಡ ಈ ರೀತಿ ದೃಢವಾಗಿ ಮಾತನಾಡಿರಲಿಲ್ಲ, ಅದಕ್ಕಾಗಿ ಅದನ್ನು ನಾನು ಸ್ವಾಗತ ಮಾಡುತ್ತೇನೆ.

ಎರಡನೆಯದು ರಾಜ್ಯದ ಆಡಳಿತದ ಬಗ್ಗೆ ಪ್ರಸ್ತಾಪಿಸಿದ್ದಾರೆ. ನಿಜಕ್ಕೂ ಇದನ್ನು ವಿಚಾರ ಮಾಡತಕ್ಕ ಅವಶ್ಯಕತೆ ಇದೆ. ಇವತ್ತಿನ ದಿವಸ ಕರ್ನಾಟಕ ರಾಜ್ಯದ ೧೧೪೦ ಕೋಟಿ ರೂಪಾಯಿಗಳ ವ್ಯವಹಾರದಲ್ಲಿ ಸುಮಾರು ೩೦೦ ಕೋಟಿ ರೂಪಾಯಿಗಳಷ್ಟು ಸೋರಿ ಹೋಗುತ್ತಿದೆ. ಇದನ್ನು ತಡೆಯಬೇಕಾದರೆ ರಾಜ್ಯದ ಆಡಳಿತ ಮಾಡುವ ಸರ್ಕಾರದ ಎಲ್ಲ ಪ್ರಜಾ ಪ್ರತಿನಿಧಿಗಳೂ ಪ್ರಾಮಾಣಿಕ ವಾಗಿ ಮೊದಲು ಸೇವೆಯನ್ನು ಸಲ್ಲಿಸಬೇಕು, ಕರ್ತವ್ಯ ಮಾಡಬೇಕು. ಈ ದಿಸೆಯಲ್ಲಿ ಕಾರ್ಯ ಪ್ರಾರಂಭ ವಾದರೆ ಅನಂತರ ಅಧಿಕಾರಿಗಳೂ ಕೂಡ ದಕ್ಷತೆ ಪ್ರಾಮಾಣಿಕತೆ ಹೆಚ್ಚಿಸಿಕೊಳ್ಳುತ್ತಾರೆ. ಸರ್ಕಾರ ನಡೆಸುವವರು ನಾವಾದರೂ ಎಲ್ಲ ಸರ್ಕಾರಗಳೂ ಕೆಲಸ ಮಾಡುವುದು ಒಂದೇ ರೀತಿಯಲ್ಲಿ ನಡೆಸಬೇಕು ಅದೇ ರೀತಿಯಲ್ಲಿ ಅಧಿಕಾರಿಗಳೂ ನಡೆಯುತ್ತಾರೆ ಆದ್ದರಿಂದ ನಾವು ಮೊದಲು ಸರ್ಕಾರ ಚೆನ್ನಾಗಿ ನಡೆಸ ಬೇಕು. ಜನತೆಯ ಕಲ್ಯಾಣದ ದೃಷ್ಟಿಯನ್ನು ಇಟ್ಟುಕೊಳ್ಳಬೇಕಾಗಿದೆ. ಸ್ವೇಚ್ಛೆಯಾಗಿ ಸೋರಿಕೆ ಯಾಗುವ ಇಲಾಖೆಗಳಿಗೆ ಸಹಕಾರ ಕೊಡುವುದನ್ನು ಮಾಡಬಾರದು. ಅಧಿಕಾರಿಗಳಲ್ಲೂ ಒಳ್ಳೆಯ ವರಿದ್ದಾರೆ. ರಾಜಕೀಯವಾಗಿ ಬೆಂಬಲ ಮತ್ತು ಉನ್ನತಾಧಿಕಾರಿಗಳ ಬೆಂಬಲದಿಂದ ಒಳ್ಳೆಯ ಅಧಿಕಾರಿಗಳು ಕೆಲಸ ಮಾಡುವಾಗ ಹತೋಟಿ ತಪ್ಪುತ್ತದೆ. ಅದಕ್ಕಾಗಿ ಮೊದಲು ಪ್ರಜಾಪ್ರಭುತ್ವದ ಸದ್ಗುಣಗಳು ದೊಡ್ಡವರಲ್ಲಿ ಬರಬೇಕು. ಜನಸಂಖ್ಯಾ ಸ್ಫೋಟವಾಗುತ್ತಿರುವ ದೃಷ್ಟಿಯಿಂದ ಏಕ ರೂಪವಾದ ಸರ್ಕಾರವನ್ನು ನಡೆಸಬೇಕು. ಈಗ ಇಷ್ಟರ ಮಟ್ಟಿಗೆ ಅದಕ್ಷತೆ ಉಂಟಾಗಬೇಕಾದರೆ ಹಿಂದಿನ ಜನತಾ ಪಕ್ಷ ತೋರಿದ ಪಕ್ಷಪಾತ ಮತ್ತು ಸ್ವೇಚ್ಛೆಗಳು ಕಾರಣ. ಅವರು ಅದಕ್ಷ ಅಧಿಕಾರಿ ಗಳನ್ನು ಪ್ರೋತ್ಸಾಹಿಸಿದರು, ಬೆಂಗಳೂರು ನಗರದಲ್ಲಿ ವೈನ್‌ಷಾಪ್‌ಗಳನ್ನು ಕೊಟ್ಟರು. ಆಡಳಿತ ಪಕ್ಷದ ಫಂಡ್‌ಗೆಂದು ಹಣ ಕೊಡಬೇಕಾಗಿದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಇವತ್ತು ಒಂದೊಂದು ರಸ್ತೆಗೆ ಹತ್ತು ವೈನ್ ಷಾಪ್‌ಗಳಾಗಿವೆ. ಮುಂದಿನ ೧೦-೧೫ ವರ್ಷಗಳ ಕಾಲ ಯಾರೂ ವೈನ್ ಷಾಪ್‌ಗಳನ್ನು ಕೊಡಬೇಕಾಗಿಲ್ಲ, ಅಷ್ಟನ್ನು ಅವರೇ ಕೊಟ್ಟಿದ್ದಾರೆ. ಇವತ್ತಿನ ದಿವಸ ವೈನ್‌ಷಾಪ್ ಗಳನ್ನು ತೆಗೆದಂಥ ಜನರು ಸರ್ಕಾರಕ್ಕೆ ಯಾವ ರೀತಿ ನಾವು ಹಣವನ್ನು ಕಟ್ಟಬೇಕೆಂಬ ಕಳವಳದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಇವತ್ತು ವೈನ್‌ಷಾಪ್‌ಗಳು ಒಂದು ರೀತಿ ಕಾಫಿ ಕ್ಲಬ್ ತರಹ ಆಗಿದೆ. ತಾವು ಏನೊಂದು ದೃಢವಾದ ನಿಲುವನ್ನು ತೆಗೆದುಕೊಂಡು ಆಡಳಿತ ಯಂತ್ರದಲ್ಲಿ ದಕ್ಷತೆ ಹೆಚ್ಚು ಮಾಡಬೇಕು ಎಂದು ಏನು ಮನಸ್ಸು ಮಾಡಿದ್ದೀರಿ, ಅದಕ್ಕೆಲ್ಲಾ ನಮ್ಮಗಳ ಸಂಪೂರ್ಣ ಬೆಂಬಲ ಇದೆ. ಆಡಳಿತದಲ್ಲಿ ದಕ್ಷತೆಯನ್ನು ಮಾಡಿದರೆ ಮಾತ್ರ ಮುಂದಿನ ಪೀಳಿಗೆಯ ಜನಾಂಗಕ್ಕೂ ಒಂದು ರೀತಿಯ ಒಳ್ಳೆಯ ಕೆಲಸ ಕಾರ್ಯಗಳ ಮಾಡಿದಂತಾಗುತ್ತದೆ. ಇಲ್ಲದಿದ್ದರೆ ಯಥಾ ಪ್ರಕಾರ ಅದಕ್ಷ ಅಧಿಕಾರಿಗಳನ್ನು ಇಟ್ಟುಕೊಂಡು ಅದಕ್ಷತೆಯಿಂದ ಆಡಳಿತವನ್ನು ನಡೆಸಿಕೊಂಡು ಹೋದರೆ ಮುಂದಿನ ಯಾವ ಯೋಜನೆಗಳನ್ನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಮುಂದಿನ ಜನಗಳ ನಡವಳಿಕೆಗಳನ್ನು ಒಂದು

ರೀತಿಗೆ ತರುವುದಕ್ಕೂ ಕಷ್ಟಕರವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಅದಕ್ಷತೆಯನ್ನು ಸರಿ ಮಾಡಬೇಕಾದರೆ ಕೆಲವು ಯೋಜನೆಗಳನ್ನು ಸಮಿತಿಗಳನ್ನು ಮಾಡಬೇಕೆಂದು ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ, ಅದ್ಯಾವುವೂ ಕೂಡಾ ಬೇಕಾಗಿಲ್ಲ. ಇವತ್ತಿನ ದಿವಸ ಪ್ರಜಾ ಪ್ರತಿನಿಧಿಗಳು ಪ್ರಾಮಾಣಿಕವಾಗಿ ಒಂದು ರೀತಿಯಲ್ಲಿ ದಕ್ಷತೆಯಿಂದ ಕರ್ತವ್ಯ ಪಾಲನೆ ಮಾಡಿದರೆ ಅರ್ಧ ಭಾಗ ತಾನೇ ತಾನಾಗಿ ಅಧಿಕಾರಿಗಳು ಒಂದು ನಿಲುವಿಗೆ ಬರುತ್ತಾರೆ ಅದೇ ರೀತಿಯಾಗಿ ಅದಕ್ಷತೆಯಿಂದ ಯಾರು ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ, ಅಂಥ ಅಧಿಕಾರಿಗಳ ಮೇಲೆ ಕಾನೂನು ಕ್ರಮ ತೆಗೆದುಕೊಂಡ ಸಂದರ್ಭದಲ್ಲಿ ರಾಜಕೀಯ ಒತ್ತಡವಾಗಲಿ, ಬೇರೆ ಇನ್ನಾವ ಒತ್ತಡವಾಗಲಿ ತರದೇ ಹೋದರೆ ಒಂದು ವರ್ಷ ಎರಡು ವರ್ಷಗಳಲ್ಲಿ ಈ ರೀತಿಯ ಮೇಲೆ ಭದ್ರತೆ ಬಂದು ಹಣ ಎಲ್ಲಿ ಸೋರಿಹೋಗುತ್ತಿದೆ, ಅದು ಉಳಿಯುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಹಾಗೆಯೇ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ರಿಂದ ೫೫ಕ್ಕೆ ಇಳಿಸಬೇಕು ಎಂದು ಏನು ಹೇಳಿದ್ದೀರಿ, ಅದರ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ನಿರುದ್ಯೋಗಿಗಳು ತುಂಬಾ ಜನ ಇದ್ದಾರೆ. ಅವರ ದೃಷ್ಟಿಯಿಂದ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ರಿಂದ ೫೫ಕ್ಕೆ ಇಳಿಸುವುದು ತುಂಬಾ ಅತ್ಯಾವಶ್ಯಕ ಎಂದು ನನ್ನ ಭಾವನೆ. ಇವತ್ತಿನ ದಿವಸ ಹತ್ತಾರು ವರ್ಷಗಳಿಂದ ಕೂಡಾ ಉತ್ಪಾದನೆ ಮಾಡತಕ್ಕಂಥ ಕಾರ್ಖಾನೆಗಳಾಗಲಿ, ಕೇಂದ್ರ ಸರ್ಕಾರವಾಗಲೀ ಬೇರೆ ಯಾವುದೇ ಆಗಲಿ ಮಾಡಿಲ್ಲ. ಈ ದಿಸೆಯಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಕೂಡಾ ದಿನೇ ದಿನೇ ಹೆಚ್ಚುತ್ತಾ ಹೋಗಿದೆ. ಇವತ್ತು ಅವರುಗಳು ಯಾವುದೇ ಕೆಲಸ ಕಾರ್ಯವಿಲ್ಲದೆ ಮನೆಯಲ್ಲಿ ಕೂರ ಬೇಕಾದಂಥ ಪರಿಸ್ಥಿತಿ ಬಂದಿದೆ. ಈ ದಿಸೆಯಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿ ಕೊಳ್ಳುವುದೇನೆಂದರೆ, ಕೇಂದ್ರ ಸರ್ಕಾರವಾಗಲಿ ಮತ್ತು ದೊಡ್ಡ ಕಾರ್ಖಾನೆಗಳಾಗಲೀ ಈ ರಾಜ್ಯದಲ್ಲಿ ಉತ್ಪಾದನೆ ಮಾಡುವಂಥ ಕಾರ್ಖಾನೆಗಳನ್ನು ತೆರೆದು ಯುವಕರಿಗೆ ಸಹಾಯಕವಾದಂಥ ಕೆಲಸ ಕಾರ್ಯಗಳನ್ನು ಒದಗಿಸಿಕೊಡಬೇಕು. ಆ ದಿಶೆಯತ್ತ ತಾವು ಗಮನಹರಿಸಬೇಕೆಂದು ಹೇಳುತ್ತೇನೆ. ೫೫ನೇ ವಯಸ್ಸಿನಲ್ಲಿ ಏನು ನೌಕರರು ನಿವೃತ್ತಿಯಾಗುತ್ತಾರೆ, ಅವರಿಗೆ ಸ್ವಲ್ಪ ಸಹಾಯವಾಗುವ ಹಾಗೆ ಮಾಡ ಬೇಕು ಅದೇನೆಂದರೆ, ಅವರ ಕುಟುಂಬದಲ್ಲಿ ಯಾರು ಉದ್ಯೋಗಿಗಳಾಗಿಲ್ಲ, ಅಂಥವರು ಬೀದಿಪಾಲು ಆಗದ ಹಾಗೆ ಅವರ ಕುಟುಂಬದಲ್ಲಿ ಒಬ್ಬರಿಗೆ ಉದ್ಯೋಗವನ್ನು ಕೊಡತಕ್ಕಂಥ ನಿಯಮವನ್ನು ಪಾಲನೆ ಮಾಡಬೇಕು. ಈ ರೀತಿ ಮಾಡಿದರೆ ಆ ಕುಟುಂಬದವರು ಬೀದಿ ಪಾಲಾಗದೆ ಸುಖವಾಗಿ ಜೀವನ ಮಾಡಬಹುದು. ಆಗ ಆ ನೌಕರರುಗಳು ಕೂಡಾ ೫೫ನೇ ವರ್ಷಕ್ಕೆ ನಿವೃತ್ತಿಯಾಗುವುದಕ್ಕೆ ಸಂತೋಷ ದಿಂದ ಒಪ್ಪಿಕೊಳ್ಳುತ್ತಾರೆ. ಹಾಗೆ ವಿದ್ಯುತ್ತಿನ ಬಗ್ಗೆ ಮಾನ್ಯ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಕಳೆದ ಆರೇಳು ವರ್ಷಗಳಿಂದ ಕೂಡಾ ವಿದ್ಯುತ್ತಿನ ಉತ್ಪಾದನೆಯ ಬಗ್ಗೆ ಹಿಂದಿನ ಸರ್ಕಾರ ಯೋಜನೆ ಯನ್ನು ಮಾಡಿಲ್ಲ. ಇವತ್ತಿನ ದಿವಸ ಪ್ರತಿ ಹಂತದಲ್ಲೂ ವಿದ್ಯುತ್ತಿನ ಒಂದು ಅವಶ್ಯಕತೆ ಇದೆ. ಅಂದರೆ ಮನೆಯಲ್ಲಿ ಅಡಿಗೆ ಮಾಡುವುದಕ್ಕಾಗಲಿ ರೈತರಿಗಾಗಲೀ, ಕಾರ್ಖಾನೆಗಳಿಗಾಗಲೀ ಎಲ್ಲದಕ್ಕೂ ಅತ್ಯಾವಶ್ಯಕ ವಾಗಿ ವಿದ್ಯುತ್ ಬೇಕೇ ಬೇಕು. ಹಿಂದಿನ ಸರ್ಕಾರದವರು ಈ ಯೋಜನೆಯನ್ನು ತೆಗೆದುಕೊಳ್ಳ ಬೇಕಾಗಿತ್ತು. ಇವತ್ತಿನ ದಿವಸ ಬೆಂಗಳೂರು ನಗರವಾಗಲಿ, ರೈತ ವರ್ಗಗಳಾಗಲೀ, ಕಾರ್ಖಾನೆಯ ವರ್ಗವಾಗಲೀ ಈ ಒಂದು ವಿದ್ಯುತ್ತಿನ ಬಗ್ಗೆ ಚಿಂತನೆಯಾಗಿ ಬಹಳ ವ್ಯಸನ ಪಡುತ್ತಿದ್ದಾರೆ. ಪ್ರತಿ ಹಂತದಲ್ಲೂ ಈ ವಿದ್ಯುತ್ತಿನ ರೀತಿ ನೀತಿಯನ್ನು ನೋಡಿದರೆ ಬಹಳ ಕಷ್ಟಕರವಾಗಿ ಕಾಣುತ್ತದೆ. ಈ ದಿಸೆಯಲ್ಲಿ ನೀರಿನಿಂದ ಉತ್ಪಾದಿಸುವ ವಿದ್ಯುತ್ ಅಲ್ಲದೆ ಥರ್ಮಲ್ ಪ್ಲಾಂಟ್ ಮತ್ತು ಡೀಸಲ್ ಪ್ಲಾಂಟ್ ನಿಂದ ವಿದ್ಯುತ್ ಉತ್ಪಾದನೆ ಮಾಡಿಕೊಳ್ಳುವ ಬಗ್ಗೆಯೂ ಕೂಡಾ ಗಮನವನ್ನು ಕೊಡಬೇಕು. ಇವತ್ತಿನ ದಿವಸ ಜನರು ನೀರಿಗೂ ಬಹಳ ಕಷ್ಟಪಡುತ್ತಿರುವುದನ್ನು ನಾವೆಲ್ಲರೂ ಕಂಡಿದ್ದೇವೆ. ಮಳೆಯ ಪ್ರಮಾಣ ಕಡಿಮೆ ಇರುವುದರಿಂದಲೂ ಕೂಡಾ ಜಲ ವಿದ್ಯುತ್ತಿಗೆ ಒಂದು ರೀತಿಯ ತೊಂದರೆಯೇ ಆಗಿದೆ ಎಂದು ಹೇಳಿದರೆ ತಪ್ಪಿಲ್ಲ.

ಈ ದಿಸೆಯಲ್ಲಿ ಬೇರೆ ರೀತಿಯಿಂದ ವಿದ್ಯುತ್ ಉತ್ಪಾದನೆ ಮಾಡುವ ಕಡೆ ಗಮನ ಹರಿಸಬೇಕು. ವಿದ್ಯುತ್ ಒಂದು ಸ್ಟೇಜಿನಿಂದ ಮತ್ತೊಂದು ಸ್ಟೇಜಿಗೆ ಹೋಗುವಾಗ ವಿದ್ಯುತ್ ಚಾಲನೆಯಲ್ಲಿ ೫೦ ಭಾಗ ವೇಸ್ಟ್ ಆಗುತ್ತದೆ ಎಂದು ಬಹಳ ಜನ ಹೇಳುತ್ತಿದ್ದಾರೆ. ಸಮರ್ಪಕವಾಗಿ ವೈರ್‌ಗಳನ್ನು ಜೋಡಿಸಿ ಈ ಒಂದು ವೇಸ್ಟ್ ಅನ್ನು ತಡೆ ಹಿಡಿದರೆ ವಿದ್ಯುತ್ ಉತ್ಪಾದನೆ ಜಾಸ್ತಿ ಆಗುತ್ತದೆ. ಆಂಧ್ರದಿಂದ ಬರತಕ್ಕ ವಿದ್ಯುತ್ ಬಹಳವಾಗಿ ಲೈನ್‌ನಲ್ಲಿ ಸೋರಿ ಹೋಗುತ್ತಿದೆ. ಈಗಿನ ವಿದ್ಯುತ್ ಸಚಿವರು ಬಹಳ ದಕ್ಷರಾಗಿ ದ್ದಾರೆ. ಇವೊತ್ತಿನ ದಿವಸ ಅವರು ಮನಸ್ಸು ಮಾಡಿದರೆ ೨೦ ಭಾಗ ಅಥವಾ ೩೦ ಭಾಗ ಏನು ವಿದ್ಯುತ್ ಸೋರಿ ಹೋಗುತ್ತಿದೆ ಅದನ್ನು ನಿಲ್ಲಿಸಿದರೆ ಬೆಂಗಳೂರು ನಗರದ ಜನತೆಗೆ, ರೈತರಿಗೆ, ಕಾರ್ಮಿಕರಿಗೆ ಸಹಾಯ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ಸೋರಿ ಹೋಗುವುದನ್ನು ತಕ್ಷಣವೇ ನಿಲ್ಲಿಸುವಂತಹ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿ

ಕೊಳ್ಳುತ್ತೇನೆ. ಹಾಗೆಯೇ ರಾಜ್ಯದಲ್ಲಿ ಕನ್ನಡ ಕಡ್ಡಾಯ ಭಾಷೆಯೆಂದು ಹೇಳುತ್ತಾ ಇದ್ದಾರೆ. ಕನ್ನಡ ಕಡ್ಡಾಯ ಭಾಷೆಯೆಂದು ಕಾನೂನು ಮಾಡಿದರೆ ಸಾಧ್ಯವಾಗುವುದಿಲ್ಲ. ''ಆಂಗ್ಲರ ಕಾಲದಲ್ಲಿ ಕನ್ನಡ'' ಎಂದು ಹಿಂದಿನ ಅಧ್ಯಕ್ಷರಾದ ಮಾನ್ಯ ಬಣಕಾರ್‌ರವರು ಒಂದು ಚಿತ್ರವನ್ನು ಬರೆಸಿ ಅಲ್ಲಲ್ಲೇ ಆಫೀಸುಗಳಲ್ಲಿ ಹಾಕಿಸಿದ್ದಾರೆ ಕನ್ನಡ ಭಾಷೆಯೆಂದು ಕಾನೂನು ಇಲ್ಲವೇ ಕಟ್ಟಳೆಗಳನ್ನು ಮಾಡುವುದು ಸರಿಯಲ್ಲ ನಮ್ಮ ಮನಃ ಪೂರ್ವಕವಾಗಿ ಇದು ಬರಬೇಕು. ಹಿಂದೆ ಇಂಗ್ಲೀಷರ ಕಾಲದಲ್ಲಿ ಕನ್ನಡಮಯವಾಗಿತ್ತು ಆದರೆ ಇವತ್ತಿನ ದಿವಸ ವಿದ್ಯಾವಂತರಾಗಿ, ತಿಳಿವಳಿಕಸ್ಥರಾಗಿ ನಾವು ಕನ್ನಡವನ್ನು ಮರೆತರೆ ಹೆತ್ತ ತಾಯಿಯನ್ನು ಮರೆತಂತೆ ಆಗುತ್ತದೆ. ಕಡ್ಡಾಯವಾಗಿ ಕನ್ನಡವನ್ನು ಆಡಳಿತ ಭಾಷೆ ಎಂದು ತರಬೇಕಾಗಿದೆ. ಸರ್ಕಾರ ನಡೆಸತಕ್ಕ ಮಾನ್ಯ ಮಂತ್ರಿಗಳು ಮೊದಲು ಈ ದಿಸೆಯಲ್ಲಿ ಪ್ರಾರಂಭ ಮಾಡಬೇಕಾಗಿದೆ. ಅವರು ಕನ್ನಡದಲ್ಲಿ ಮಾತನಾಡಬೇಕು, ಟಿಪ್ಪಣಿಗಳನ್ನು ಹೆಚ್ಚು ಹೆಚ್ಚಾಗಿ ಕನ್ನಡದಲ್ಲಿ ಬರೆಯಬೇಕು. ಅವರು ಹೆಚ್ಚು ಹೆಚ್ಚು ಕನ್ನಡದಲ್ಲಿ ವ್ಯವಹಾರ ಮಾಡಿದರೆ ಅದನ್ನು ಮಿಕ್ಕವರು ಅನುಸರಣೆ ಮಾಡಿಕೊಂಡು ಹೋಗುತ್ತಾರೆ. ಯಾವಾಗಲೂ ಮನೆಯಲ್ಲಿ ಹಿರಿಯರು ನೀತಿ ನಿಯಮಗಳನ್ನು ಪಾಲನೆ ಮಾಡಿಕೊಂಡು ಹೋಗುತ್ತಾರೆ, ಅದೇ ಜಾಡನ್ನು ಕಿರಿಯರು ಅನುಸರಣೆ ಮಾಡತಕ್ಕ ಒಂದು ಸಂಪ್ರದಾಯ ಇರುತ್ತದೆ. ಈ ದಿಸೆಯಲ್ಲಿ ಯಾವುದೇ ಸಮಿತಿಯಲ್ಲಿ ಆಗಲಿ ಅಥವಾ ಕಛೇರಿಗಳಲ್ಲಿ ಆಗಲಿ ಸ್ವಯಂ ಪ್ರೇರಣೆಯಿಂದ ನಾವು ಕನ್ನಡದ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡಿದರೆ ಸರಿ ಹೋಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಹಾಗೆಯೇ ಕಾರ್ಖಾನೆಗಳಲ್ಲಿ ಆಗುತ್ತಿರುವ ನಷ್ಟದ ಬಗ್ಗೆ ಮಾನ್ಯ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ, ಇವೊತ್ತು ಯಾವುದೇ ಕಾರ್ಖಾನೆ ಲಾಭದಾಯಕವಾಗಿ ನಡೆಯಬೇಕಾದರೆ ಆಡಳಿತ ಯಂತ್ರ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ, ನಷ್ಟ ಇರುವುದಿಲ್ಲ. ಆಡಳಿತದಲ್ಲಿ ಎಲ್ಲ ಹಂತದಲ್ಲಿ ದಕ್ಷತೆಯನ್ನು ಹೆಚ್ಚು ಮಾಡುವ ಬಗ್ಗೆ ವಿಚಾರ ಮಾಡಬೇಕು, ಕಛೇರಿಗಳಲ್ಲಿ ಅಲ್ಲದೆ ನಮ್ಮ ಸರ್ಕಾರದ ಕಾರ್ಖಾನೆಗಳಲ್ಲಿ. ನಷ್ಟ ಹೆಚ್ಚು ಆಗುತ್ತಿದೆ. ಅದರಿಂದ ಈಗಿನ ಅಧ್ಯಕ್ಷರಾದವರು ಹಿಂದೆ ಕೈಗಾರಿಕಾ ಸಚಿವರಾಗಿದ್ದಾಗ ಹಿಂದೆ ಪಿಂಗಾಣಿ ಕಾರ್ಖಾನೆಯನ್ನು ಹಾಗೂ ರೆಮ್ಕೋ ಕಾರ್ಖಾನೆಯನ್ನು ಬಿ.ಹೆಚ್.ಇ.ಎಲ್.ಗೆ ಕೊಟ್ಟರು. ಈಗ ಕಾರ್ಖಾನೆಗಳು ಪ್ರಾಮಾಣಿಕವಾಗಿ ಕೆಲಸ ಮಾಡಿ ಚೆನ್ನಾಗಿ ಹೆಸರುಗಳಿಸಿರತಕ್ಕ ಕಾರ್ಖಾನೆಗಳಾಗಿವೆ. ಮತ್ತು ಅಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಇವತ್ತು ಸುಖವಾಗಿದ್ದಾರೆ. ಅವೊತ್ತು ಪಿಂಗಾಣಿ ಕಾರ್ಖಾನೆಯನು ಬಿ.ಹೆಚ್.ಇ.ಎಲ್.ಗೆ ಕೊಟ್ಟಾಗ ಕೈಗಾರಿಕಾ ಮಂತ್ರಿಗಳನ್ನು ಎಲ್ಲರೂ ಬಯ್ಯುತ್ತಿದ್ದರು. ಈ ದಿವಸ ಅದು ಒಳ್ಳೆಯ ದಕ್ಷತೆಯಿಂದ ಕೆಲಸ ಮಾಡಿದೆ, ಅದಕ್ಕಾಗಿ ಈಗ ಮಂತ್ರಿಗಳನ್ನು ಹೊಗಳುತ್ತಿದ್ದಾರೆ. ಅವೊತ್ತಿನ ದಿವಸ ಬಿ.ಹೆಚ್.ಇ.ಎಲ್.ಗೆ ಕೊಡುವಾಗ ಇದ್ದ ಸ್ಥಿತಿಗೂ ಇವೊತ್ತು ಆ ಕಾರ್ಖಾನೆ ಇರುವ ಸ್ಥಿತಿಗೂ ಬಹಳ ವ್ಯತ್ಯಾಸ ಇದೆ. ಈ ದಿಸೆಯಲ್ಲಿ ನಾವು ವೈಯಕ್ತಿಕವಾಗಿ ಅವರಿಗೆ ಪ್ರಶಂಸೆ ಮಾಡಬೇಕಾಗಿದೆ ಯಾವುದೇ ನಷ್ಟದ ಕಾರ್ಖಾನೆಯು ಬಿ.ಹೆಚ್.ಇ.ಎಲ್.ಗೆ ಅಂತಹ ಒಳ್ಳೆಯ ಆಡಳಿತ ವರ್ಗಕ್ಕೆ ಕೊಟ್ಟರೆ ಉತ್ತಮವಾಗುತ್ತದೆ. ತುಂಬಾ ನಷ್ಟದ ಕಾರ್ಖಾನೆಗಳನ್ನು ಭಾರತ ಸರ್ಕಾರದ ಉದ್ಯಮವಾದ ಬಿ.ಹೆಚ್.ಇ.ಎಲ್.ಗೆ ಕೊಟ್ಟರೆ ಕಾರ್ಖಾನೆ ಚೆನ್ನಾಗಿ ಇರುತ್ತದೆ ಮತ್ತು ಅದರಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಕೂಡ ಚೆನ್ನಾಗಿರುತ್ತಾರೆ. ರಾಜಾಜಿನಗರ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಅದು ಇಡೀ ಕರ್ನಾಟಕ ರಾಜ್ಯದಲ್ಲಿ ಮೂರನೇ ದೊಡ್ಡ ಕ್ಷೇತ್ರವಾಗಿದೆ. ಇಲ್ಲಿ ದಿನೇ ದಿನೇ ನೀರಿನ ಸಮಸ್ಯೆ, ಒಳಚರಂಡಿ ಸಮಸ್ಯೆ ಹೆಚ್ಚುತ್ತಿದೆ ಮತ್ತು ನಗರಪಾಲಿಕೆಗೆ ಸಂಬಂಧಪಟ್ಟಂಥ ಕೆಲಸಗಳನ್ನು ಏನೂ ಮಾಡುತ್ತಿಲ್ಲ. ಇವೊತ್ತಿನ ದಿವಸ ಹಲವಾರು ಸಮಸ್ಯೆಗಳು ಈ ಪ್ರದೇಶದಲ್ಲಿವೆ. ಇವೊತ್ತಿನ ದಿವಸ ಒಳ ನಾಡಿನ ಬಡಾವಣೆಗಳಲ್ಲಿ ಹೆಚ್ಚು ಕೆಲಸ ಆಗಿಲ್ಲ, ೨½ ವರ್ಷಗಳಲ್ಲಿ ಸುಮಾರು ೧೦ ಕೋಟಿ ರೂಪಾಯಿಗಳ ಲಾಸ್ ಆಗಿದೆ. ಈ ಹಣವನ್ನು ಅಧಿಕಾರಿಗಳು ಕಂಟ್ರ್ಯಾಕ್ಟರುಗಳೆಲ್ಲ ಸೇರಿ ತಿಂದುಹಾಕಿದ್ದಾರೆ. ಲಕ್ಷಾಂತರ ರೂಪಾಯಿ ಲುಕ್ಸಾನು ಮಾಡಿದ್ದಾರೆ. ಇವತ್ತಿನ ದಿವಸ ಕಸ ಎತ್ತಲಿಕ್ಕೆ ಲಾರಿಗಳು ಇಲ್ಲ. ಬೇಕಾದಷ್ಟು ಸಿಬ್ಬಂದಿ ಇದ್ದಾರೆ. ಸುಮಾರು ೧೨-೧೬ ಸಾವಿರ ಜನ ಪೌರ ಕಾರ್ಮಿಕರು ಇದ್ದಾರೆ. ಎಲ್ಲಿ ನೋಡಿದರೂ ಕಸ ತುಂಬಿರುತ್ತದೆ, ಗುಡಿಸುವುದಿಲ್ಲ ಬೆಂಗಳೂರು ಮಹಾ ನಗರಪಾಲಿಕೆಯಲ್ಲಿ ಅದಕ್ಷತೆ ಹೆಚ್ಚಾಗಿದೆ. ರಾಜಾಜಿನಗರ ಕ್ಷೇತ್ರದಲ್ಲಿ ಒಳಚರಂಡಿ ವ್ಯವಸ್ಥೆ ಮಾಡಬೇಕು ಮತ್ತು ನೀರಿನ ಕೊಳವೆಗಳನ್ನು ಹಾಕತಕ್ಕದ್ದಕ್ಕೆ ಕಳೆದ ೪-೫ ವರ್ಷಗಳಲ್ಲಿ ಎಸ್ಟಿಮೇಟ್‌ಗಳನ್ನು ಕಳಿಸಿದ್ದಾರೆ. ಆದರೆ ಬೆಂಗಳೂರು ಮಹಾ ನಗರಪಾಲಿಕೆಯವರು ಇದುವರೆಗೂ ಅದನ್ನು ಪಾಸ್ ಮಾಡಿ ಬಿ ಡಬ್ಲ್ಯು.ಎಸ್.ಎಸ್.ಬಿ. ಗೆ ಕಳಿಸಿಲ್ಲ. ಆದರೆ ಬಿ.ಡಬ್ಲ್ಯು.ಎಸ್.ಎಸ್.ಬಿ. ಕೆಲಸಗಳು ಅಂದರೆ ಅದರ ಕಡೆ ಗಮನ ಕೊಡುವುದಿಲ್ಲ. ಅಲ್ಲಿನ ನಾಗರೀಕರು ೧೦ ವರ್ಷವಾಯಿತು, ೬ ವರ್ಷವಾಯಿತು ಎಸ್ಟಿಮೇಟ್ ಮಾಡಿ, ಇದುವರೆಗೆ ಆಗಲಿಲ್ಲ ಎಂದು ಹೇಳುತ್ತಾರೆ. ಇಷ್ಟು ಬೇಜವಾಬ್ದಾರಿಯಿಂದ ಮಹಾನಗರಪಾಲಿಕೆ ಇದೆ. ಈ ದಿಶೆಯಲ್ಲಿ ತಾವು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಚುರುಕುಗೊಳಿಸಬೇಕು. ಇಲ್ಲದೇಹೋದರೆ ೧೨೫ ಕೋಟಿ ರೂಪಾಯಿ ವರಮಾನದ ಮಹಾನಗರಪಾಲಿಕೆಯಲ್ಲಿ ಇವತ್ತಿನ ದಿವಸ ಕಸ ತೆಗೆಯುವುದಕ್ಕೆ ಲಾರಿಯಿಲ್ಲ

ಅಂದರೆ ನಮಗೆ ಅವಮಾನವಾಗುತ್ತದೆ, ನಾಚಿಕೆಯಾಗುತ್ತದೆ. ಇವತ್ತಿನ ದಿವಸ ಬೆಂಗಳೂರು ಮಹಾ ನಗರದ ನಾಗರೀಕರಿಗೆ ನೀರಿನ ಸಮಸ್ಯೆಯಿದೆ, ಆದ್ದರಿಂದ ಕಾವೇರಿ ಮೂರನೇ ಹಂತವನ್ನು ೧೯೯೧ ನೇ ಜನವರಿಗೆ ಮುಗಿಸಬೇಕು ಎಂದು ಹೇಳಿದ್ದಾರೆ. ನಾವು ಈ ರೀತಿ ಕಡಿಮೆ ಹಣವನ್ನು ಕೊಟ್ಟರೆ ಆ ವೇಳೆಗೆ ಮುಗಿಸುವುದು ಕಷ್ಟವಾಗುತ್ತದೆ. ಬೆಂಗಳೂರಿನ ಮುಂದಿನ ಬೆಳವಣಿಗೆ ದೃಷ್ಟಿಯಿಂದ ಈ ಮೂರನೇ ಹಂತದ ಕಾವೇರಿ ಯೋಜನೆಯನ್ನು ಮುಗಿಸಬೇಕಾಗಿದೆ, ಅದಕ್ಕಾಗಿ ಈಗ ೮ ಕೋಟಿ ರೂಪಾಯಿಗಳನ್ನು ಏನು ಇಟ್ಟಿದ್ದಾರೆ, ಇದು ಏನೇನೂ ಸಾಲದು. ೨೮೦ ಕೋಟಿ ರೂಪಾಯಿಗಳ ಯೋಜನೆಗೆ ಒಂದು ವರ್ಷಕ್ಕೆ ೮ ಕೋಟಿ ೧೦ ಕೋಟಿ ಕೊಟ್ಟರೆ ನಿಗದಿಯಾದ ವೇಳೆಗೆ ನಾವು ಏನು ಕೆಲಸ ಮಾಡುವುದು, ಆ ವೇಳೆಗೆ ಹೇಗೆ ಕೆಲಸ ಮುಗಿಸುವುದು ಎನ್ನುವ ಯೋಚನೆ ಜಲಮಂಡಲಿಯ ಅಧಿಕಾರಿಗಳಲ್ಲಿ ಬಂದಿದೆ. ಈ ದಿಶೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಬೇಡಿಕೊಳ್ಳುವುದು ಏನೆಂದರೆ, ಬೆಂಗಳೂರು ಮಹಾನಗರದ ಹಿತದೃಷ್ಟಿಯಿಂದ ಮತ್ತು ನಗರದ ಜನತೆಯ ಒಳ್ಳೆಯದಕ್ಕೋಸ್ಕರ ಕಾವೇರಿ ಮೂರನೇ ಹಂತದ ಯೋಜನೆ ೧೯೯೧ ರ ಜನವರಿಗೆ ಆಗಬೇಕು. ಆ ವೇಳೆಗೆ ಪೂರ್ಣ ಹಣವನ್ನು ಬಿಡುಗಡೆ ಮಾಡಿ ಆ ಕೆಲಸ ವನ್ನು ಮುಗಿಸಬೇಕು ಅಲ್ಲದೆ. ನಾಲ್ಕನೇ ಯೋಜನೆಯನ್ನೂ ಕೂಡ ತಯಾರುಮಾಡಿ ಈಗಲೇ ಪ್ರಾರಂಭ ಮಾಡಬೇಕು. ಇಲ್ಲದೇಹೋದರೆ ಯದ್ವಾತದ್ವ ಬೆಳೆಯುತ್ತಿರುವಂಥ ಬೆಂಗಳೂರು ಮಹಾನಗರದಲ್ಲಿ ನೀರಿನ ವ್ಯವಸ್ಥೆ ಬಹಳ ಅಧೋಗತಿಯಾಗುತ್ತದೆ. ಇವತ್ತಿನ ದಿವಸ ನೀವು ದವಸಧಾನ್ಯಗಳನ್ನೂ ಸರಿಯಾಗಿ ಕೊಡುವುದಿಲ್ಲ, ನೀರನ್ನೂ ಸಹ ಕೊಡಲಿಲ್ಲ ಅಂದರೆ ನಾವು ಹೇಗೆ ಜೀವನ ಮಾಡಬೇಕು ಎಂದು ಕೇಳು ವಂಥ ಪ್ರಶ್ನೆ ಬೆಂಗಳೂರಿನಲ್ಲಿ ವಾಸಮಾಡತಕ್ಕ ಜನರಲ್ಲಿ ಮೂಡಿದೆ ಆದುದರಿಂದ ನಾವು ಕೇಳಿಕೊಳ್ಳುವುದು ಏನೆಂದರೆ, ಬೆಂಗಳೂರು ಮಹಾನಗರ ಕರ್ನಾಟಕದ ರಾಜಧಾನಿ, ಇದು ಸುಂದರವಾದ ನಗರ ಉದ್ಯಾನ ನಗರ ಎಂದು ಹೆಸರುಗಳಿಸಿದೆ. ಈ ಹೆಸರನ್ನು ಉಳಿಸಿಕೊಳ್ಳಬೇಕಾದರೆ ಜಲಮಂಡಲಿ, ಬಿ.ಡಿ.ಎ. ಮತ್ತು ಬೆಂಗಳೂರು ಮಹಾನಗರಪಾಲಿಕೆಗಳಲ್ಲಿ ದಕ್ಷವಾದ ರೀತಿಯಲ್ಲಿ ಆಡಳಿತವನ್ನು ಮಾಡತಕ್ಕಂಥ ಅಧಿಕಾರಿ ಗಳನ್ನು ಹಾಕಿ ಆ ಕೆಲಸವನ್ನು ತೆಗೆದುಕೊಳ್ಳಬೇಕು ಎಂದು ಹೇಳಿ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಒಂದೆರಡು ಮಾತುಗಳನ್ನು ಆಡಲಿಕ್ಕೆ ಅವಕಾಶಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಕುಶಾಲ (ಸುಳ್ಯ).— ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲೆ ಎರಡು ಮಾತುಗಳನ್ನು ಆಡಲು ಬಯಸುತ್ತೇನೆ. ಮುಖ್ಯವಾಗಿ ಕಂದಾಯ ಇಲಾಖೆ, ಬಡ ಕೃಷಿ ಕಾರ್ಮಿಕರು ಈಗಾಗಲೇ ಅನಧಿಕೃತ ಜಮೀನಿನ ಸ್ವಾಧೀನಾನುಭವ ವನ್ನು ಏನು ಹೊಂದಿದ್ದಾರೆ ಅದನ್ನು ಖಾಯಂಗೊಳಿಸಬೇಕು. ಬಗರ್‌ಹುಕುಂ ಜಮೀನನ್ನು ಅನಧಿಕೃತ ವಾಗಿ ಸಾಗುವಳಿ ಮಾಡುತ್ತಿದ್ದಾರೆ, ರಾಜ್ಯಾದ್ಯಂತ ಸುಮಾರು ೪೦ ವರ್ಷಗಳಿಂದ ಬಡ ರೈತರು ಅನಧಿಕೃತವಾಗಿ ಜಮೀನನ್ನು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ. ಈ ಸಂದರ್ಭದಲ್ಲಿ ಸರ್ಕಾರ ಮೊದಲ ಹಂತವಾಗಿ ಅವರಿಗೆ ಆ ಜಮೀನನ್ನು ಖಾಯಂ ಮಾಡುವಂಥ ಘೋಷಣೆ ಮಾಡಿದ್ದು ನಿಜವಾಗಿಯೂ ಸ್ವಾಗತಾರ್ಹವಾದ ವಿಷಯ. ಬಡ ಜನರಿಗೆ ಈ ರಿಕಾರ್ಡುಗಳನ್ನು ಮಾಡಿಕೊಡುವಾಗ ಹೆಚ್ಚಿನ ನಿಗಾ ವಹಿಸಿಕೊಳ್ಳಬೇಕಾಗುತ್ತದೆ. ಬಹುಶಃ ಈಗಾಗಲೇ ರಾಜ್ಯಾದ್ಯಂತ ಇರುವಂಥ ಬಡ ಜಮೀನುದಾರರಲ್ಲಿ ಹೆಚ್ಚಿನವರು ಹಿಂದುಳಿದವರು ಹಾಗೂ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದವ ರಾಗಿರುತ್ತಾರೆ. ಈ ಅನಧಿಕೃತ ಸಾಗುವಳಿ ಜಮೀನುಗಳ ರಿಕಾರ್ಡುಗಳನ್ನು ಕಂದಾಯ ಇಲಾಖೆಯಿಂದ ಮಾಡಿಸಲಿಕ್ಕೆ ಅನಾನುಕೂಲತೆಯಿಂದಾಗಿ ಸಾಧ್ಯವಾಗದೇ ಇರತಕ್ಕ ಹಲವಾರು ಪ್ರಕರಣಗಳು ಇವೆ. ಹಣದ ಬಲವಿದ್ದವರು, ಹಣವನ್ನು ಕೊಡಲಿಕ್ಕೆ ಸಾಧ್ಯವಿದ್ದಂತಹವರು ಮಾತ್ರ ರಿಕಾರ್ಡುಗಳನ್ನು ಮಾಡಿಸಿಕೊಂಡಿದ್ದಾರೆ. ಹಣದ ದಬ್ಬಾಳಿಕೆಯಿಂದ ಬಡ ಜನರ ರಿಕಾರ್ಡುಗಳನ್ನು ಮಾಡಲಿಕ್ಕೆ ತೊಂದರೆ ಯಾದಂಥ ಪರಿಸ್ಥಿತಿಗಳು ಹಲವಾರು ಇವೆ. ಆದ್ದರಿಂದ ಅಂತಹವರಿಗೆ ಜಮೀನನ್ನು ಖಾಯಂಗೊಳಿಸು ವುದಕ್ಕಾಗಿ ಅವರಿಗೆ ಇನ್ನೊಮ್ಮೆ ಆದೇಶವನ್ನು ಕೊಡಬೇಕು. ಯಾರು ಇಂತಹ ಜಮೀನನು ಸ್ವಾಧೀನಹೊಂದಿ ಅನುಭವದಾರರಿದ್ದಾರೆ, ರಿಕಾರ್ಡುಗಳನ್ನು ಮಾಡಲಿಕ್ಕೆ ಅಸಾಧ್ಯವಾಗಿದೆ ಅಂತಹವರಿಗೆ ಹೆಚ್ಚಿನ ಆದ್ಯತೆ ಕೊಟ್ಟು, ಪುನಃ ಅರ್ಜಿಗಳನ್ನು ಸಲ್ಲಿಸುವಂಥ ಅವಕಾಶವನ್ನು ಮಾಡಿದಾಗ ಮಾತ್ರ ಬಡ ಜನರು 'ರಿಕಾರ್ಡುಗಳನ್ನು ಪಡೆದು ಹೆಚ್ಚಿನ ಪ್ರಯೋಜನ ಹೊಂದಲಿಕ್ಕೆ ಸಾಧ್ಯವಾಗುತ್ತದೆ. ಆಮೇಲೆ ಬಗರ್‌ಹುಕುಂ ಕುಮ್ಕಿ ಜಮೀನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿ ಇದೆ. ಒತ್ತುವರಿ ಜಮೀನು ಎಂದು ಹೇಳುವ ಜಮೀನು ಕುಮ್ಕಿ ಜಮೀನಾಗಿರುತ್ತದೆ. ೧೯೭೨ನೇ ಇಸವಿಯಲ್ಲಿ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಈ ಕುಮ್ಕಿ ಜಮೀನಿನ ಬಗ್ಗೆ ತಡೆ ಇದೆ ಎಂಬ ಸುದ್ದಿ ಕೇಳಿಬರುತ್ತಿದ್ದು ಈ ಕುರಿತು ಇಲಾಖೆ ಅಥವಾ ಸರ್ಕಾರ ಯಾವುದೇ ತೀರ್ಮಾನ ಮಾಡುವ ಬಗ್ಗೆ ಕ್ರಮ ಕೈಗೊಂಡಿರು ವುದಿಲ್ಲ. ಈ ಕುಮ್ಕಿ ಜಮೀನನ್ನು ಒತ್ತುವರಿ ಮಾಡಿದ ಜಮೀನುದಾರರು ಆಗಿನ ಮಾಜಿ ಭೂಮಾಲೀಕರು, ಅದು ತಮಗೆ ಸಂಬಂಧಪಟ್ಟ ಭೂಮಿ ಬೇರೆಯವರಿಗೆ ಹಕ್ಕಿಲ್ಲ ಎಂಬ ದೃಷ್ಟಿಯಿಂದ

ಯನ್ನು ಮಾಡಬೇಕಾದರೆ ಸಾಕಷ್ಟು ದುಡ್ಡು ಖರ್ಚಾಗುತ್ತದೆ. ಇವತ್ತು ಗ್ರಾಮಮಟ್ಟದಲ್ಲಿ ಗ್ರಾಮ ಲೆಕ್ಕಿಗನಿಂದ ಹಿಡಿದು ತಹಸೀಲ್ದಾರ್, ಅಸಿಸ್ಟೆಂಟ್ ಕಮೀಷನರ್ ಮತ್ತು ಜಿಲ್ಲಾಧಿಕಾರಿಗಳ ಕಛೇರಿ ಮಟ್ಟಕ್ಕೆ ಒಬ್ಬ ಬಡ ರೈತ ಓಡಾಡಬೇಕಾಗಿದೆ. ಹಾಗೂ ಸಾವಿರಾರು ರೂಪಾಯಿಗಳನ್ನು ಈ ಕನ್‌ವರ್‌ಷನ್‌ಗಾಗಿ ಖರ್ಚು ಮಾಡಬೇಕಾದ ಪ್ರಸಂಗ ಬಂದಿದೆ. ಅಲ್ಲದೆ ನಕ್ಷೆ ಖಾತೆ ಬದಲಾವಣೆ ಮುಂತಾದವುಗಳನ್ನೆಲ್ಲ ತಯಾರಿಸಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಡಜನತೆ ಕಟ್ಟಡವನ್ನು ಕಟ್ಟುವುದು ಕಷ್ಟವಾಗಿದೆ. ಆದ್ದರಿಂದ ಈ ಒಂದು ಪದ್ಧತಿಯನ್ನು ಸಡಿಲಗೊಳಿಸಿ ಈ ಸಂಬಂಧಪಟ್ಟ ಕಾಯಿದೆಗೆ ಸೂಕ್ತ ತಿದ್ದುಪಡಿಯನ್ನು ಸರ್ಕಾರ ತರಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕನ್‌ವರ್‌ಷನ್ ಪದ್ಧತಿಯು ದ್ವಂದ್ವ ನೀತಿಗೆ ಎಡೆಕೊಡುತ್ತಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಜಮೀನು ಕೃಷಿ ಭೂಮಿಯಾಗಿರುವಾಗ ಪುಂಜ ಜಮೀನು ಕೃಷಿ ಜಮೀನು ಅಲ್ಲವೆಂದು ತಿರಸ್ಕರಿಸುವುದು ಸರಿಯಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಫಾರಂ ನಂ ೭೭ಎ ಆಗಲಿ ಅಥವಾ ಭೂಸುಧಾರಣಾ ನಿಯಮ ೧೭೨ರ ಪ್ರಕಾರ ಆಗಲಿ ಒಕ್ಕಲುತನಕ್ಕೆ ಅರ್ಜಿ ಸಲ್ಲಿಸುವಲ್ಲಿ ಅದಲು ಬದಲಾಗಿ ಎಷ್ಟೋ ಬಡವರಿಗೆ ಅನ್ಯಾಯವಾಗಿದೆ. ಕೆಲವು ಮಾಜಿ ಭೂಮಾಲೀಕನ ಜಮೀನಾದರೂ ಸರ್ಕಾರಿ ಜಮೀನು ಎಂದು ಗ್ರಾಮದ ಪ್ರತಿಷ್ಠಿತ ವ್ಯಕ್ತಿಗಳ ದಬ್ಬಾಳಿಕೆಯಿಂದ ಭೂ ನ್ಯಾಯ ಮಂಡಲಿಗೆ ಅರ್ಜಿ ಸಲ್ಲಿಸುವಲ್ಲಿ ತೊಂದರೆಗೆ ಬಹಳ ಜನ ಒಳಪಟ್ಟಿರುತ್ತಾರೆ. ಇದರಿಂದ ಅವರ ಜಮೀನುಗಳಿಗೆ ಯಾವುದೇ ಒಡೆತನ ಸಿಕ್ಕದೆ ಮಾಜಿ ಭೂಮಾಲೀಕರಿಂದ ಬಹಳ ಅನ್ಯಾಯವಾಗಿದೆ. ಈ ಬಗ್ಗೆ ೭೭ಎ ಫಾರಂನಲ್ಲಿ ಮಾಜಿ ಒಕ್ಕಲಿಗರಿಗೆ ಭೂ ನ್ಯಾಯ ಮಂಡಲಿಗೆ ಅರ್ಜಿ ಸಲ್ಲಿಸಲು ಎರಡನೇ ಅವಕಾಶವಾಗುವಂತೆ ತಿದ್ದುಪಡಿ ತರುವುದು ಅವಶ್ಯಕವಾಗಿದೆ. ಹಾಗೂ ಭೂಸುಧಾರಣಾ ಮೇಲ್ಮನೆ ಪ್ರಾಧಿಕಾರವನ್ನು ಹಿಂದಿನ ಸರ್ಕಾರ ರಚಿಸಿರುವುದರಿಂದ ಮಾಜಿ ಗೇಣಿದಾರರಿಗೆ ಬಹಳಷ್ಟು ಅನ್ಯಾಯವಾಗಿದೆ. ಆದ್ದರಿಂದ ಭೂ ಸುಧಾರಣಾ ಮೇಲ್ಮನೆ ಪ್ರಾಧಿಕಾರಕ್ಕೆ ಸೂಕ್ತ ತಿದ್ದುಪಡಿ ತರುವುದು ಅವಶ್ಯಕವಾಗಿದೆ. ಗೇರು ಕೃಷಿಗಾಗಿ ಅರಣ್ಯ ಇಲಾಖೆಯು ಜಮೀನುಗಳನ್ನು ಕೆಲವು ಕಡೆ ಒತ್ತುವರಿ ಮಾಡಿಕೊಳ್ಳಲಾಗಿದೆ. ಹಾಗೂ ಕೆಲವು ಕಡೆಗಳಲ್ಲಿ ಲೀಸ್‌ಗೆ ನೀಡಿದ ಜಮೀನುಗಳು ಬಹಳಷ್ಟು ಇವೆ. ಇಂತಹ ಜಮೀನುಗಳನ್ನು ಈ ರೀತಿ ಕೃಷಿ ಮಾಡುತ್ತಿರುವ ಬಡವರಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಗೋಮಾಳ ಜಮೀನುಗಳಲ್ಲಿ ಬಡವರು, ಪರಿಶಿಷ್ಟ ಜಾತಿ ಪಂಗಡದವರು, ಒತ್ತುವರಿ ಮಾಡಿಕೊಂಡಿದ್ದಾರೆ. ಈ ಗೋಮಾಳ ಜಮೀನುಗಳನ್ನು ದೊಡ್ಡ ದೊಡ್ಡ ಜಮೀನುದಾರರು ಸ್ವಾಧೀನಪಡಿಸಿಕೊಂಡಿದ್ದಾರೆ. ಈ ಕಡೆ ಕೂಡ ಸರ್ಕಾರ ಹೆಚ್ಚಿನ ಗಮನವನ್ನು ನೀಡಬೇಕು. ಬಡ ಕೃಷಿ ಕಾರ್ಮಿಕನ ಅಕ್ರಮ ಭೂಮಿದಾರರ ಕುಟುಂಬದ ವಾರ್ಷಿಕ ಆದಾಯದ ಮಿತಿ ಈಗ ಕೇವಲ ೧೮೦೦ ರೂಪಾಯಿ ಇದೆ. ಹಿಂದೆ ಭೂಕಂದಾಯ ಅಧಿನಿಯಮ ಸ್ಥಾಪನೆಗೊಂಡಾಗ ಮಾಡಿದಂಥ ಈ ಒಂದು ಆದಾಯದ ಮಿತಿ ಏನಿದೆ ಅದನ್ನು ಈಗ ಬದಲಾವಣೆ ಮಾಡಬೇಕಾಗಿರುವುದು ಅಗತ್ಯವಾಗಿದೆ.

ಇದರಲ್ಲಿ ತಿದ್ದುಪಡಿ ಆದಾಗ ಪ್ರತಿಯೊಬ್ಬ ಬಡವನಿಗೂ ಜಮೀನನ್ನು ಹೊಂದಲಿಕ್ಕೆ ಸಾಧ್ಯ ಇದೆ. ಅವನ ಆದಾಯದ ಮೂಲಗಳನ್ನು ನೋಡಿಕೊಂಡು ಅವನ ಆದಾಯದಲ್ಲಿ ಬದಲಾವಣೆ ಮಾಡಿಕೊಂಡು ಹೋದಾಗ ಮಾತ್ರ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇವೊತ್ತು ಎರಡು ಸಾವಿರ ರೂಪಾಯಿಗಳ ಬದಲು ಕಡೇಪಕ್ಷ ಒಂದು ಕುಟುಂಬದ ವಾರ್ಷಿಕ ಆದಾಯ ೧೨ ಸಾವಿರ ರೂಪಾಯಿಗೆ ಮಿತಿಗೊಳಿಸಿದರೆ ಮಾತ್ರ ಇದರಿಂದ ಪ್ರಯೋಜನ ಆಗಲಿಕ್ಕೆ ಸಾಧ್ಯ ಎಂದು ತಿಳಿಸುತ್ತೇನೆ. ಇನ್ನು ಅದೇರೀತಿ ದಕ್ಷಿಣ ಕನ್ನಡ ಜಿಲ್ಲೆಗೆ ಹಿಂದಿನ ಸರ್ಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂಥ ಕೋಕೋ ಮತ್ತು ರಬ್ಬರ್ ಹಾಗೂ ಕರಿಮೆಣಸಿನ ಬೆಳೆಯನ್ನು ಕಾಡು ಬೆಳೆ ಎಂದು ಪರಿಗಣಿಸಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂಥ ಕೆಲವು ಬಡವರಿಗೆ ತುಂಬಾ ಅನ್ಯಾಯವಾಗಿದೆ. ಅದರಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂಥ ಒಣ ಭೂಮಿ ಏನಿದೆ ಪುಂಜ ಸ್ಥಳಗಳಲ್ಲಿ ಹೆಚ್ಚಿಗೆ ರಬ್ಬರಿನ ಬೆಳೆಯನ್ನು ಬೆಳೆಸಿದಂಥ ಪರಿಸ್ಥಿತಿಯಲ್ಲಿ ಆ ರಬ್ಬರನ್ನು ಅದರಲ್ಲೂ ಕೂಡ ಕರ್ನಾಟಕ ಅರಣ್ಯ ನಿಗಮ ರಬ್ಬರ್ ಬೆಳೆಯನ್ನು ಅರಣ್ಯ ಇಲಾಖೆಯಿಂದ ಸ್ವಾಧೀನಪಡಿಸಿಕೊಂಡು ರಬ್ಬರ್ ನಿಗಮದ ಸಂಸ್ಥೆಯವರು ಈ ರಬ್ಬರ್ ಮಾಡುತ್ತಿರುವಾಗ, ರಬ್ಬರ್ ನಿಗಮದಲ್ಲಿ ಎಷ್ಟು ಸಿಬ್ಬಂದಿಗಳು ಇದ್ದರೂ ಕೂಡ ಎಷ್ಟೋ ರಬ್ಬರ್ ಕಳ್ಳತನ ಆಗುವ ಸಂದರ್ಭದಲ್ಲಿ ಈ ಕಾನೂನು ಜಾರಿಗೆ ತಂದರೆ ಒಂದು ಅಥವಾ ಎರಡು ಹೆಕ್ಟೇರ್ ಜಮೀನಿನಲ್ಲಿ ಬಡ ಕೃಷಿಕ ತನ್ನ ಸ್ವಂತ ರಬ್ಬರ್ ಬೆಳೆಯನ್ನು ಮಾಡಿದಾಗ ಆ ಬೆಳೆಯನ್ನು ಮಾರಾಟಕ್ಕೆ ಕೊಂಡುಹೋಗಬೇಕಾದರೆ ಅರಣ್ಯ ಇಲಾಖೆಯಲ್ಲಿ ಪರ್‌ಮಿಷನ್ ಕೇಳುವಂಥ ಪರಿಸ್ಥಿತಿ ಬಂದಿರುವುದರಿಂದ ಇವೊತ್ತು ಬಡ ರಬ್ಬರ್ ಕಾರ್ಮಿಕ ತೊಂದರೆಗೊಳಗಾದ ಪರಿಸ್ಥಿತಿ ಕೂಡ ಇದೆ. ಇದರ ಬಗ್ಗೆ ಹಿಂದೆ ರಾಜ್ಯಪಾಲರು ಇದನ್ನು ತಡೆಹಿಡಿದ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟಣೆ ಕೊಟ್ಟಿದ್ದರು ಕೂಡ ಅದು ಸಂಪೂರ್ಣ ಜಾರಿಗೆ ಬರಲಿಲ್ಲ. ಅದನ್ನು ಜಾರಿಗೆ ತರುವಂಥ ಕಾರ್ಯಕ್ರಮವನ್ನು ಈ ಸಂದರ್ಭದಲ್ಲಿ ತಿದ್ದುಪಡಿ ಮಾಡುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ತಿಳಿಸುತ್ತೇನೆ. ಇನ್ನು ಭೂಸುಧಾರಣೆ ನಿಯಮ

ಇದ್ದರೂ ಕೂಡ ಅದು ಕುಮ್ಕಿ ಜಮೀನಾಗಿದ್ದರೂ ಕೂಡ ಅವರಿಗೆ ಅಧಿಕಾರವಿಲ್ಲದಂಥ ಪರಿಸ್ಥಿತಿ ಇದೆ. ಇಂತಹ ಜಮೀನುಗಳಲ್ಲಿ ಬಡಜನರು ಸಾಗುವಳಿ ಮಾಡಿಕೊಂಡು ಬಂದರೂ ಅಧಿಕಾರವಿಲ್ಲದಂಥ ಪರಿಸ್ಥಿತಿ ಇದೆ. ಅತಿ ಬಡವ ಅಂದರೆ ಹನ್ನೆರಡೂವರೆ ಸೆಂಟ್ ಕುಮ್ಕಿ ಜಮೀನು ಇದ್ದರೂ ಕೂಡ ಅದನ್ನು ಖಾಯಂಗೊಳಿಸುವಂಥ ಆದೇಶವನ್ನು ಹಲವಾರು ವರ್ಷಗಳ ಹಿಂದೆ ಮಾಡಿದ್ದರೂ ಕೂಡ ಅದು ಇನ್ನೂ ಕಾರ್ಯಗತವಾಗದೆ ಇದೆ. ಬಡವರು, ಕೃಷಿ ಕೂಲಿ ಕಾರ್ಮಿಕರು ೧೦–೨೦ ಸೆಂಟ್ ಒತ್ತುವರಿ ಕುಮ್ಕಿ ಜಮೀನನ್ನು ಅನುಭವಿಸಿಕೊಂಡು ಬಂದಿದ್ದರೂ ಕೂಡ ಅವರಿಗೆ ಅದು ಖಾಯಂ ಆಗಿ ದರಖಾಸ್ತಾಗಿ ಪರಿಣಮಿಸಿಲ್ಲ.

೫.೩೦ ಪಿ. ಎಂ.

ಆದ್ದರಿಂದ ಸರ್ಕಾರದವರು ಇದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು, ಮಂಜೂರು ಮಾಡಬೇಕೆಂದು ಹೇಳುತ್ತೇನೆ. ಒತ್ತುವರಿ ಜಮೀನಿಗೆ ದಂಡನೆ ಅಥವಾ ಟಿ.ಟಿ.ಯನ್ನು ವಿಧಿಸಿದಂಥ ಪ್ರಕರಣಗಳು ಹಲವಾರು ಇವೆ. ಒತ್ತುವರಿ ಜಮೀನು ಮಾಡಿಕೊಂಡಿರುವ ಬಡವರು ಸುಮಾರು ೪೦ ವರ್ಷಗಳಿಂದ ಅನುಭವದಲ್ಲಿರತಕ್ಕವರು ಜಮೀನು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ನಮಗೆ ಜಮೀನು ಸಿಗುತ್ತದೆನ್ನುವ ಆಸೆಯನ್ನು ಇಟ್ಟುಕೊಂಡಿದ್ದಾರೆ. ಆದರೆ, ಇವತ್ತು ಒತ್ತುವರಿ ಮಾಡಿಕೊಂಡಿರುವಂಥ ಕೆಲವು ಜಮೀನುದಾರರು ಕಂದಾಯ ಇಲಾಖೆಯ ವತಿಯಿಂದ ರಿಕಾರ್ಡುಗಳನ್ನು ಮಾಡಿಸಿರುತ್ತಾರೆ, ಹಣವಂತರಾದ ಇವರು ದಂಡನೆ ಟಿ.ಟಿ. ವಗೈರೆಗಳನ್ನು ಕಟ್ಟಿದ್ದಾರೆ. ಬಡವರೂ, ಹಿಂದುಳಿದವರೂ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಮಾಡಿರುವ ಅನಧಿಕೃತ ಸಾಗುವಳಿ ಜಮೀನಿಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಮಾಡಿಸುವುದಕ್ಕೆ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಲಂಚ ಕೊಡುವುದಕ್ಕೆ ಸಾಧ್ಯವಿಲ್ಲದೆ, ರಿಕಾರ್ಡುಗಳನ್ನು ಮಾಡಿಸುವುದಕ್ಕೆ ಸಾಧ್ಯವಾಗಿರುವುದಿಲ್ಲ. ಟಿ.ಟಿ.ಯನ್ನು ಹಾಕುವಾಗ ಬಡವರ ಆದಾಯವನ್ನೂ ನೋಡಿಕೊಂಡು ಹಾಕಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ನಮ್ಮ ಪುತ್ತೂರು ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ, ಹಣವಂತರ ಕೈವಾಡದಿಂದ ಬಡ ಅನಧಿಕೃತ ಸಾಗುವಳಿದಾರರಿಗೆ ಅನ್ಯಾಯವಾಗಿ, ಬಡವರ ಜಮೀನು ಶ್ರೀಮಂತರ ಹೆಸರಿಗೆ ದಂಡನೆ (ಟಿ.ಟಿ.) ಆದ ಪ್ರಕರಣಗಳು ಇದ್ದು, ಈ ರೀತಿಯ ಜಮೀನುಗಳು ಮಂಜೂರಾದರೆ ಜಗಳ ಕೊಲೆ ಆಗುವ ಸಾಧ್ಯತೆ ಇದೆ. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದವರು ಜಮೀನು ಮಂಜೂರು ಮಾಡಬೇಕೆಂದು ಹೇಳುತ್ತೇನೆ. ಇನ್ನು ಫಾರೆಸ್ಟ್‌ಗೆ ಹೊಂದಿಕೊಂಡಿರುವಂತೆ, ೧೦೦ ಮೀಟರ್ ಪರಿಮಿತಿಯಲ್ಲಿ ಇರುವ ಜಮೀನನ್ನು ಕೂಡ ಬಡವರು ಒತ್ತುವರಿ ಮಾಡಿಕೊಂಡಿದ್ದಾರೆ. ಅರಣ್ಯ ಇಲಾಖೆಗೆ ಸೇರಿದ ಈ ಜಮೀನನ್ನು ಖಾಯಂಗೊಳಿಸಬೇಕೆಂದು ಹೇಳುತ್ತೇನೆ. ಕುಮ್ಕಿ ಜಮೀನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಇದೆ. ಮತ್ತೆ ೧೯೭೨ರಲ್ಲಿ ಕೃಷಿ ಇಲಾಖೆಯವರು ಒಂದು ಪಟ್ಟಿಯನ್ನು ಮಾಡಿ, ಕಂದಾಯ ಇಲಾಖೆಗೆ ಸಲ್ಲಿಸಿದಂಥ ಸಂದರ್ಭದಲ್ಲಿ ಸಿ ಮತ್ತು ಡಿ ವರ್ಗದ ಜಮೀನಿಗೆ ಸಂಬಂಧಪಟ್ಟ ಪಟ್ಟಿಯನ್ನು ಸಲ್ಲಿಸಿದ್ದರು. ಈ ಜಮೀನುಗಳನ್ನು ೧೯೮೮ರಲ್ಲಿ ಅರಣ್ಯ ಇಲಾಖೆಗೆ ವಹಿಸಿಕೊಟ್ಟಂತಹ ಉದಾಹರಣೆಗಳು ಹಲವಾರು ಇವೆ. ಇದು ಕೇವಲ ಪತ್ರದಲ್ಲಿ ವರ್ಗಾಯಿಸಲಾಯಿತು. ಆದರೆ, ಸಿ ಮತ್ತು ಡಿ. ಜಮೀನುಗಳಲ್ಲಿ ೧೯೭೨ರ ನಂತರ ೧೯೮೮ರವರೆಗೆ ಬಡವರಿಗೆ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮಂಜೂರು ಮಾಡದೆ, ಜಮೀನುದಾರರಿಗೆ ದರಖಾಸ್ತು ನೀಡಿ ಕದೀಂ ಹಿಡುವಳಿ ಜಮೀನುಗಳಾಗಿ ಪರಿವರ್ತನೆ ಮಾಡಿರುವಂಥ ಎಷ್ಟೋ ನಿದರ್ಶನಗಳಿವೆ. ಇತ್ತೀಚೆಗೆ ಸಿ ಮತ್ತು ಡಿ ವರ್ಗದ ಜಮೀನುಗಳನ್ನು ಅರಣ್ಯ ಇಲಾಖೆಯಿಂದ ಪುನಃ ಕಂದಾಯ ಇಲಾಖೆಗೆ ವರ್ಗ ಮಾಡಿಸುವಂಥ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಈ ಒಂದು ಕೆಲಸದಲ್ಲಿ ಅರಣ್ಯ ಇಲಾಖೆಯವರು ಕಂದಾಯ ಇಲಾಖೆಯವರಿಗೆ ಸಹಕಾರ ನೀಡುತ್ತಿಲ್ಲ. ಈ ಒಂದು ಕೆಲಸದಲ್ಲಿ ಹಲವಾರು ಸಮಸ್ಯೆಗಳು ಬಂದಿವೆ. ಕಂದಾಯ ಇಲಾಖೆಯಿಂದ ಸಿ ಮತ್ತು ಡಿ ವರ್ಗದ ಜಮೀನಿನ ವಿಸ್ತೀರ್ಣದ ಕೆಲಸವನ್ನು ಮಾರ್ಚಿ ೩೧ಕ್ಕೆ ಸಂಪೂರ್ಣಗೊಳಿಸಲು ಆದೇಶ ನೀಡಿದ್ದರೂ ಅರಣ್ಯ ಇಲಾಖೆಯ ಅಸಹಕಾರದಿಂದ ತೊಂದರೆಯಾಗಿದೆ. ಇವತ್ತು ಬಂಜರು ಭೂಮಿಯಲ್ಲೂ ಬಡವರು ಒತ್ತುವರಿ ಮಾಡಿಕೊಂಡಿದ್ದಾರೆ. ಈ ರೀತಿಯ ಭೂಮಿಯನ್ನು ಕೂಡ ಸಕ್ರಮಗೊಳಿಸಿಕೊಡಬೇಕೆಂದು ಹೇಳುತ್ತೇನೆ. ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಪರಿವರ್ತನೆ ಪರಿಸ್ಥಿತಿ ಬಹಳ ಹದಗೆಟ್ಟಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಭೂ ಕಂದಾಯ ನಿಯಮದ ಪ್ರಕಾರ ಭೂ ಪರಿವರ್ತನೆಯ ಕಾನೂನನ್ನು ಅಳವಡಿಸಿಕೊಂಡಿದ್ದಾರೆ. ಇದರ ಪ್ರಕಾರ ೫ ಸೆಂಟ್ ಭೂಮಿಗೆ ಕನ್‌ವರ್ಷನ್ ಪಡೆಯಬೇಕಾದರೆ ಎಷ್ಟೋ ಸಾವಿರಾರು ರೂಪಾಯಿ ಹಣವನ್ನು ಖರ್ಚು ಮಾಡಬೇಕಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಪರಿವರ್ತನೆ ಪರಿಸ್ಥಿತಿ ಬಹಳ ಹದಗೆಟ್ಟಿದೆ. ದಕ್ಷಿಣ ಕನ್ನಡದಲ್ಲಿ ಯಾವುದೇ ಜಮೀನು ಅಂದರೆ ಇವತ್ತು ಬಂಡೆಕಲ್ಲು ಒಂದನ್ನು ಬಿಟ್ಟರೆ ಮಿಕ್ಕವು ಕೃಷಿ ಭೂಮಿಗಳಾಗಿವೆ. ಇವತ್ತು ಈ ಪರಿವರ್ತನೆ

ದಂತೆ ಫಾರಮ್ ನಂ. ೭, ಅಥವಾ ಫಾರಮ್ ನಂ. ೭ಎ ಒಕ್ಕಲುತನಕ್ಕಾಗಿ ಎಷ್ಟೋ ಬಡಜನರು ಅರ್ಜಿಗಳನ್ನು ಸಲ್ಲಿಸಿದ್ದರು. ಕೆಲವರಿಗೆ ಅದರಲ್ಲೂ ಕೂಡ ಕೃಷಿಕಾರ್ಮಿಕರಿಗೆ ಫಾರಂ. ನಂ. ೭ಎ ಹೇಗೆ ಸಲ್ಲಿಸಬೇಕೆಂದು ಇದ್ದರೂ ಕೂಡ, ಫಾರಮ್ ನಂ. ೭ ಸಾಗುವಳಿ ಭೂಮಿಗೆ ಡಿಕ್ಲರೇಷನ್ ಸಲ್ಲಿಸುವಂಥ ಪರಿಸ್ಥಿತಿ ಇದ್ದರೂ ಬಡ ಜನರಿಗೆ ಫಾರಂ ನಂ. ೭ಎ ಯಾವುದು, ಫಾರಂ ನಂ. ೭ ಯಾವುದು ಎಂದು ಅರಿವು ಇಲ್ಲವೇ ಇದ್ದುದರಿಂದ ಕೆಲವರು ಅರ್ಜಿ ಸಲ್ಲಿಸಿದರೂ ಅದು ಭೂಸುಧಾರಣೆ ಕಾಯಿದೆಯಲ್ಲಿ ಅಥವಾ ಭೂ ನ್ಯಾಯ ಪಂಚಾಯಿತಿಯಲ್ಲಿ ಎಷ್ಟೋ ಬಡ ಜನರಿಗೆ ಅನ್ಯಾಯವಾಗುವ ಪರಿಸ್ಥಿತಿ ಇದೆ. ಅದೇ ರೀತಿಯಲ್ಲಿ ಕೆಲವು ಕಡೆಗಳಲ್ಲಿ ಮಾಜಿ ಭೂಮಾಲೀಕರು, ಸ್ಥಳದಲ್ಲಿರುವಂಥ ಈ ಒಂದು ಮಾಜಿ ಒಕ್ಕಲುಗಳು ಏನಿದ್ದಾರೆ ಅವರ ಅರ್ಜಿಗಳು ತಿರಸ್ಕಾರ ಆಗಿರುವುದರಿಂದ ಇವೊತ್ತು ಪರಿತಪಿಸುವಂಥ ಪ್ರಸಂಗಗಳು ಕೂಡ ಇದೆ. ಈ ಸಂದರ್ಭದಲ್ಲೂ ಕೂಡ ಅನ್ಯಾಯಕ್ಕೆ ಒಳಗಾದಂತ ಬಡ ಕೃಷಿಕಾರ್ಮಿಕರಿಗೆ ಭೂ ಸುಧಾರಣೆ ನಿಯಮದಂತೆ ಕಾನೂನಿನಂತೆ ಅವರಿಗೆ ಮತ್ತೆ ಡಿಕ್ಲರೇಷನ್ ಕೊಡುವಂಥ ಒಂದು ಕಾನೂನು ಜಾರಿಗೆ ತಂದರೆ ಎಷ್ಟೋ ಅನ್ಯಾಯಕ್ಕೊಳಗಾದ ಕುಟುಂಬಗಳಿಗೆ ಇದರಿಂದ ಒಂದು ಹೆಚ್ಚಿನ ಪ್ರಯೋಜನ ಆಗಲಿಕ್ಕೆ ಸಾಧ್ಯವಿದೆ. ಅದೇ ರೀತಿ ಹಿಂದಿನ ಸರ್ಕಾರ ಈ ಒಂದು ಭೂ ಸುಧಾರಣೆ ನಿಯಮದಂತೆ ಜಾರಿಗೊಳಿಸಿದಂಥ ಜಮೀನುಗಳನ್ನಲ್ಲದೆ ಇನ್ನಿತರ ಸಂದರ್ಭಗಳಲ್ಲಿ ಮೇಲ್ಮನೆ ಪ್ರಾಧಿಕಾರ ಭೂ ಸುಧಾರಣೆಗೆ ಒಂದು ಹೊಸ ಕಾನೂನು ತಂದು ಅಪಲೇಟ್ ಟ್ರಿಬ್ಯುನಲ್ ರಚನೆ ಮಾಡಿ ಮುಖ್ಯವಾಗಿ ಆಗಿನ ಸರ್ಕಾರ ಉಳುವವನೇ ಹೊಲದೊಡೆಯ ಎಂದು ಹೇಳುವಂಥ ಕಾನೂನು ಜಾರಿಗೊಳಿಸಿದಂಥ, ಸಂದರ್ಭದಲ್ಲಿ ಬಡ ಕೃಷಿಕಾರ್ಮಿಕನಿಗೆ, ಸಾಗುವಳಿದಾರನಿಗೆ ಯಾವುದೇ ರೆಕಾರ್ಡ್ ಇಲ್ಲದಿದ್ದರೂ ಸಹ, ಅವನು ನಿಜವಾಗಿ ಸಾಗುವಳಿದಾರನೆ, ಸ್ಥಳದಲ್ಲಿ ವಾಸಿಸುತ್ತಿದ್ದಾನೆಯೋ, ಆ ಸಾಗುವಳಿದಾರ ಅವನು ಎತ್ತುಗಳನ್ನು ಸಾಕಿರುವುದು, ಮುಂತಾದುದನ್ನೆಲ್ಲಾ ನೋಡಿ ಅವನಿಗೆ ಜಮೀನು ಖಾಯಂಗೊಳಿಸಿದ್ದಾರೆ. ಇವೊತ್ತು ಈ ಅಪಲೇಟ್ ಟ್ರಿಬ್ಯುನಲ್‌ನಲ್ಲಿ ರೆಕಾರ್ಡ್ಸ್ ಇಲ್ಲವೆಂದು ಹೇಳಿ ಎಷ್ಟೋ ಬಡ ಸಾಗುವಳಿದಾರರಿಗೆ ಅನ್ಯಾಯವಾಗಿದೆ. ಈ ಒಂದು ಸಂದರ್ಭದಲ್ಲಿ ಈ ಒಂದು ಭೂಸುಧಾರಣೆ ಮೇಲ್ಮನೆ ಪ್ರಾಧಿಕಾರಕ್ಕೆ ಅದನ್ನು ರದ್ದತಿ ಮಾಡುವಂಥ ಅಥವಾ ಅದಕ್ಕೆ ಒಂದು ಹೆಚ್ಚಿನ ತಿದ್ದುಪಡಿ ಮಾಡುವ ಮೂಲಕ ರೈತನಿಗೆ ಪ್ರಯೋಜನವಾಗುವಂಥ ಕಾರ್ಯಕ್ರಮವನ್ನು ಕೂಡ ಹಾಕಿಕೊಳ್ಳಬೇಕೆಂದು ವಿನಂತಿಸುತ್ತೇನೆ.

ಇನ್ನು ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆ ಬಗ್ಗೆ ಹೇಳುತ್ತೇನೆ. ಇವತ್ತು ನೀರಾವರಿಯನ್ನು ನಮ್ಮ ರಾಜ್ಯದಲ್ಲಿ ಹೆಚ್ಚಿನ ಕಡೆಗಳಲ್ಲಿ ಕಾಣುತ್ತಾ ಇದ್ದೇವೆ.

ಸುಮಾರು ೪–೫ ವರ್ಷಗಳ ಹಿಂದೆ ಬೆಂಗಳೂರಿನಲ್ಲಿನ ವಾತಾವರಣದಲ್ಲಿ ಸೆಖೆಯ ವಾತಾವರಣ ಇರಲಿಲ್ಲ. ಆದರೆ ಐದು ವರ್ಷಗಳ ನಂತರ ಸೆಖೆಯಾಗುವಂತಹ ವಾತಾವರಣವನ್ನು ನಾವು ಕಾಣುತ್ತಿದ್ದೇವೆ. ಇವತ್ತು ನಮ್ಮ ಜಲದ ಮಟ್ಟ ಅತಿ ಕೆಳಮಟ್ಟಕ್ಕೆ ಹೋಗಿರುವುದ್ದರಿಂದ ನೀರಿನ ಸಮಸ್ಯೆ ಹಲವಾರು ರೀತಿಯಲ್ಲಿ ಕಂಡು ಬರುತ್ತಾ ಇದೆ. ಇನ್ನೊಂದು ಕಡೆ ಹೆಚ್ಚಿನ ಸಂಖ್ಯೆಯಲ್ಲಿ ಕೊಳವೆ ಬಾವಿಗಳನ್ನು ತೋಡಿರುವುದರಿಂದ ನೀರಾವರಿಗೆ ತೊಂದರೆಯಾಗಿದೆ. ಕೊಳವೆ ಬಾವಿಗಳನ್ನು ತೋಡಿದರೆ ಅದರಿಂದ ತಾತ್ಕಾಲಿಕ ಪರಿಹಾರ ಸಿಗುತ್ತದೆ. ಶಾಶ್ವತವಾದ ನೀರಾವರಿ ಮೂಲಗಳನ್ನು ನಾವು ಅಣಿಗೊಳಿಸಿಕೊಂಡು ಹೋಗದಾಗ ಮಾತ್ರ ನೀರಾವರಿ ಸಮಸ್ಯೆ ನಿವಾರಣೆಯಾಗುತ್ತದೆ. ಹಿಂದೆ ಪುರಾತನ ಕಾಲದಲ್ಲಿ ಇದ್ದಂತಹ ಒಡ್ಡು ನಿರ್ಮಾಣ ಮಾಡಿ, ನೀರನ್ನು ಹಾಯಿಸುವಂಥ ಪರಿಸ್ಥಿತಿ ಇತ್ತು. ಅದೇರೀತಿ ಏತ ನೀರಾವರಿ ಇತ್ತು. ಹೂಳನ್ನು ತೆಗೆಯುವುದು ಮುಂತಾದ ಕೆಲಸವನ್ನು ಮಾಡುವ ಮೂಲಕ ನೀರನ್ನು ಹಾಯಿಸುವಂತಹ ಪದ್ಧತಿ ಇತ್ತು. ದೊಡ್ಡ ದೊಡ್ಡ ಅಣೆಕಟ್ಟನ್ನು ಕಟ್ಟುವ ಮೂಲಕ ಶಾಶ್ವತವಾದ ನೀರಾವರಿ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುತ್ತಿದ್ದರು. ಹಿಂದೆ ಸರಕಾರದವರ ಅಧೀನದಲ್ಲಿರುವ ಕೆರೆಗಳ ಮೂಲಕ ನೀರಾವರಿ ಸೌಲಭ್ಯವನ್ನು ಒದಗಿಸುವಂತಹ ಕಾರ್ಯ ನಡೆಯುತ್ತಿತ್ತು. ಅರಣ್ಯ ಇಲಾಖೆಯವರ ಅಧೀನದಲ್ಲಿರುವ ಕೆರೆ ಕುಂಟೆಗಳಿಂದ ಕೂಡ ನೀರನ್ನು ಉಪಯೋಗ ಮಾಡಿಕೊಳ್ಳಲು ಜನರಿಗೆ ಅವಕಾಶ ಇತ್ತು. ಅದರಿಂದ ಅವರು ಸಾಗುವಳಿಯನ್ನು ಪ್ರಾರಂಭ ಮಾಡುತ್ತಿದ್ದರು. ಅರಣ್ಯ ಇಲಾಖೆಯ ಧೋರಣೆಗಳ ಮೂಲಕ ಇಂತಹ ನೀರನ್ನು ಪಡೆದು ಬೇಸಾಯ ಮಾಡಲಿಕ್ಕೆ ತೊಂದರೆಯಾಗುತ್ತದೆ. ಕೆರೆಗಳ ಹೂಳನ್ನು ಎತ್ತುವ ಕಾರ್ಯಕ್ರಮದ ಮೂಲಕ ಹಿಂದಿನ ನೀರಾವರಿ ಪದ್ಧತಿಯನ್ನು ಶಾಶ್ವತವಾಗಿ ಉಪಯೋಗಿಸಿಕೊಂಡು ಬಂದರೆ ಹೆಚ್ಚಿನ ಪ್ರಯೋಜನವಾಗುತ್ತದೆ. ೧೯೮೭ರಲ್ಲಿ ಜಿಲ್ಲಾ ಪರಿಷತ್, ಮಂಡಲ ಪಂಚಾಯತಿ ಅಸ್ತಿತ್ವಕ್ಕೆ ಬಂದ ನಂತರ ಗ್ರಾಮೀಣ ಪ್ರದೇಶದಲ್ಲಿರುವಂತಹ ರಸ್ತೆ, ಸಾರಿಗೆ ಸಂಪರ್ಕಗಳ ವ್ಯವಸ್ಥೆಯನ್ನು ಲೋಕೋಪಯೋಗಿ ಇಲಾಖೆಯಿಂದ ಜಿಲ್ಲಾ ಪರಿಷತ್ತಿಗೆ ವಹಿಸಲಾಯಿತು, ಇದರಿಂದಾಗಿ ಸಾರಿಗೆ ಸಂಪರ್ಕ ರಸ್ತೆ ರಚನೆಗೆ ತುಂಬಾ ಅಡ್ಡಿಯಾದಂಥ ಪರಿಸ್ಥಿತಿ ಇದೆ. ಅವರಿಗೆ ನೀಡುತ್ತಿರುವ ಹಣ ಸಾಲದು. ಲೋಕೋಪಯೋಗಿ

ಇಲಾಖೆಯಿಂದ ಜಿಲ್ಲಾ ಪರಿಷತ್‌ಗಳು, ಮಂಡಲ್ ಪಂಚಾಯತಿಗಳಿಗೆ ೫೦–೫೪_೫೦–೨೪–೫೦–೨೮ ರ ಅಡಿಯಲ್ಲಿ ಮಾತ್ರ ಹಣವನ್ನು ಕೊಡುವಂತಹ ಕಾರ್ಯಕ್ರಮ ಇದೆ. ಗ್ರಾಮೀಣ ಪ್ರದೇಶದಲ್ಲಿನ ರಸ್ತೆ ಕಾರ್ಯಕ್ರಮಕ್ಕೆ ಲೋಕೋಪಯೋಗಿ ಇಲಾಖೆಯವರು ಜಿಲ್ಲಾಪರಿಷತ್‌ಗಳು, ಮಂಡಲ ಪಂಚಾಯಂತಿಗಳಿಗೆ ಏನು ಹಣವನ್ನು ಕೊಡುತ್ತಾರೆ ಅದು ಏನೇನು ಸಾಕಾಗುವುದಿಲ್ಲ. ಇದರಿಂದ ರಸ್ತೆ ಸಂಪರ್ಕಗಳನ್ನು ವೃದ್ಧಿಗೊಳಿಸಲಿಕ್ಕೆ ಸಾಧ್ಯವಾಗುವುದಿಲ್ಲ. ೫೦–೫೪ ರ ಹೆಡ್‌ನಲ್ಲಿ ಸೇತುವೆ ಕೆಲಸ ತೆಗೆದುಕೊಳ್ಳಬೇಕಾದರೆ ತೊಂದರೆಯಾಗುತ್ತದೆ ಹಣ ಸಾಕಾಗುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಗೆ ೫ ಲಕ್ಷ ರೂಪಾಯಿಗಳನ್ನು ಇಟ್ಟರೆ ಅಲ್ಲಿರುವ ೧೫ ತಾಲ್ಲೂಕುಗಳಿಗೆ ಇದನ್ನು ವಿಂಗಡಿಸಿದಾಗ ನೂರು ವರ್ಷ ಕಳೆದರೂ ರಸ್ತೆಯನ್ನು ಸೇತುವೆ ಕೆಲಸವನ್ನು ಅಭಿವೃದ್ಧಿ ಪಡಿಸಲಿಕ್ಕೆ ಅಥವಾ ಅದರ ಕಾಮಗಾರಿಯನ್ನು ಪೂರೈಸಲಿಕ್ಕೆ ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ೧೯೮೫ನೇ ಇಸವಿಯಲ್ಲಿ ನನ್ನ ತಾಲ್ಲೂಕಿಗೆ ಮಂಜೂರಾದ ಸೇತುವೆ ನಿರ್ಮಾಣದ ವೆಚ್ಚ ೨೧ ಲಕ್ಷ ಎಂದು ಅಂದಾಜು ಮಾಡಲಾಗಿದ್ದು ಅದನ್ನು ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ನಂತರ ಅವರಿಗೆ ವಹಿಸಲಾಯಿತು. ಅದನ್ನು ಸಂಪೂರ್ಣಗೊಳಿಸಲಿಕ್ಕೆ ಸಾಧ್ಯವಾಗುವುದಿಲ್ಲವೆನ್ನುವ ಕಾರಣದಿಂದಾಗಿ ಆ ಕೆಲಸ ಪ್ರಾರಂಭವಾಗದೆ ಹಾಗೆ ಉಳಿದಿದೆ. ಇದರಿಂದಾಗಿ ನಮ್ಮ ಕ್ಷೇತ್ರ ವಂಚಿತವಾಗಿದೆ. ೫೦–೫೪ ಮತ್ತು ೫೦–೨೪ ರ ಹೆಡ್‌ನಲ್ಲಿ ಜಿಲ್ಲಾಪರಿಷತ್ತಿಗೆ ಲೋಕೋಪಯೋಗಿ ಇಲಾಖೆಯಿಂದ ಹೆಚ್ಚಿನ ಹಣವನ್ನು ಒದಗಿಸುವಂತಹ ಕಾರ್ಯಕ್ರಮವನ್ನು ಇಟ್ಟುಕೊಳ್ಳಬೇಕು. ಇನ್ನು ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಹೇಳುವುದಾದರೆ ೧೯೮೯ನೇ ಇಸವಿಯ ಅಂತ್ಯಕ್ಕೆ ವಿದ್ಯೆ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಾಗೂ ಹಾಸ್ಟೆಲ್‌ನಲ್ಲಿ ಕಲಿಯುವಂತಹ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಊಟದ ವ್ಯವಸ್ಥೆಗಾಗಿ ೧೦೦ ರಿಂದ ೧೫೦ ರೂಪಾಯಿಗಳ ಏರಿಕೆಯನ್ನು ಕೇಂದ್ರ ಸರ್ಕಾರ ಮಾಡಿದೆ, ಅದೇ ರೀತಿಯಲ್ಲಿ ಈ ಸಲಕೂಡ ನಮ್ಮ ಸರಕಾರ ಇವರಿಗೆ ತಾವುಕೊಡುತ್ತಿರುವ ೭೫ ರೂಪಾಯಿಯ ಬದಲು ೧೨೦–೧೨೫ ರೂಪಾಯಿಯವರೆಗೆ ವಿದ್ಯಾರ್ಥಿ ವೇತನ ಕೊಡುವಂತಹ ಕಾರ್ಯಕ್ರಮವನ್ನು ಇಟ್ಟುಕೊಂಡಿದೆ. ಇದು ನಿಜವಾಗಿಯೂ ಸ್ವಾಗತಾರ್ಹ ವಿಷಯ. ಆದರೆ ಇವತ್ತು ಹಾಸ್ಟೆಲ್‌ಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಊಟದ ವ್ಯವಸ್ಥೆಗೋಸ್ಕರ ಕೊಡುತ್ತಿರುವ ಹಣವನ್ನು ಲೆಕ್ಕ ಹಾಕಿದರೆ ಒಬ್ಬೊಬ್ಬ ವಿದ್ಯಾರ್ಥಿಗೆ ಒಂದು ದಿವಸಕ್ಕೆ ಕೇವಲ ಒಂದು ರೂಪಾಯಿಯಲ್ಲಿ ಹಾಸ್ಟೆಲ್‌ನಲ್ಲಿ ಜೀವನ ಮಾಡಬೇಕಾಗಿದೆ. ಇದನ್ನು ಹಳೇ ಪದ್ಧತಿಯಲ್ಲಿ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇದನ್ನು ಹೆಚ್ಚು ಮಾಡಬೇಕು. ಸಮಾಜಕಲ್ಯಾಣ ಇಲಾಖೆಯಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕೊಡುತ್ತಿರುವ ಸೌಲಭ್ಯಗಳು ಸಾಲದಾಗಿದೆ. ಇದರಿಂದಾಗಿ ವಿದ್ಯೆಯನ್ನು ಕಲಿಯತಕ್ಕ ಪ್ರತಿಭಾವಂತ ವಿದ್ಯಾರ್ಥಿವಿದ್ಯಾರ್ಥಿನಿಯರ ವಿದ್ಯಾಭ್ಯಾಸ ಕುಂಠಿತವಾಗುತ್ತಿದೆ. ಈ ಮಕ್ಕಳ ತಂದೆತಾಯಿಗಳೂ ಕೂಡ ಅವರ ಜೀವನಪರಿಸ್ಥಿತಿಯನ್ನು ಕಂಡು ಆ ಮಕ್ಕಳನ್ನು ಶಾಲೆಗಳಿಂದ ಅಥವಾ ಹಾಸ್ಟೆಲ್‌ಗಳಿಂದ ವಾಪಸು ಕರೆದುಕೊಂಡು ಹೋಗತಕ್ಕ ಸಂದರ್ಭ ಇದೆ. ಆದ್ದರಿಂದ ಸಮಾಜ ಕಲ್ಯಾಣ ಇಲಾಖೆಯಿಂದ ಕೊಡತಕ್ಕ ಊಟ ಮತ್ತು ವಸತಿ ವೆಚ್ಚವನ್ನು ಇನ್ನೂ ಹೆಚ್ಚಿಗೆ ಕೊಡತಕ್ಕ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದೇ ರೀತಿ ಊಟ ಮತ್ತು ವಸತಿ ಹಾಗೂ ವಿದ್ಯೆಯನ್ನು ಕೊಡತಕ್ಕ ಕೇಂದ್ರಗಳನ್ನು ಕೊಡುವಂಥ ಕಾರ್ಯಕ್ರಮವನ್ನು ಮಂಡಲ ಪಂಚಾಯಿತಿಯವರು ಇಟ್ಟುಕೊಂಡಿದ್ದರು ಈಗ ಈ ಕೇಂದ್ರಗಳನ್ನು ಪಂಚಾಯಿತಿಗೆ ಒಂದರಂತೆ ಕೊಡುವ ಕಾರ್ಯಕ್ರಮ ಇಟ್ಟುಕೊಂಡಾಗ ಈ ಇಲಾಖೆಯಲ್ಲಿರತಕ್ಕ ಅವರಲ್ಲೂ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಅಭಿವೃದ್ಧಿಗೆ ಹಾಗೂ ಅವರ ಕಲ್ಯಾಣಕ್ಕೆ ಸಹಕಾರಿಯಾಗಬಹುದು ಎಂದು ಹೇಳಬಯಸುತ್ತೇನೆ.

ಇದೇ ರೀತಿ ಸಹಕಾರ ಇಲಾಖೆಯ ಬಗ್ಗೆ ಹೇಳುವುದಾದರೆ. ಗ್ರಾಮೀಣ ಮಟ್ಟದಲ್ಲಿ ಆಗಲಿ ಅಥವಾ ತಾಲ್ಲೂಕು ಮಟ್ಟದಲ್ಲಿ ಆಗಲಿ ಸಹಕಾರ ಸಂಘಗಳ ಮೂಲಕ ಕೃಷಿಕರಿಗೆ ಹೆಚ್ಚಿನ ಅನುಕೂಲವನ್ನು ಕೊಡತಕ್ಕಂಥ ಸಂಸ್ಥೆ ಇದು. ಅದರಲ್ಲೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ವಾಣಿಜ್ಯ ಮತ್ತು ಸಹಕಾರ ರಂಗದಲ್ಲಿ ಹೆಚ್ಚಿನ ರೀತಿಯಲ್ಲಿ ಮುನ್ನಡೆಯನ್ನು ಸಾಧಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯು ಸಹಕಾರ ಸಂಘಗಳ ಸ್ಥಾಪನೆಗೆ ಮೂಲ ಮತ್ತು ವಾಣಿಜ್ಯ ಬ್ಯಾಂಕುಗಳಿಗೆ ಬಹಳ ಹೆಸರುವಾಸಿಯಾಗಿದ್ದು ಉತ್ತಮ ಸಾಧನೆಗಳನ್ನು ಸಾಧಿಸಿದೆ. ಆದರೆ ಸಹಕಾರ ಸಂಘಗಳಲ್ಲಿ ಕಾನೂನಿನ ಕೆಲವು ತೊಡಕುಗಳಿವೆ. ಅದನ್ನು ನಿವಾರಣೆ ಮಾಡಬೇಕು. ಬಡ್ಡಿ ಮನ್ನಾ ವಿಷಯದಲ್ಲಿ ಸರ್ಕಾರ ಯೋಜನೆ ಮಾಡಬೇಕು. ಇವತ್ತು ಚಿಕ್ಕರೈತ, ಸಣ್ಣ ರೈತ ಎನ್ನತಕ್ಕದ್ದು ಕೇಳಿಬರುತ್ತಿದೆ. ಬಡ್ಡಿ ಮನ್ನಾ ಮೂಲಕ ಕೃಷಿಕರು ಹೆಚ್ಚಿನ ಅಭಿವೃದ್ಧಿಯಾಗಲಿಕ್ಕೆ ಅನುಕೂಲವಿತ್ತು. ಬಡ್ಡಿ ಮನ್ನಾ ಕಾರ್ಯಕ್ರಮಗಳನ್ನು ಸರ್ಕಾರ ಪ್ರತಿಯೊಬ್ಬರಿಗೂ ನೀಡಿದಾಗ ಸಹಕಾರ ಸಂಘದಲ್ಲಿ ಹೆಚ್ಚಿನ ರೈತರು ಅಭಿವೃದ್ಧಿ ಹೊಂದುವುದಕ್ಕೆ ಸಾಧ್ಯವಿದೆ. ಈ ಒಂದು ಕೆಲಸವನ್ನು ಸರ್ಕಾರ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಇದೇ ರೀತಿ ಸಾರಿಗೆ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಹಲವಾರು ವಿಷಯಗಳಲ್ಲಿ ಇವತ್ತು ಸಾರಿಗೆ ಸಂಸ್ಥೆ ನಷ್ಟವನ್ನ ಸಂಭವಿಸುತ್ತಿದೆ. ಗ್ರಾಮೀಣ ಮಟ್ಟದಲ್ಲಿರತಕ್ಕ ಜನರಿಗೆ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕಾದರೆ ಆ ಭಾಗದಲ್ಲಿ ಆಗಬಹುದಾದ ನಷ್ಟವನ್ನು ಗಮನದಲ್ಲಿಟ್ಟುಕೊಳ್ಳದೆ ಅಲ್ಲಿನ ಜನರಿಗೋಸ್ಕರ ಹೆಚ್ಚು ಹೆಚ್ಚು ಕಡೆಗಳಲ್ಲಿ ಬಸ್ಸುಗಳನ್ನು ಹಾಕಿ ಸಾರಿಗೆ ಸೌಲಭ್ಯವನ್ನು ಒದಗಿಸುವ ಕ್ರಮ ಕೈಗೊಳ್ಳಬೇಕು. ಹಾಗೆ ಮಾಡಿದರೆ ಮಾತ್ರ ಗ್ರಾಮೀಣ ಜನರಿಗೆ ನೀವು ಸಹಾಯ ಮಾಡಿದಂತಾಗುತ್ತದೆ.

ಅಧ್ಯಕ್ಷರು.—ನೀವು ಎಲ್ಲ ಪ್ಯಾರಾಗಳ ಮೇಲೂ ಕಾಮೆಂಟ್ ಮಾಡಬೇಕಾಗಿಲ್ಲ.

ಶ್ರೀ ಕೆ. ಕು ಎಲ.—ಇದೇ ರೀತಿ ಪೋಲೀಸ್ ಇಲಾಖೆಯ ಬಗ್ಗೆ ಹೇಳುವುದಾದರೆ, ದಿನ ನಿತ್ಯ ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ರೀತಿಯ ದೌರ್ಜನ್ಯಗಳು ನಡೆಯುತ್ತಿರುವುದನ್ನು ನೋಡುತ್ತಿರುತ್ತೇವೆ. ಪೋಲೀಸ್ ಇಲಾಖೆಯಲ್ಲಿ ಪೋಲೀಸ್ ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸತಕ್ಕದು ಕಂಡುಬರುತ್ತಿಲ್ಲ. ಪೋಲೀಸ್ ಸ್ಟೇಷನ್‌ಗಳಿಗೆ ಜೀಪುಗಳನ್ನು ಕೊಡತಕ್ಕ ವ್ಯವಸ್ಥೆ ಇಲ್ಲ. ಇವತ್ತು ನೀವು ಅವರಿಗೆ ಜೀಪುಗಳನ್ನು ಕೊಡದಿದ್ದರೆ ಗ್ರಾಮಾಂತರ ಪ್ರದೇಶದಲ್ಲಿ ಅದರಲ್ಲೂ ನಮ್ಮ ಮಲೆನಾಡು ಪ್ರದೇಶದಲ್ಲಿ ಬಹಳ ತೊಂದರೆಯಾಗುತ್ತದೆ. ಏಕೆಂದರೆ, ಯಾರಾದರೂ ದೌರ್ಜನ್ಯಕ್ಕೆ ಒಳಗಾದರೆ, ತೊಂದರೆಗೊಳಗಾದರೆ ತಕ್ಷಣ ಪೋಲೀಸರನ್ನು ಕರೆಸಬೇಕೆಂದರೆ ಕಷ್ಟವಾಗುತ್ತದೆ. ಪೋಲೀಸರನ್ನು ಕರೆದುಕೊಂಡು ಬರಬೇಕಾದರೆ ಕೆಲವು ಸಂದರ್ಭಗಳಲ್ಲಿ ವಾಹನಗಳನ್ನು ಭಾಡಿಗೆಗೆ ತೆಗೆದುಕೊಂಡು ಅದರಲ್ಲಿ ಈ ಪೋಲೀಸರನ್ನು ಕರೆದುಕೊಂಡು ಬರಬೇಕಾಗುತ್ತದೆ. ಅದೇ ರೀತಿ ರಾತ್ರಿಯ ಸಂದರ್ಭದಲ್ಲಿ ತೊಂದರೆ ಆದರೆ ತೊಂದರೆಗೊಳಗಾದವರಿಗೆ ರಕ್ಷಣೆಯನ್ನು ಒದಗಿಸುವ ಪರಿಸ್ಥಿತಿಯಲ್ಲಿಲ್ಲ.

ಅದೇ ರೀತಿಯಲ್ಲಿ ಠಾಣೆಗೆ ಒಂದು ಜೀಪನ್ನು ಕೊಡುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಪೋಲೀಸ್ ಇಲಾಖೆಯಲ್ಲಿ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಸುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ರಾಜ್ಯದ ಹೋಮ್‌ಗಾರ್ಡ್ಸ್ ಸಿಬ್ಬಂದಿ ಏನು ಇರುತ್ತಾರೆ ಅವರಲ್ಲಿ ಕೆಲವರು ಗೌರವಧನದ ಮೂಲಕ ಸರ್ಕಾರಿ ನೌಕರರಾಗಿದ್ದವರು ಈವತ್ತು ಸೇವೆಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಅವರಲ್ಲಿ ಯಾವುದೇ ಹೆಚ್ಚಿನ ಸೇವೆಯಲ್ಲಿ ಇಲ್ಲದವರೂ ಕೂಡ ಹೋಮ್‌ಗಾರ್ಡ್ ಮೂಲಕ ತಮ್ಮ ಸೇವೆಯನ್ನು ಎಷ್ಟೋ ವರ್ಷಗಳಿಂದ ಮಾಡಿಕೊಂಡು ಬಂದಿರುತ್ತಾರೆ. ಅವರ ಸೇವೆಯನ್ನು ಖಾಯಂ ಮಾಡಿದರೂ ಕೂಡ ಪೋಲೀಸ್ ಸಿಬ್ಬಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ನೀಡುವಂತ ಕಾರ್ಯಕ್ರಮವನ್ನು ಮಾಡಲು ಸಾಧ್ಯವಿದೆ ಎಂದು ಹೇಳುತ್ತೇನೆ.

ಅದೇ ರೀತಿಯಲ್ಲಿ ರಾಜ್ಯಪಾಲರ ಭಾಷಣದಲ್ಲಿ ಆರೋಗ್ಯ ಇಲಾಖೆಯ ಬಗ್ಗೆ ಹೇಳಿದ್ದಾರೆ, ಈವತ್ತು ಆರೋಗ್ಯ ಇಲಾಖೆಯ ಬಗ್ಗೆ ಅನೇಕ ಉದಾಹರಣೆಗಳನ್ನು ಹೇಳುವುದಾದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂಥ ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ವೈದ್ಯಾಧಿಕಾರಿಗಳನ್ನು ನೇಮಿಸಿಲ್ಲ, ಉದಾಹರಣೆಗೆ ಕೊಯಿಲ ಎಂಬ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಕಳೆದ ಏಳು ವರ್ಷದಿಂದ ಸತತವಾಗಿ ವೈದ್ಯಾಧಿಕಾರಿಯನ್ನು ನೇಮಕ ಮಾಡಲಿಕ್ಕೆ ಸಾಧ್ಯವಾಗದ ಪರಿಸ್ಥಿತಿ ಇರುವಾಗ ಈವತ್ತು ಬಹಳವಾಗಿ ಆರೋಗ್ಯ ಇಲಾಖೆಯನ್ನು ಉತ್ತಮಪಡಿಸಬೇಕಾಗಿದೆ. ಕೇಂದ್ರ ಸರ್ಕಾರದ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಹೆಚ್ಚಿನ ರೀತಿಯಲ್ಲಿ ಸವಲತ್ತುಗಳನ್ನು ಕೊಟ್ಟು ಪ್ರತಿಯೊಂದು ಪ್ರಾಥಮಿಕ ಆರೋಗ್ಯ ಘಟಕವನ್ನು ಪ್ರಾಥಮಿಕ ಆರೋಗ್ಯ ಘಟಕವನ್ನಾಗಿ ಮಾರ್ಪಡಿಸಿದರೆ ಮಾತ್ರ ಸಿಬ್ಬಂದಿ ಹಾಗೂ ವೈದ್ಯಾಧಿಕಾರಿಗಳನ್ನು ನೇಮಕ ಮಾಡಬಹುದು. ಕಳೆದ ೨-೩ ವರ್ಷಗಳಿಂದ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಮಾರ್ಪಡಿಸಿದರೂ ಕೂಡ ವೈದ್ಯಕೀಯ ಸಿಬ್ಬಂದಿಯನ್ನು ವೈದ್ಯಾಧಿಕಾರಿಗಳನ್ನು ಕೊಡದಿರುವುದರಿಂದ ಇನ್ನಷ್ಟು ತೊಂದರೆಗೆ ಈಡಾದಂಥ ಪರಿಸ್ಥಿತಿ ಇದೆ. ಆದ್ದರಿಂದ ಆರೋಗ್ಯ ಇಲಾಖೆಯವರು ವೈದ್ಯಕೀಯ ಸಿಬ್ಬಂದಿಯನ್ನು ಕೊಡುವಂಥ ಕಾರ್ಯವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ರಾಜ್ಯಪಾಲರ ಭಾಷಣದ ವಂದನಾರ್ಪಣ ಸಮಯದಲ್ಲಿ ಈ ಸಲದ ರಾಜ್ಯಪಾಲರ ಭಾಷಣದಲ್ಲಿ ಹೆಚ್ಚಿನ ರೀತಿಯಲ್ಲಿ ಹೆಚ್ಚಿನ ಜನರಿಗೆ ಅನುಕೂಲವಾಗುವಂಥ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡುದನ್ನು ಸ್ವಾಗತಿಸುತ್ತಾ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ ಈ ಸದನದ ಅಧಿವೇಶನದಲ್ಲಿ ರಾಜ್ಯಪಾಲರು ಏನು ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದಾರೆ ಅದಕ್ಕೆ ವಿರೋಧ

ವ್ಯಕ್ತಪಡಿಸುವುದು ಅನಿವಾರ್ಯವಾದ ಕಾರಣ ನಾನು ವಿರೋಧ ವ್ಯಕ್ತಪಡಿಸಿ ಎರಡು ಮಾತುಗಳನ್ನು ಆಡಬಯಸುತ್ತೇನೆ. ಏತಕ್ಕೆಂದರೆ, ರಾಜ್ಯಪಾಲರ ಭಾಷಣದಲ್ಲಿ ನಾವು ಅಂದುಕೊಂಡ ರೀತಿಯಲ್ಲಿ ಈ ವರ್ಷದ ಕಾರ್ಯಕ್ರಮಗಳ ನಿರೂಪಣೆ ಮತ್ತು ಆಡಳಿತಾತ್ಮಕ ವ್ಯವಸ್ಥೆಯ ಸುಧಾರಣೆಯನ್ನು ಏನು ಸರ್ಕಾರ ಘೋಷಣೆ ಮಾಡಬೇಕಾಗಿತ್ತು. ಈ ರಾಜ್ಯದ ಜನ ನಿರೀಕ್ಷಣೆ ಮಾಡಿದಷ್ಟುಮಟ್ಟಿಗೆ ಅದು ಇಲ್ಲವೆಂದು ನಾನು ಭಾವಿಸುತ್ತೇನೆ. ಕಾರಣ ಅವರು ಈಗಾಗಲೇ ಒಪ್ಪಿಕೊಂಡಿದ್ದಾರೆ. ಆಡಳಿತದಲ್ಲಿ ಶಿಥಿಲತೆ ಬಂದಿದೆ, ಭ್ರಷ್ಟಾಚಾರ ಇದೆ ಇದನ್ನು ಸರಿಮಾಡುವುದಕ್ಕೆ ಬೇಕಾದಷ್ಟು ಸಮಿತಿಗಳ ನೇಮಕ ಆಗಬೇಕಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಯಾವುದೇ ನೇಮಕಾತಿ ಮಾಡುವುದಕ್ಕೆ ತಡೆ ಏನಿದೆ ಮತ್ತು ವಿಷಯವನ್ನು ತೀರ್ಮಾನ ಮಾಡುವುದಕ್ಕೆ ತಡವಾಗುತ್ತದೆ. ಹಾಗಾಗಿ ನ್ಯಾಯ ದೊರಕಲಿಕ್ಕೆ ಮತ್ತೆ ತೊಂದರೆಯಾಗುತ್ತದೆಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಈಗಾಗಲೆ ಬೇಕಾದಷ್ಟು ಇಲಾಖೆಗಳು ಏನು ಇತ್ತು ಅದರ ಕೆಳಗಡೆ ಏನು ಅಧಿಕಾರ ವಿಕೇಂದ್ರೀಕರಣ ಆಗಿದ್ದು, ಜಿಲ್ಲಾ ಪರಿಷತ್ ಇರಬಹುದು ಅಥವಾ ಬೇರೆ ಸಹಕಾರಿ ರಂಗ ಇರಬಹುದು. ಅದರ ಕೆಳಗೆ ನಾವು ಅಧಿಕಾರಿಗಳಿಂದ ಸಹಕಾರ ಅಥವಾ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇತ್ತು. ಪ್ರತಿಯೊಂದು ಸರ್ಕಾರವೂ ಇನನ್ನೇ ಮೂಲಭೂತ ಧ್ಯೇಯ ಮಾಡಿಕೊಂಡು ಹೋಗಿರುವುದು ನನ್ನ ದೃಷ್ಟಿಯಲ್ಲಿ ತಪ್ಪು ಎಂದು ಹೇಳುತ್ತೇನೆ.

ಇನ್ನು ರಾಜ್ಯದ ಅಭಿವೃದ್ಧಿಯ ಕಡೆಗೆ ರಾಜ್ಯ ಸರ್ಕಾರ ಯಾವುದೇ ಒಂದು ಹೇಳಿಕೊಳ್ಳುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಇದಕ್ಕೆ ಕಾರಣ ರಾಜ್ಯ ಸರ್ಕಾರಕ್ಕೆ ಈದೇಶದ ಮೂಲಭೂತವಾದ ಸಮಸ್ಯೆಗಳ ಅರಿವನ್ನು ಕಂಡುಕೊಂಡಿಲ್ಲವೆಂದು ಹೇಳಬೇಕಾಗಿದೆ. ಈ ದೇಶದಲ್ಲಿ ಬಡತನ ಎಲ್ಲಿದೆ, ಗ್ರಾಮಾಂತರ ಪ್ರದೇಶಗಳ ಜನರು ಹೇಗೆ ಬದುಕುತ್ತಿದ್ದಾರೆಂದು ಯೋಚನೆ ಮಾಡುವ ಒಂದೇ ಒಂದು ಸಣ್ಣ ನಿರೂಪಣೆಯನ್ನಾಗಲಿ, ಸೂಚನೆಯನ್ನಾಗಲಿ ರಾಜ್ಯ ಸರ್ಕಾರ ಮಾಡಿಲ್ಲ. ಏತಕ್ಕೆಂದರೆ, ಕೃಷಿ ಆಧಾರಿತ ಕುಟುಂಬಗಳು ಶೇಕಡಾ ೮೦ರಷ್ಟು ಏನಿತ್ತು ಆ ಕುಟುಂಬಗಳ ಅಭಿವೃದ್ಧಿಯಾಗದೆ ಹೋದರೆ ಅಥವಾ ಎಲ್ಲಿಯುವರೆಗೆ ಈ ರಾಜ್ಯದ ಪ್ರತಿಯೊಬ್ಬ ಮನುಷ್ಯನಿಗೆ ಆರ್ಥಿಕ ಸ್ವಾವಲಂಬಿಯಾಗುವುದಿಲ್ಲ ಅಲ್ಲಿಯುವರೆಗೆ ನಮ್ಮ ಯಾವುದೇ ನೀತಿ ನಿರೂಪಣೆಗಳಿಗೆ ಮತ್ತು ಸ್ವಾತಂತ್ರ್ಯಕ್ಕೆ ಅರ್ಥ ಇಲ್ಲವೆಂದು ನಾನು ಭಾವಿಸುತ್ತೇನೆ. ರಾಜ್ಯ ಸರ್ಕಾರ ಗ್ರಾಮೀಣ ಪ್ರದೇಶ ಬದುಕನ್ನು ಹಸನು ಮಾಡಬೇಕಾದರೆ ಕೃಷಿಗೆ ಹೆಚ್ಚು ಒತ್ತಾಸೆಯನ್ನು ಕೊಡಬೇಕಾಗಿತ್ತು. ಕೃಷಿಯ ಜೊತೆಗೆ ಕೃಷಿ ಆಧಾರಿತ ಉಪಕಸುಬುಗಳು ಏನಿತ್ತು ಅವು ಸರ್ಕಾರದ ಗಮನಕ್ಕೇ ಬಂದಿಲ್ಲ. ಅದು ಹೈನುಗಾರಿಕೆ ಇರಬಹುದು, ಕೋಳಿ ಸಾಕಾಣಿಕೆ

೬-೧೦ ಪಿ. ಎಂ.

ಇರಬಹುದು, ಕುರಿ ಸಾಕಾಣಿಕೆ ಇರಬಹುದು ಮತ್ತೊಂದು ಇರಬಹುದು. ಅಂಥ ಕಡೆ ಹೆಚ್ಚು ಹಣ ವಿನಿಯೋಗ ಮಾಡುವುದಾಗಲಿ, ರೈತನಿಗೆ ಇನ್‌ಡೈರೆಕ್ಟ್ ಸೋರ್ಸ್ ಆಫ್ ರವಿನ್ಯೂ ಏನಿತ್ತು ಅದನ್ನು ಅಭಿವೃದ್ಧಿ ಮಾಡುವ ಕಡೆಯಾಗಲಿ ಸರ್ಕಾರ ಗಮನ ಹರಿಸಿದಿದ್ದೇ ಆಗಿದ್ದರೆ ಮುಂಬರುವ ವರ್ಷಗಳಲ್ಲಿ ಆರ್ಥಿಕ ಸ್ವಾವಲಂಬನೆ ಮಾಡುವುದಕ್ಕೆ ರೈತರಿಗೆ ಅವಕಾಶವಾಗುತ್ತಿತ್ತು, ಶೇಕಡ ೮೦ರಷ್ಟು ಜನರು ಆರ್ಥಿಕವಾಗಿ ಸದೃಢರಾಗುತ್ತಿದ್ದರು. ಆಗ ನಮ್ಮ ಧ್ಯೇಯ ಸಾಧನೆಯೂ ಆಗುತ್ತಿತ್ತು. ಸರ್ಕಾರ ಅಫೋರ್‌ಸ್ಟೇಷನ್ ಕಾರ್ಯಕ್ರಮದ ಬಗ್ಗೆ ಯಾವುದೇ ಪ್ರಸ್ತಾಪ ಮಾಡಲಿಲ್ಲ. ಸರ್ಕಾರಗಳು ಬದಲಾವಣೆ ಯಾದ ತಕ್ಷಣ ರಾಜ್ಯದ ಯೋಜನೆಗಳು ಬದಲಾಗಬೇಕೆಂದು ಎಲ್ಲೂ ಹೇಳಿರಲಿಲ್ಲ. ಅದೇರೀತಿ ರಾಜ್ಯ ಸರ್ಕಾರ ಹೋದವರ್ಷ ಕ್ಲಂಪ್ ಎಂಬ ಪೈಲಟ್ ಪ್ರೋಗ್ರಾಮನ್ನು ಪ್ರಾರಂಭ ಮಾಡಿದ್ದರು. ಆ ಬಗ್ಗೆಯೂ ಪ್ರಸ್ತಾಪ ಮಾಡಲಿಲ್ಲ. ಡೀಸಿಲ್ಟೇಷನ್ ಆಫ್ ಟ್ಯಾಂಕ್ಸ್ ಎಂದು ಹೇಳಿದ ಕಡೆ ಸುಮಾರು ೫-೬ ವರ್ಷಗಳಿಂದ ಕೆರೆ ಕಟ್ಟುವುದಕ್ಕೆ ಆರಂಭ ಮಾಡಿ ಯಾವುದೇ ರೀತಿಯಲ್ಲಿ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುವ ಬಗ್ಗೆ ಮಾತನಾಡಿಲ್ಲ ನೀವು ಆರಂಭ ಮಾಡಿರುವ ಸಣ್ಣ ನೀರಾವರಿ ಕೆರೆಗಳನ್ನು ಕಟ್ಟಿ ಮುಗಿಸಬೇಕಾದರೆ ೧೫-೨೦ ವರ್ಷ ಬೇಕಾಗುತ್ತದೆ. ಇದರ ಜೊತೆಗೆ ಕೆರೆ ಆಶ್ರಯದಲ್ಲಿ ಇದ್ದ ಭೂಮಿ ಏನಿತ್ತು ಅದು ತರಿ, ಖುಷ್ಕಿ, ಬಾಗಾಯ್ತು ಇರಲಿ ಆ ಭಾಗಗಳಲ್ಲಿ ವರ್ಷಕ್ಕೆ ೩-೪ ಸಾರಿ ನೀರು ಬಿಡಬಹುದಾದಂಥ ಕೆರೆಗಳು ಇವತ್ತು ಒಂದು ಹದ ನೀರನ್ನು ಕೂಡ ಶೇಖರಣೆ ಮಾಡಲಿಕ್ಕೆ ವಿಫಲವಾಗಿದೆ. ಇನ್ನೊಂದು ಕಡೆ ಅಚ್ಚುಕಟ್ಟು ಪ್ರದೇಶ ವಿಸ್ತೀರ್ಣವಾಗುತ್ತಾ ಹೋಗಿದ್ದು ಮತ್ತು ಇದರ ಬಗ್ಗೆ ರಾಜ್ಯ ಸರ್ಕಾರ ಯಾವುದೇ ರೀತಿ ಆಲೋಚನೆ ಮಾಡದೆ ಇರುವುದು ಬಹುಶಃ ಈ ದೇಶದ ಅಥವಾ ಈ ರಾಜ್ಯದ ದುರಾದೃಷ್ಟ ಎಂದು ಭಾವಿಸುತ್ತೇನೆ. ಇಲ್ಲಿಯವರೆಗೆ ಮಾಡಿರತಕ್ಕ ನೀರಾವರಿ ಯೋಜನೆಗಳು ಏನೇನು ಸಾಲವು. ತಾವೇ ಹೇಳಿರುವ ರೀತಿಯಲ್ಲಿ ಕರ್ನಾಟಕ ರಾಜ್ಯದ ೩೫ ಪರ್ಸೆಂಟ್ ಭೂಮಿಯನ್ನು ನೀರಾವರಿಗೆ ತರಬಹುದು. ಈಗಾಗಲೇ ಆರಂಭವಾಗಿದ್ದು ಒಣ ಭೂಮಿ ಅಥವಾ

ವ್ಯವಸಾಯ ಯೋಜನೆಗಳು ಹಾಗೂ ಭೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಏನು ಮಾಡಬೇಕಾಗಿತ್ತು ಅದನ್ನು ವ್ಯಾಪಕವಾದ ರೀತಿಯಲ್ಲಿ ಹಾಕಿಕೊಳ್ಳಬೇಕಾಗಿತ್ತು. ಈಗಾಗಲೇ ಆರಂಭವಾಗಿರತಕ್ಕ ಕಾರ್ಯಕ್ರಮಗಳು ಮಧ್ಯದಲ್ಲಿ ನಿಂತು ಹೋದರೆ ರಾಜಕೀಯ ಪಕ್ಷಗಳು ಬದಲಾದ ತಕ್ಷಣ ಆ ಭಾಗದ ಜನರಿಗೆ ಅನ್ಯಾಯವಾಗುವುದು ಒಳ್ಳೆಯದಲ್ಲ. ತಾವು ಅನೇಕ ಒಳ್ಳೆಯ ಕಾರ್ಯಕ್ರಮಗಳನ್ನು ಕೈಬಿಟ್ಟಿದ್ದೀರಿ. ಹೋದಸಾರಿ ರಾಜ್ಯಪಾಲರ ಭಾಷಣದಲ್ಲಿ ತೆಂಗು ಅಭಿವೃದ್ಧಿ ಬಗ್ಗೆ ರಾಜ್ಯ ಸರ್ಕಾರ ವಿಶೇಷ ಯೋಜನೆಯನ್ನು ತಯಾರು ಮಾಡುತ್ತದೆಂದು ಹೇಳಿದ್ದರು. ಇವತ್ತಿನ ರಾಜ್ಯಪಾಲರ ಭಾಷಣದಲ್ಲಿ ಆಗಲಿ, ಬಜೆಟ್ ಪ್ರೊಪೋಸಲನಲ್ಲಾಗಲಿ ತೆಂಗಿನ ಬಗ್ಗೆ ಯಾವುದೇ ಮಾತನಾಡಲಿಲ್ಲ. ಈಗಾಗಲೇ ತಂಗಿಗೆ ರೋಗ ಬಂದಿದ್ದು ತೆಂಗಿನ ಅಥವಾ ಕೊಬ್ಬರಿಯ ಧಾರಣೆ ಭೂಮಿಗೆ ಬಿದ್ದು ಹೋಗತಕ್ಕ ಕಾಲದಲ್ಲಾದರೂ ರಾಜ್ಯ ಸರ್ಕಾರ ಆ ಕಡೆ ಸ್ವಲ್ಪವಟ್ಟಿನ ಗಮನ ಕೊಡಲಿಲ್ಲವೆಂದರೆ ಅದು ಕೂಡ ನಮ್ಮ ದುರಾದೃಷ್ಟವೆಂದು ಭಾವಿಸಬೇಕಾಗುತ್ತದೆ. ತಾವು ವಿಶೇಷವಾಗಿ ಪಾಮನ್ನು ಅಭಿವೃದ್ಧಿ ಮಾಡಿ ಎಣ್ಣೆ ತಯಾರಿಸುತ್ತೇವೆ ಎನ್ನುವ ಕಾಲದಲ್ಲಿ ಈ ರಾಜ್ಯದ ಪ್ರಮುಖ ಬೆಳೆಯಾದ ತೆಂಗಿನ ಬಗ್ಗೆ ಯೋಜನೆಯನ್ನು ಮಾಡದೇ ಹೋದರೆ ತೆಂಗು ಬೆಳೆಯುತಕ್ಕ ತುಮಕೂರು, ಹಾಸನ, ಚಿತ್ರದುರ್ಗ ಜಿಲ್ಲೆಯವರೆಗೆ ಮುಂದಿನ ದಾರಿ ಕಾಣದ ಸ್ಥಿತಿ ಬರಬಹುದು. ಇನ್ನು ರಾಜ್ಯಪಾಲರು ಆಸ್ಪತ್ರೆ ಅಭಿವೃದ್ಧಿ ಬಗ್ಗೆ ಮಾತನಾಡಿದ್ದಾರೆ. ಎರಡು ಸಾವಿರದ ವರ್ಷಕ್ಕೆ ಎಲ್ಲರಿಗೂ ಉತ್ತಮವಾದ ಆರೋಗ್ಯ ಕವರೇಜ್ ಕೊಡುತ್ತೇವೆಂದು ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ಪ್ರತಿ ಜಿಲ್ಲೆಯಲ್ಲಿ ೨೫ರಿಂದ ೪೦ಜನ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಈಗಿನ ಸ್ಥಿತಿಯಲ್ಲೇ ನಾವು ವೈದ್ಯಾಧಿಕಾರಿಗಳನ್ನು ನೇಮಿಸಲು ವಿಫಲವಾಗಿರುವವರು ಮುಂದೆ ಎರಡು ಸಾವಿರ ವರ್ಷಕ್ಕೆ ಪ್ರತಿಯೊಬ್ಬ ಮನುಷ್ಯನಿಗೆ ಈ ಕವರೇಜ್ ಕೊಡುವುದಕ್ಕೆ ಎಷ್ಟರ ಮಟ್ಟಿಗೆ ಸಾಧ್ಯ ಎಂದು ಪ್ರಶ್ನೆ ಮಾಡಬೇಕಾಗುತ್ತದೆ. ಜೊತೆಗೆ ಮೆಟರ್ನಿಟಿ ವಾರ್ಡ್ಸ್ ಅಟಾಚ್ ಮಾಡುವ ವಿಷಯ ಹೇಳಿದ್ದಾರೆ. ಯಾರಾದರೂ ವಾಲಂಟರಿಯಾಗಿ ಅಥವಾ ಯಾವುದಾದರೂ ಸಂಸ್ಥೆಗಳು ಒಂದು ಲಕ್ಷ ರೂಪಾಯಿ ಕಾಣಿಕೆಯಾಗಿ ಕೊಡುವುದಾದರೆ ಅಥವಾ ದೇಣಿಗೆ ಕೊಡುವುದಾದರೆ ಅಂಥ ಕಡೆ ಈ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆಂದು ಹೇಳಿದ್ದಾರೆ. ಯಾವುದೇ ರಾಜ್ಯ ಸರ್ಕಾರ ಈ ರೀತಿ ಆಲೋಚಿಸುವುದು ತಪ್ಪು ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ಅಗತ್ಯಗಳಿಗೆ ಅನುಗುಣವಾಗಿ ಅಲ್ಲಿ ಪೂರೈಕೆ ಆಗಬೇಕಾಗುತ್ತದೆ. ಯಾರೋ ಉಳ್ಳವರು ಅಥವಾ ಶಕ್ತಿ ಇರುವವರು ಕೊಡುತ್ತಾರೆ ಎಂಬ ಕಾರಣಕ್ಕೆ ಯಾವುದೋ ಆಸ್ಪತ್ರೆಗೆ ಇಂತಹ ವಾರ್ಡ್‌ಗಳನ್ನು ಅಟಾಚ್ ಮಾಡುವುದು ತಪ್ಪಾಗಬಹುದು. ದಯಮಾಡಿ ಇದನ್ನು ಸರ್ಕಾರ ಪುನರ್ ಪರಿಶೀಲನೆ ಮಾಡಬೇಕಾಗುತ್ತದೆ. ಏಕೆಂದರೆ, ಕೇಳಿದವರಿಗೆ ಅಥವಾ ಉಳ್ಳವರಿಗೆ ಕೊಟ್ಟುಕೊಂಡು ಹೋಗುವುದು ಸರ್ಕಾರಿ ಧೋರಣೆ ಎಂದು ಭಾವಿಸಬಾರದೆಂದು ಅಥವಾ ತಪ್ಪು ಎಂದು ಹೇಳುತ್ತಾ. ಸಹಕಾರಿ ರಂಗದ ಬಗ್ಗೆ ಎರಡು ಮಾತುಗಳನ್ನಾಡಬಯಸುತ್ತೇನೆ. ೧೫ನೇ ತಾರೀಖು ಏನು ಇಲ್ಲಿ ಮುಷ್ಕರ ಆರಂಭವಾಯಿತು ಅದನ್ನು ನಾವು ಬಹಳ ಬಲವಾಗಿ ವಿರೋಧಿಸಿದೆವು, ಹತ್ತಿಕ್ಕಿದೆವು ಅಥವಾ ಸುಧಾರಣೆಗೆ ತಂದೆವು ಎಂದು ಸನ್ಮಾನ್ಯ ಸಚಿವರು ಹೇಳಿದರು. ಅದೇದಿವಸ ಸಹಕಾರ ರಂಗದಲ್ಲಿ ಅಂದರೆ ಡೈರಿವಲಯದಲ್ಲಿ ಒಂದು ಮುಷ್ಕರ ಆರಂಭವಾಯಿತು ನಮ್ಮ ದುರಾದೃಷ್ಟ ರಾಜ್ಯ ಸರ್ಕಾರ ರೂಲ್ ೩೦ಬಿ ಕೆಳಗೆ ನಿರ್ದೇಶನ ಕೊಡುವ ಸ್ಥಿತಿಗೆ ಈ ರಾಜ್ಯದ ಆಡಳಿತ ಬಂದು. ಅವರು ೫ ವರ್ಷಕ್ಕೆ ಬಡ್ತಿ ಕೊಡಿ, ಎರಡು ವರ್ಷ ಸೇವೆ ಸಲ್ಲಿಸಿದವರನ್ನು ಖಾಯಂ ಮಾಡಿ ಎಂದು ಒಂದು ಕಡೆ ಹೇಳುವುದು, ಇನ್ನೊಂದು ಕಡೆ ಡೈರಿ ವಲಯದಲ್ಲಿ ಉದ್ಯೋಗಿಗಳು ಬಹಳ ಜಾಸ್ತಿ ಇದ್ದಾರೆ ಅವರನ್ನು ತೆಗೆದುಹಾಕಿ ಎಂದು ತಾವು ಇಲ್ಲಿ ದ್ವಂದ್ವ ರೀತಿಯಲ್ಲಿ ಉಚ್ಚಾರ ಮಾಡುತ್ತಿದ್ದೀರಿ, ಈ ಕೆಳಗೆ ಸಹಕಾರಿ ರಂಗ ಕೆಲಸ ಮಾಡುವುದು ಬಹಳ ಕಷ್ಟವಾಗಬಹುದು. ರಾಜ್ಯ ಸರ್ಕಾರದ ವತಿಯಿಂದ ನಿರ್ದೇಶನಗಳನ್ನು ಕೊಡುವ ಮೊದಲು ಚೆನ್ನಾಗಿ ಆಲೋಚನೆ ಮಾಡಿ ಕೊಟ್ಟರೆ ಯಾವುದೇ ಕ್ಷೇತ್ರವನ್ನು ಬೆಳೆಸುವುದಕ್ಕೆ ಅನುಕೂಲವಾಗಬಹುದು. ವಿಕೇಂದ್ರೀಕೃತ ವ್ಯವಸ್ಥೆ ಬಗ್ಗೆ ಮಾತನಾಡುವುದಕ್ಕಿಂತ ಮುಂಚೆ ಅದರ ಮೂಲಭೂತ ತತ್ವ ಅರ್ಥ ಮಾಡಿಕೊಂಡರೆ ಒಳ್ಳೆಯದೆಂದು ಹೇಳುತ್ತೇನೆ. ಜಿಲ್ಲಾ ಪರಿಷತ್ತಿನ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಜಿಲ್ಲಾ ಪರಿಷತ್ತಿನಲ್ಲಿ ಈ ವರ್ಷ ನಮಗೆ ಕೊಟ್ಟಷ್ಟು ಹಣ ಕೂಡ ಖರ್ಚು ಮಾಡಲಿಕ್ಕೆ ಆಗಲಿಲ್ಲ ಎಂದು ಹೇಳಿದ್ದಾರೆ. ನಾನು ಕೂಡ ಜಿಲ್ಲಾ ಪರಿಷತ್ತಿನ ಸದಸ್ಯನಾಗಿ ಕೆ.ಡಿ.ಬಿ. ಮೀಟಿಂಗ್ ಅಟೆಂಡ್ ಮಾಡಿದ್ದೇನೆ. ಸರ್ಕಾರದಿಂದ ಮಾರ್ಚಿ ತಿಂಗಳವರೆಗೆ ೪ ಲಕ್ಷದ ೫ ಸಾವಿರ ರೂಪಾಯಿ ಅನುದಾನ ಕೊಡಬೇಕಾಗಿದ್ದರೆ ಕೊಟ್ಟಿರುವುದು ಕೇವಲ ೨ ಲಕ್ಷ ಚಿಲ್ಲರೆ ರೂಪಾಯಿಗಳು ಮಾತ್ರ. ಆದ್ದರಿಂದ ಯಾವುದೇ ಜಿಲ್ಲಾ ಪರಿಷತ್ತು ಅಥವಾ ಮಂಡಲ ಪಂಚಾಯಿತಿಯವರನ್ನು ೪ ಲಕ್ಷ ೫ ಸಾವಿರ ರೂಪಾಯಿಗಳನ್ನು ಏತಕ್ಕೆ ಖರ್ಚು ಮಾಡಲಿಲ್ಲ ಎಂದು ಕೇಳುವುದು ತಪ್ಪಾಗುತ್ತದೆ, ಬೇರೆಯವರನ್ನು ದೂಷಣೆ ಮಾಡುವ ಮುನ್ನ ನಮ್ಮಲ್ಲಿರುವ ತಪ್ಪುಗಳನ್ನು ಅರಿತುಕೊಳ್ಳುವಷ್ಟು ದೊಡ್ಡತನವನ್ನು ನಾವು ಕಲಿಯಬೇಕು. ನಾನು ತಿಳಿದಮಟ್ಟಿಗೆ, ಇಡೀ ರಾಜ್ಯದಲ್ಲಿ ಯಾವುದೇ ಇಲಾಖೆ ಪೂರ್ಣ

ಅನುದಾನವನ್ನು ಬಳಸಿಲ್ಲ. ಫಾರೆಸ್ಟ್ ಇಲಾಖೆಗೆ ಶೇಕಡ ೨೫ರಷ್ಟು ಹಣವನ್ನು ಏನು ವಿನಿಯೋಗ ಮಾಡಬೇಕಾಗಿತ್ತು ಅದು ಕುಂಠಿತವಾಗಿದೆ. ಸರ್ಕಾರದವರು ಈ ಕಡೆ ಹೆಚ್ಚು ಆಸಕ್ತಿ ವಹಿಸಬೇಕೆಂದು ಕೇಳಿಕೊಂಡು ಸೋಷಿಯಲ್ ಫಾರೆಸ್ಟ್ರಿ ಬಗ್ಗೆ ಬಂದ ಹಣದ ಬಗ್ಗೆ ಕೆಲವು ಕಡೆ ದ್ವಂದ್ವ ಇದೆ. ಕೆಲವು ಕಡೆ ಸೋಷಿಯಲ್ ಫಾರೆಸ್ಟ್ರಿ ಎಂದು ಮಾಡಿ ಅದೇ ಕೆಲವು ಕಡೆ ಸೋಷಿಯಲ್ ಫಾರೆಸ್ಟ್ರಿಯನ್ನು ಆರ್.ಎಲ್.ಇ.ಜಿ.ಪಿ. ಕಡೆ ತಂದು ದ್ವಂದ್ವ ಇದ್ದು ಇದು ಮುಂದುವರೆಯುತ್ತದೊ ಇಲ್ಲವೋ ಎಂಬ ಸಂದಿಗ್ಧ ಪರಿಸ್ಥಿತಿಯನ್ನು ನೀವು ಸೃಷ್ಟಿ ಮಾಡಿದ್ದೀರಿ. ಇದರ ಬಗ್ಗೆ ತಾವು ಖಚಿತವಾದ ನಿಲುವನ್ನು ತಾಳಬೇಕು. ಫಾರೆಸ್ಟ್ ಮತ್ತು ತೋಟಗಾರಿಕೆಗೆ ತಾವು ಹೆಚ್ಚು ಗಮನ ಕೊಡದೇಹೋದರೆ ಈ ದೇಶದ ಅಭಿವೃದ್ಧಿ ಕಷ್ಟವಾಗಬಹುದು. ತಾವು ಏನಾದರೂ ಮೂಲಭೂತವಾಗಿ ಯೋಜನೆ ಮಾಡಬೇಕು ಎಂದರೆ ಆ ಯೋಜನೆಯನ್ನು ಚುನಾವಣಾ ದೃಷ್ಟಿಯಿಂದ ಮಾಡದೆ ನಾಡಿನ ಅಭ್ಯುದಯದ ದೃಷ್ಟಿಯಿಂದ ಮಾಡಿ ಎಂದು ಕೇಳಿಕೊಂಡು ಈ ರಾಜ್ಯಪಾಲರ ಭಾಷಣದಲ್ಲಿ ರಾಜ್ಯಕ್ಕೆ ಅನುಕೂಲವಾಗುತ್ತದೆಂದು ಯಾವುದೇ ರೀತಿಯಲ್ಲಿ ಭಾವಿಸುವುದು ಕಷ್ಟವಾಗುತ್ತದೆ. ತಾವು ಅಭಿವೃದ್ಧಿ ಕಡೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಯಾವುದೋ ಪಕ್ಷದವರು ಹಿಂದೆ ಮಾಡಿ ಹೋದರು ಎಂದು ಸಬೂಬು ಹೇಳಿ ಕೊಂಡು ಬದಲಾವಣೆ ಮಾಡದೇ ಇರಬಾರದು. ಬದಲಾವಣೆ ಎಂದರೆ ಸಂಪೂರ್ಣ ಬದಲಾವಣೆ ಎಂದು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ಇವತ್ತಿನ ಬದುಕು ಬದಲಾವಣೆ ಕಡೆ ಹೋಗುತ್ತಾ ಇರುವುದರಿಂದ ಪ್ರತಿ ಹಂತದಲ್ಲಿ ನಮ್ಮ ಪ್ರತಿ ಹೆಜ್ಜೆಯನ್ನು ಜನ ಗುರುತಿಸುತ್ತಿದ್ದಾರೆ. ದಯಮಾಡಿ ಜನರ ಆಶೋತ್ತರಗಳಿಗೆ ಸ್ಪಂದಿಸುವ ಒಂದು ಸರ್ಕಾರವನ್ನು ತಾವು ನಡೆಸಿಕೊಡಬೇಕು. ಹೆಚ್ಚಾಗಿ ತೋಟಗಾರಿಕೆ ಬೆಳೆ ಕಡೆ ಅದರಲ್ಲೂ ಅಡಿಕೆ ಮತ್ತು ತೆಂಗಿನ ಬೆಳೆ ಏನು ನಾಶವಾಗುತ್ತಿದೆ ಅದನ್ನು ಉಳಿಸಿಕೊಳ್ಳುವುದಕ್ಕೆ ತಾವು ಆದ್ಯವಾಗಿ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕು. ಕೊಬ್ಬರಿ ಧಾರಣೆ ೧೬೦೦ ರೂಪಾಯಿ ನಿಗದಿಯಾಗಿದ್ದರೂ ಅದು ಸಿಗದಂಥ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಅದರ ಬಗ್ಗೆ ತಾವು ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸಹಕಾರಿ ರಂಗದ ಕೆಳಗೆ ಮತ್ತು ವಿಕೇಂದ್ರೀಕೃತ ಜಿಲ್ಲಾ ಪರಿಷತ್ ವ್ಯವಸ್ಥೆ ಕೆಳಗೆ ಕೈಹಾಕುವ ಮೊದಲು ಅವರೂ ಕೂಡ ತಮ್ಮಂತೆ ಜನರ ಪ್ರತಿನಿಧಿಗಳು. ಅವರ ಜೊತೆಯೂ ಮ್ಯಾಂಡೇಟ್ ಇದೆ ಎಂಬ ಭಾವನೆಯನ್ನು ತಾವು ತಾಳ ಬೇಕೆಂದು ಪ್ರಾರ್ಥಿಸುತ್ತಾ ಇವತ್ತು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ,

ಅಧ್ಯಕ್ಷರು.—ಈಗ ಸದನ ಮುಂದುವರೆದು ನಾಳೆ ಬೆಳಗ್ಗೆ ೯ ಘಂಟೆಗೆ ಮತ್ತೆ ಸಮಾವೇಶವಾಗುತ್ತದೆ.

(ಸದನವು ಆರು ಗಂಟೆ ೪ ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ದಿನಾಂಕ ೩-೪-೧೯೯೦ರಂದು ಬೆಳಗ್ಗೆ ೯ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)